ಜನಶಕ್ತಿ ರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 ಸಂಚಿಕೆ 27 ಜೂನ್30-ಜುಲೈ 6, 1997 ಬೆಲೆ ರೂ. 2.00



ಕೇಂದ್ರ ಸರಕಾರದ ಖೋತಾ - ಪಡಿತರ ಅಂಗಡಿಗಳಲ್ಲಿ ಮೋಸ

ಆಹಾರಧಾನ್ಯಗಳಿಗಾಗಿ ಕಾರ್ಡುದಾರರ ಪರದಾಟ

ಆಹಾರ ನಿಗಮದಿಂದಲೂ ಮೋಸ, ಪಡಿತರ ಅಂಗಡಿಗಳಲ್ಲೂ ಮೋಸ, ಕೇಂದ್ರ ಸರಕಾರದಿಂದಲೂ ಖೋತಾ, ಗಂಡ-ಹೆಂಡಿರ ನಡುವೆ ಕೂಸು ಬಡವಾಗಿದೆ. ರಾಜ್ಯದ ಬಡ ಕಾರ್ಡುದಾರರು ಅಕ್ಕಿ-ಗೋಧಿಗಾಗಿ ಪರದಾಡುವಂತಹ ಸ್ಥಿತಿಯನ್ನು ಉಂಟುಮಾಡಲಾಗಿದೆ. ಬಡವರ ಹೆಸರಿನಲ್ಲೇ ಬಡವರಿಗೆ ಮೋಸ ಮಾಡುವ ಹುನ್ನಾರ ನಡೆದಿದೆ

ದೇವೇಗೌಡರು ಪ್ರಧಾನ ಮಂತ್ರಿಯಾಗಿದ್ದಾಗಲೇ ಕೇಂದ್ರದ ಸಂಯುಕ್ತ ರಂಗ ಸರಕಾರ ಅತಿ ಬಡ ಕುಟುಂಬದ ಹಸಿರು ಕಾರ್ಡುದಾರರಿಗೆ 10 ಕೆ.ಜಿ. ಅಕ್ಕಿ ಮತ್ತು ಗೋಧಿಯನ್ನು ವಿತರಣೆ ಮಾಡುವ ಯೋಜನೆಯನ್ನು ರೂಪಿಸಿ ಜನವರಿ 21 ರಿಂದಲೇ ಅದನ್ನು ಜಾರಿಯಲ್ಲಿ ತರಬೇಕೆಂದು ನಿರ್ದೇಶಿಸಿತ್ತು. ಅಕ್ಕಿಯನ್ನು ಕೆ.ಜಿ.ಗೆ 3.50 ರೂಪಾಯಿಗೂ ಗೋಧಿಯನ್ನು ಕೆಜಿಗೆ 2.50 ರೂಪಾಯಿಗೂ ನೀಡಬೇಕೆಂದು ಆದೇಶಿಸಿತ್ತು. ಇಷ್ಟು ಕಡಿಮೆ ಬೆಲೆಯಲ್ಲಿ ಅಕ್ಕಿ ಮತ್ತು ಗೋಧಿಯನ್ನು ವಿತರಣೆ ಮಾಡಬೇಕಾದರೆ ರಾಜ್ಯ ಸರಕಾರ ಕೇಂದ್ರದಿಂದ ಆಹಾರ ಧಾನ್ಯ ಕೊಂಡುಕೊಳ್ಳಲು ಹೆಚ್ಚು ಹಣ ಖರ್ಚು ಮಾಡಬೇಕಾಗಿತ್ತು. ಅಕ್ಕಿ-ಗೋಧಿ ವಿತರಣೆಗೆ ಹೆಚ್ಚು ಸಬ್ಸಿಡಿ ನೀಡಲು ಸರಕಾರ ಹಿಂದೇಟು ಹಾಕುತ್ತಿದ್ದು ಹೊಸ ವಿತರಣ ಯೋಜನೆ ಹಲವಾರು ರಾಜ್ಯ ಸರಕಾರಗಳು ಜಾರಿಯಲ್ಲಿ ತರಲು ವಿಳಂಬ ಮಾಡಿದರು. ಕೊನೆಗೂ ಎಡ ಪಕ್ಷಗಳು ಮತ್ತಿತರ ಶಕ್ತಿಗಳ ಒತ್ತಡದಿಂದಾಗಿ ಜೂನ್ 1 ರೊಳಗೆ ಈ ಹೊಸ ವಿತರಣಾ ಪದ್ಧತಿಯನ್ನು ಜಾರಿಯಲ್ಲಿ ತರಬೇಕೆಂದು ಕೇಂದ್ರ ಸರಕಾರ ಪಟ್ಟು ಹಿಡಿದ ಕಾರಣ ನಮ್ಮರಾಜ್ಯದಲ್ಲಿ ಈ ಹೊಸ ಪದ್ಧತಿಯನ್ನು ಜಾರಿಯಲ್ಲಿ ತರಲಾಗುವುದೆಂದು ಸರಕಾರ ಪ್ರಕಟಿಸಿದೆ. ಕೇಂದ್ರ ಸರಕಾರದ ನೀತಿಯಂತೆ ಹಸಿರು ಕಾರ್ಡಿನವರಿಗೆ ಅಗ್ಗದ ದರದಲ್ಲಿ 10 ಕೆಜಿ ಅಕ್ಕಿ-ಗೋಧಿ ವಿತರಣೆ ಮಾಡುವಾಗ ಸರಕಾರದ ಮೇಲೆ ಹೆಚ್ಚಿನ ಸಬ್ಸಿಡಿ ಭಾರ ಬೀಳುತ್ತಿದ್ದು ಅದನ್ನು ಕಡಿಮೆಗೊಳಿಸುವ ದೃಷ್ಟಿಯಿಂದ , ಇತರ ಕಾರ್ಡುದಾರರಿಗೆ ವಿತರಣೆ ಮಾಡುವ ಸಕ್ಕರೆ, ಅಕ್ಕಿ, ಗೋಧಿಯ ಬೆಲೆಯನ್ನು ಹೆಚ್ಚಿಸುವ ವಿಚಾರದಲ್ಲಿರುವ ಸರಕಾರ ಇದಕ್ಕೆ ಜನರಿಂದ ಪ್ರತಿರೋಧ ಉಂಟಾಗಬಹುದೆಂಬ ಅಂಜಿಕೆಯಿಂದ ಬೆಲೆ ನಿರ್ಧರಿಸಲು ತಡ ಮಾಡುತ್ತಿದೆ. ಇದರಿಂದ ನ್ಯಾಯ ಬೆಲೆ ಅಂಗಡಿಗಳಲ್ಲಿ ಆಹಾರ ಧಾನ್ಯ ವಿತರಣೆಯಾಗದೆ ಕಾರ್ಡುದಾರರು ಪರದಾಡುವಂತಾಗಿದೆ. ಜನ ರೊಚ್ಚಿಗೆದ್ದಿದ್ದಾರೆ.

ಹಸಿರು ಕಾರ್ಡು ಇಲ್ಲದ ಇತರ ಬಡ ಕುಟುಂಬ ಮತ್ತು ಮಧ್ಯಮ ವರ್ಗದವರು ಈ ಹೊಸ ವಿತರಣ ಪದ್ಧತಿಯಿಂದಾಗಿ ವಂಚಿತರಾಗಿದ್ದಾರೆ. ಕೇಸರಿ ಮತ್ತು ಪೋಟೋ ಕಾರ್ಡು ದಾರರಿಗೆ ಅಕ್ಕಿ ಮತ್ತು ಗೋಧಿಯ ಪ್ರಮಾಣ ಗಣನೀಯವಾಗಿ ಕಡಿಮೆಯಾಗಿದೆ. ಇವರಿಗೆಲ್ಲ ಪ್ರತಿ ತಿಂಗಳು 2 ಕೆ.ಜಿ. ಅಕ್ಕಿ, 2 ಕೆ.ಜಿ. ಗೋಧಿ ಮಾತ್ರ ದೊರೆಯಲಿದೆ. ಇದರ ಬೆಲೆ ಮಾತ್ರ ಹೆಚ್ಚಾಗಲಿದೆ.

ದೇವೇಗೌಡರು ಪ್ರಧಾನ ಮಂತ್ರಿಯಾಗಿದ್ದಾಗ ಎಲ್ಲಾ ರಾಜ್ಯಗಳ ಮುಖ್ಯ

ಎನ್.ಕೆ.ಉಪಾಧ್ಯಾಯ

ಮಂತ್ರಿಗಳ ಸಭೆಯಲ್ಲಿ ತಮ್ಮ ಸರಕಾರದ ಈ ನಿಲುವನ್ನು ಪ್ರಕಟಿಸಿದಾಗ ಕೇರಳ ಮತ್ತು ಪಶ್ಚಿಮ ಬಂಗಾಳ ಸರಕಾರಗಳು ಹಸಿರು ಕಾರ್ಡು ಹೊಂದದವರ ರೇಶನ್ ಕಡಿತವನ್ನು ವಿರೋಧಿಸಿದ್ದರು. ಪಡಿತರ ಅಂಗಡಿಗಳಲ್ಲಿ ಬೇಳೆ, ಎಣ್ಣೆಗಳಂಥ ಅತ್ಯಾವಶ್ಯಕ ವಸ್ತುಗಳನ್ನು ಕಡಿಮೆ ದರದಲ್ಲಿ ಮಾರುವಂಥ ಬದ್ಲಿ ವ್ಯವಸ್ಥೆಯನ್ನು ಸೂಚಿಸಿದ್ದರು. ಪಶ್ಚಿಮ ಬಂಗಾಳದಲ್ಲಿ ಜ್ಯೋತಿ ಬಸು ಸರಕಾರ ಅದನ್ನು ಜಾರಿಯಲ್ಲಿ ತಂದಿದೆ. ಅಂಥ ಪ್ರತಿರೋಧಗಳ ಮಧ್ಯೆ ಈ ವಿತರಣ ವ್ಯವಸ್ಥೆ ಜಾರಿಯಲ್ಲಿ ಬಂದಿದೆ. ಕೇರಳ, ಪಶ್ಚಿಮಬಂಗಾಳ, ಪಂಜಾಬ್ ರಾಜ್ಯಗಳು ತಮ್ಮದೇ ಆದ ಧಾನ್ಯ ಸಂಗ್ರಹಣೆಯ ಮೂಲಕ ಹಸಿರು ಕಾರ್ಡುದಾರರಲ್ಲದವರಿಗೂ ಮೊದಲಿನಂತೆಯೇ ಯಾರಿಗೂ ಅನ್ಯಾಯವಾಗದ ರೀತಿಯಲ್ಲಿ ತಂತಮ್ಮ ಪಡಿತರ ವ್ಯವಸ್ಥೆಯನ್ನು ಮುಂದುವರಿಸಿದ್ದಾರೆ. ತಂತಮ್ಮ ರಾಜ್ಯಗಳಿಗೆ ಹೆಚ್ಚು ಅಕ್ಕಿ-ಗೋಧಿ ಒದಗಿಸಬೇಕೆಂದು ಒತ್ತಾಯಿಸುತ್ತಿದ್ದಾರೆ.

ಕರ್ನಾಟಕ ರಾಜ್ಯಕ್ಕೆ ಕೇಂದ್ರದಿಂದ ಶೇ 50 ರಷ್ಟು ಆಹಾರ ಧಾನ್ಯ ಖೋತಾ ಆಗಿದೆ. ಆದ್ದರಿಂದ ಸರಕಾರ ಹಸಿರುಕಾರ್ಡುದಾರರಲ್ಲದವರು ರೇಶನನ್ನು 2 ಕೆಜಿಗೆ ಸೀಮಿತ ಗೊಳಿಸಿದೆ. ಕೇರಳ ರಾಜ್ಯದಂತೆ ಅಕ್ಕಿ-ಗೋಧಿಯನ್ನು ಲೇವಿ ಮೂಲಕ ಖರೀದಿ ಸಲು ಪಡಿತರ ಅಂಗಡಿಗಳ ಮೂಲಕ ಎಲ್ಲಾ ಕಾರ್ಡುದಾರರಿಗೂ ಮೊದಲಿನಂತೆಯೇ ವಿತರಿಸುವ ಗೋಜಿಗೆ ಹೋಗದೆ ಜನರಿಗೆ ಅನ್ಯಾಯವೆಸಗುತ್ತಿದೆ.

ಕೇಂದ್ರ ಮತ್ತು ರಾಜ್ಯ ಸರಕಾರಗಳ ಅನಿಶ್ಚಿತ ಧೋರಣೆಯಿಂದಾಗಿ ಮಾರ್ಕೇಟಿನಲ್ಲಿ ಆಹಾರ ಧಾನ್ಯಗಳ ಬೆಲೆ ವಿಪರೀತ ಹೆಚ್ಚಾಗಿದೆ. ಉತ್ತಮ ಮಳೆಯಾಗುವಾಗ ರೈತರು ತಮ್ಮ ಹಗೆಗಳಲ್ಲಿ ಗೋದಾಮುಗಳಲ್ಲಿ ಮುಚ್ಚಿಟ್ಟಿರುವ ಆಹಾರ ಧಾನ್ಯವನ್ನು ಹೊರ ತೆಗೆದು ಮಾರಾಟ ಮಾಡುತ್ತಾರೆ. ಈಗ ನಿಜವಾಗಿಯೂ ಆಹಾರ ಧಾನ್ಯದ ಬೆಲೆ ಮಾರ್ಕೇಟಿನಲ್ಲಿ ಇಳಿಮುಖವಾಗಿರುತ್ತದೆ. ಆದರೆ ಸರಕಾರದ ಅಸಮರ್ಪಕ ನೀತಿ ಆಹಾರ ಧಾನ್ಯಗಳ ಬೆಲೆ ಹೆಚ್ಚಳಕ್ಕೆ ಕಾರಣೀಭೂತವಾಗಿ ವ್ಯಾಪಾರಸ್ಥರಿಗೆ ಅನುಕೂಲ ಮಾಡಿಕೊಡುತ್ತಿದೆ. ಜನರಿಗೆ ಅನ್ಯಾಯವೆಸಗುತ್ತಿದೆ. ಪಡಿತರ ವ್ಯವಸ್ಥೆಯ ಕುರಿತು ಜನರಲ್ಲಿ, ವಿಶ್ವಾಸವೇ ಇಲ್ಲದಂತಾಗಿದೆ.

''ಸಕ್ಕರೆಯ ಬೆಲೆಯೂ ಹೆಚ್ಚಾಗಿದೆ. 2 ಕೆಜಿ ಗೋಧಿ-ಅಕ್ಕಿಗಾಗಿ ಗಂಟೆಗಟ್ಟಲೇ ಸಾಲಾಗಿ ನಿಲ್ಲುವುದಾದರೂ ಯಾಕೆ?'' ಎಂದು ಹೇಳಿ ಸಾರ್ವಜನಿಕರು ನಿಟ್ಟುಸಿರು ಬಿಡುವಂಥ ಪರಿಸ್ಥಿತಿ ಬಂದಿದೆ.

ಈ ಮಧ್ಯೆ ಸರಕಾರ ಇನ್ನೊಂದು ಗೊಂದಲ ಉಂಟುಮಾಡಿದೆ. ಬೆಳಗಾವಿ, ಬಿಜಾಪುರ, ಬೀದರ್, ಗುಲ್ಬರ್ಗ ಜಿಲ್ಲೆಗಳ ಕೇಸರಿ ಮತ್ತು ಪೋಟೋ ಪಡಿತರ ಕಾರ್ಡುದಾರರಿಗೆ ಹೊಸ ಆದೇಶದ ಪ್ರಕಾರ ಗೋಧಿ ಮಾತ್ರ ದೊರಕು ತ್ತದಂತೆ, ಅಕ್ಕಿಯಿಲ್ಲವಂತೆ, ಇನ್ನುಳಿದ 16 ಜಿಲ್ಲೆಗಳು ಮತ್ತು ಬೆಂಗಳೂರು ನಗರ ಅನೌ ಪಚಾರಿಕ

ಪುಟ 6 ನೋಡಿ


ಅಬ್ಬಾ! ಇದೆಂತಹಾ ಅವನತಿ!

ನಲ್ವತ್ತು ದಿನಗಳಷ್ಟು ದೀರ್ಘ ಸಮಯ ತಗೊಂಡ ಬಿಹಾರದ ರಾಜ್ಯಪಾಲರು ಕೊನೆಗೂ ಮುಖ್ಯಮಂತ್ರಿ ಲಾಲೂ ಪ್ರಸಾದ್ ಯಾದವರವರ ಮೇಲೆ 950 ಕೋಟಿ ರೂಗಳ ಮೇವು ಹಗರಣದಲ್ಲಿ ಮೊಕದ್ದಮೆ ನಡೆಸಲು ಸಿಬಿಐಗೆ ಅನುಮತಿ ನೀಡಿದರು. ಆದರೂ ಲಾಲೂ ಪ್ರಸಾದ್ ಯಾದವ್ ರಾಜೀನಾಮೆ ನೀಡಿಲ್ಲ. ಮೇವು ಹಗರಣದ ಇನ್ನೊಬ್ಬ ಆಪಾದಿತ ಕೇಂದ್ರ ಸರಕಾರದ ಮಂತ್ರಿ ಚಂದ್ರಶೇಖರ್ ಪ್ರಸಾದ್ ವರ್ಮಾ ಪ್ರಧಾನ ಮಂತ್ರಿಗಳು ರಾಜೀನಾಮೆ ಕೇಳಿದಾಗ ಕೊಟ್ಟರು. ಆದರೂ ತಾನು ಅಧಿಕಾರದಿಂದಳಿಯೆ ಎಂದರು ಲಾಲೂ ಪ್ರಸಾದ್ ಯಾದವ್ ವಿಶೇಷ ವಿಚಾರಣಾ ನ್ಯಾಯಾಲಯ ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ವಜಾ ಮಾಡಿತು. ಆದರೂ ಲಾಲೂರವರು ಕುರ್ಚಿ ಬಿಡಲು ನಿರಾಕರಿಸಿದರು. ಇದೇ ರೀತಿ ನಿರೀಕ್ಷಣಾ ಜಾಮೀನಿನ ಅರ್ಜಿ ತಿರಸ್ಕೃತವಾಗಿ ಹೈಕೋರ್ಟ್ ಮೆಟ್ಟಿಲು ಹತ್ತಿರ ಮಾಜಿ ಮುಖ್ಯಮಂತ್ರಿ ಜಗನ್ನಾಥ್ ಮಿಶ್ರಾರವರಿಗೆ ಕೊನೆಗೂ ನಿರೀಕ್ಷಣಾ ಜಾಮೀನು ಸಿಕ್ಕಿರುವುದು ಲಾಲೂರವರಿಗೆ ಹೊಸ ಆಸೆ ಚಿಗುರಿಸಿದೆಯಂತೆ. ಅವರೂ ಪಾಟ್ನಾ ಹೈಕೋರ್ಟ್ ಮೊರೆ ಹೋಗಿದ್ದಾರೆ. ಜಪ್ಪಯ್ಯ ಎಂದರೂ ಮುಖ್ಯಮಂತ್ರಿ ಕುರ್ಚಿ ಬಿಡೆ ಎನ್ನುತ್ತಿದ್ದಾರೆ.

ಆದರೆ ಅವರ ಈ ವರ್ತನೆ ಜನತಾದಳದ, ಮಾತ್ರವಲ್ಲ ಅದು ಭಾಗವಾಗಿರುವ ಸಂಯುಕ್ತ ರಂಗದ ಪ್ರತಿಷ್ಠೆಗೆ ಭಾರೀ ಕುಂದು ತರುತ್ತಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಖೇದ ವ್ಯಕ್ತಪಡಿಸಿದೆ. ಜನತಾದಳ ಭ್ರಷ್ಟಾಚಾರದ ವಿರುದ್ಧ ಬಲವಾದ ದನಿಯೆತ್ತಿದ ಪಕ್ಷ. ಅದರ ಹಿಂದಿನ ಅಧ್ಯಕ್ಷರು ಹವಾಲಾ ಆಪಾದನೆಯ ಮೋಡ ಮುಸುಕಿದಕ್ಕ ರಾಜೀನಾಮೆ ಕೊಡಬೇಕಾಗಿ ಬಂತು. ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರವನ್ನು ಕೊನೆಗೊಳಿಸುವ ಬದ್ಧತೆ ಸಂಯುಕ್ತ ರಂಗದ 'ಸಮಾನ ಕನಿಷ್ಠ ಕಾರ್ಯಕ್ರಮ'ದ ಒಂದು ಮುಖ್ಯ ಅಂಶ. ಈ ಕಾರಣದಿಂದಲೇ ಸಂಯುಕ್ತ ರಂಗ ಸರಕಾರ ಮಂತ್ರಿಗಳು ತಮ್ಮ ಇಷ್ಟಾನಿಷ್ಟದಂತೆ ಬಳಸಲು ಇದ್ದ ಕೋಟಾಗಳನ್ನು ರದ್ದು ಮಾಡಿತು. ಯಾವುದೇ ಭ್ರಷ್ಟಾಚಾರದ ಆಪಾದನೆಗೊಳಗಾದ ಯಾರನ್ನೂ ಮಂತ್ರಿಮಂಡಲದಲ್ಲಿ ಸೇರಿಸಲಿಲ್ಲ. ಆದರೆ ಸಂಯುಕ್ತರಂಗ ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರದ ವಿರುದ್ಧ ಹೋರಾಟದಲ್ಲಿ ಹೀಗೆ ಗಳಿಸಿರುವ ಜನತೆಯ ವಿಶ್ವಾಸವನ್ನು ಈಗ ಲಾಲೂರವರ ವರ್ತನೆಯಿಂದಾಗಿ ಹಾಗೂ ಅವರನ್ನು ಶಿಸ್ತಿಗೊಳಪಡಿಸಲಾಗದ ಚಂಚಲತೆಯಿಂದಾಗಿ ಕಳಕೊಳ್ಳಬೇಕಾದ ಅಪಾಯ ಉಂಟಾಗಿದೆ ಎಂದು ಸಿಪಿಐ(ಎಂ) ಹಾಗೂ ಇತರ ಎಡಪಕ್ಷಗಳು ಎಚ್ಚರಿಸಿವೆ.

ಪ್ರಧಾನ ಮಂತ್ರಿ ಇಂದ್ರಕುಮಾರ್ ಗುಜ್ರಾಲ್ ಸೇರಿದಂತೆ ಜನತಾದಳದ ರಾಷ್ಟ್ರೀಯ ಮುಖಂಡತ್ವ ತಕ್ಷಣ ಮಧ್ಯಪ್ರವೇಶಿಸಿ ಲಾಲೂ ಪ್ರಸಾದ್ ಯಾದವ್ ಮತ್ತು ಆ ಹಗರಣದಲ್ಲಿ ಆಪಾದನೆಗಳನ್ನು ಎದುರಿಸುತ್ತಿರುವ ಇತರ ಇಬ್ಬರು ಮಂತ್ರಿಗಳೂ ರಾಜೀನಾಮೆ ಕೊಡುವಂತೆ ಮಾಡಬೇಕು ಎಂದು ಸಿಪಿಐ(ಎಂ) ಹಾಗೂ ಇತರ ಎಡಪಕ್ಷಗಳು ಆಗ್ರಹಪಡಿಸಿವೆ. ಬಿಹಾರದಲ್ಲಿ ನಾಲ್ಕು ಎಡ ಪಕ್ಷಗಳು ಸೇರಿರುವ 15 ಪಕ್ಷಗಳ ಭ್ರಷ್ಟಾಚಾರ ವಿರೋಧಿ ವೇದಿಕೆಯ 48 ಗಂಟೆಗಳ ಬಿಹಾರ್ ಬಂದ್ ಕರೆಗೆ ರಾಜ್ಯದಲ್ಲಿ ಭಾರೀ ಸ್ಪಂದನ ದೊರೆತಿದೆ. ಮಹಿಳೆಯರೂ ಸೇರಿದಂತೆ ಎರಡುಸಾವಿರ ಮಂದಿಯನ್ನು ಬಂಧಿಸಿದರೂ ಬಂದ್ ಯಶಸ್ವಿಯಾಗಿ ನಡೆದಿರುವುದು ಬಿಹಾರದ ಜನಾಭಿಪ್ರಾಯವನ್ನು ಬಿಂಬಿಸಿರುವ ಸಂಗತಿ ಕೂಡ.

ಕೋಟ್ಯಾಂತರ ಬಡ ಭಾರತೀಯರು ಹೊಸ ಆರ್ಥಿಕ ನೀತಿಗಳ ಧಾಳಿಯಡಿ ಸಿಲುಕಿ ನಲುಗುತ್ತಿರುವಾಗ, ನರಳುತ್ತಿರುವಾಗ ಸಾರ್ವಜನಿಕ ಸಂಪತ್ತಿನ ಬೃಹತ್ ಲೂಟಿಯಾಗುತ್ತಿರುವುದು ನಿಜಕ್ಕೂ ಅತ್ಯಂತ ನಾಚಿಕೇಗೇಡಿನ ಸಂಗತಿ - ಆಳುವ ವರ್ಗದ ಪಕ್ಷಗಳಲ್ಲಿ ಕಂಡು ಬರುತ್ತಿರುವ ಅವನತಿ ಎಂತಹ ಪ್ರಪಾತಕ್ಕಿಳಿಯುತ್ತಿದೆ ಎಂಬುದರ ಸಂಕೇತ ಇದು. ಜನ ಇದನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ. ಸಂಯುಕ್ತ ರಂಗ ಸರಕಾರ ಸಾರ್ವಜನಿಕ ಜೀವನದಲ್ಲಿ ಶುಚಿತ್ವ ತರುವ ತನ್ನ ವಚನಕ್ಕೆ ದಢವಾದ ಬದ್ಧತೆಯನ್ನು ತೋರ್ಪಡಿಸಬೇಕು ಎಂದು ಜನ ನಿರೀಕ್ಷಿಸುತ್ತಾರೆ.



1. ಲಾಭಕರ ಸಾರ್ವಜನಿಕ ವಲಯದ ಉದ್ದಿಮೆಗಳ ಹಾಗೂ ಮಹತ್ವದ ಮತ್ತು ಪ್ರಧಾನ ವಲಯಗಳಲ್ಲಿರುವ ಉದ್ದಿಮೆಗಳ ಶೇರುಗಳ ಮಾರಾಟದ ಮೂಲಕ ಸಾರ್ವಜನಿಕ ವಲಯವನ್ನು ಕಳಚಿಹಾಕುವುದನ್ನು ನಿಲ್ಲಿಸಬೇಕು.
2. ಸಾರ್ವಜನಿಕ ಮತ್ತು ಖಾಸಗೀ ವಲಯಗಳಲ್ಲಿ ರೋಗಗ್ರಸ್ತ ಘಟಕಗಳನ್ನು ಪುನರುಜ್ಜೀವನಗೊಳಿಸಲು ತಕ್ಷಣ ಕ್ರಮ ಕೈಗೊಳ್ಳಬೇಕು.
3. ಒಟ್ಟಾರೆಯಾಗಿ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಗೊಳಿಸಬೇಕು. ಹಾಗೂ ಬಡತನದ ರೇಖೆಯ ಕೆಳಗಿರುವ ಜನರಿಗೆ ಸಹಾಯಧನದ ಬೆಲೆಗಳ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬೇಕು.
4. ವಿಮಾ ವಲಯವನ್ನು ತೆರೆಯುವುದನ್ನು ನಿಲ್ಲಿಸಬೇಕು. ಹಾಗೂ ವಿಮಾ ನಿಯಂತ್ರಣಾ ಪ್ರಾಧಿಕಾರ ಮಸೂದೆಯನ್ನು ಹಿಂದಕ್ಕೆ ಪಡೆದುಕೊಳ್ಳಬೇಕು.
5. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ ಇಡುವ ಹಣದ ಪ್ರಮಾಣವನ್ನು ಹೆಚ್ಚಿಸಬೇಕು. ಕೃಷಿ ಕಾರ್ಮಿಕರ ಪ್ರಯೋಜನಕ್ಕೆ ಕೃಷಿ ಕಾರ್ಮಿಕ ಮಸೂದೆಯನ್ನು ಅಂಗೀಕರಿಸಬೇಕು.
6. ಸಂಸತ್ತಿನ ಮುಂದಿರುವ ಮಹಿಳಾ ಮೀಸಲಾತಿ ಮಸೂದೆಯನ್ನು ಅಂಗೀಕರಿಸಬೇಕು.
7. ಗುಪ್ತ ಮತದಾನದ ಮೂಲಕ ಕಾರ್ಮಿಕ ಸಂಘಗಳಿಗೆ ಮಾನ್ಯತೆ ನೀಡುವ ಶಾಸನವನ್ನು ತರಬೇಕು.
8. ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರವನ್ನು ನಿಗ್ರಹಿಸಲು ಪರಿಷ್ಕೃತ ಲೋಕಪಾಲ್ ಮಸೂದೆಯನ್ನು ಅಂಗೀಕರಿಸಬೇಕು.

ರಾಷ್ಟ್ರೀಯ ಪ್ರಚಾರಾಂದೋಲನ ಜುಲೈ 15-31, 1997

ಜೂನ್21 ಕ್ಕೆ ಪಶ್ಚಿಮ ಬಂಗಾಳದ ಎಡರಂಗ ಸರಕಾರ 20 ವರ್ಷಗಳನ್ನು ಪೂರ್ಣಗೊಳಿಸಿತು. ಈ ಸಂದರ್ಭದಲ್ಲಿ ಹಿಂದಿನ ಸಂಚಿಕೆಯಲ್ಲಿ ಈ ಸರಕಾರದ ಮುಖ್ಯಮಂತ್ರಿಯಾಗಿ ನಿರಂತರ 20 ವರ್ಷ ಆಡಳಿತ ನಡೆಸಿ ಹೊಸ ದಾಖಲೆ ನಿರ್ಮಿಸಿದ ಜ್ಯೋತಿ ಬಸುರವರೊಡನೆ ಸಂದರ್ಶನವನ್ನು ಓದಿರುವಿರಿ. ಈ ಐತಿಹಾಸಿಕ ಸಂದರ್ಭದಲ್ಲಿ ಇದನ್ನು ಸಾಧ್ಯವಾಗಿಸಲು ಪಶ್ಚಿಮಬಂಗಾಳದ ಜನತೆ, ಎಡರಂಗದ ಕಾರ್ಯಕರ್ತರು ಮಾಡಿದ ತ್ಯಾಗ-ಬಲಿದಾನಗಳನ್ನು ನೆನಪಿಸುತ್ತಾ, ಎಡರಂಗದ ನೇತೃತ್ವ ವಹಿಸಿರುವ ಸಿಪಿಐ(ಎಂ) ಪಶ್ಚಿಮ ಬಂಗಾಳ ರಾಜ್ಯ ಸಮಿತಿಗೆ, ಎಡರಂಗದ ಇತರ ಪಕ್ಷಗಳಿಗೆ ಹಾಗೂ ಜನತೆಗೆ ಅಭಿನಂದನೆ ಸಲ್ಲಿಸುತ್ತಾ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು ಈ ಸಾಧನೆಯ ರಾಜಕೀಯ ಮಹತ್ವವನ್ನು, ಅದರ ಹಿನ್ನೆಲೆಯನ್ನು, ಅದರೊಡನೆ ಎಡರಂಗ ಸರಕಾರದ ಮಿತಿಗಳನ್ನೂ ಈ ಲೇಖನದಲ್ಲಿ ಚರ್ಚಿಸಿದ್ದಾರೆ.

ಸಮರ್ಥ ಪರ್ಯಾಯವನ್ನು ಮುಂದಿಟ್ಟ ಎಡರಂಗದ ನಿರಂತರ ಇಪ್ಪತ್ತು ವರ್ಷಗಳ ಆಡಳಿತ

- ಸುರ್ಜಿತ್

ವಿದೇಶಗಳಲ್ಲಿ ಹಲವರಿಗೆ ಇದೊಂದು ಆಶ್ಚರ್ಯದ ಸಂಗತಿ - ಎಡಪಕ್ಷಗಳ ಒಂದು ರಾಜ್ಯ ಸರಕಾರ ಅಡೆ-ತಡೆಯಿಲ್ಲದೆ 20 ವರ್ಷಗಳ ಕಾಲ ಅದೂ ಬಂಡವಾಳಶಾಹಿ -ಭೂಮಾಲಕ ಸಾಮಾಜಿಕ ವ್ಯವಸ್ಥೆಯೊಳಗೇ ಕೆಲಸ ಮಾಡುತ್ತಲೇ ಪೂರೈಸಿದ್ದು ಹೇಗೆ?

ಇಲ್ಲೊಂದು ವಿಷಯವನ್ನು ಮತ್ತೆ-ಮತ್ತೆ ಒತ್ತಿ ಹೇಳಬೇಕಾಗುತ್ತದೆ. ಅದೇನೆಂದರೆ ಇದು ಕಮ್ಯುನಿಸ್ಟ್ ಪಕ್ಷದ ಅಥವಾ ಎಡಪಕ್ಷಗಳ ಮೂಲಭೂತ ಧೋರಣೆಗೆ ಮತ್ತು ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುತ್ತಿರುವ ಒಂದು ಮಾದರಿ ಕಮ್ಯುನಿಸ್ಟ್ ಅಥವಾ ಸೋಶಲಿಸ್ಟ್ ಸರಕಾರ ಅಲ್ಲ. ಅದು ಬಂಡವಾಳಶಾಹಿ-ಭೂಮಾಲಕ ವ್ಯವಸ್ಥೆಯೊಳಗೇ ಕೆಲಸ ಮಾಡುತ್ತಿದೆ. ಅಂದರೆ ಭಾರತೀಯ ಸಂವಿಧಾನ ಹಾಕಿದ ಮಿತಿಗಳೊಳಗೇ ಕೆಲಸ ಮಾಡಬೇಕಾಗಿದೆ. ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ ಬಹಳಷ್ಟು ಅಧಿಕಾರಗಳು ಕೇಂದ್ರ ಸರಕಾರದಲ್ಲಿ ಕೇಂದ್ರೀಕೃತವಾಗಿವೆ. ಸಶಸ್ತ್ರ ಪಡೆಗಳು, ಅರೆಸೇನಾ ಪಡೆಗಳು, ಹಣಕಾಸು, ಸಂಪರ್ಕ ಇತ್ಯಾದಿಗಳು ಕೇಂದ್ರ ಸರಕಾರದ ಅಧೀನವಿರುವುದಷ್ಟೇ ಅಲ್ಲ, ಸಂವಿಧಾನದ ಕೆಲವು ಅಂಶಗಳಿಂದಾಗಿ ಕೇಂದ್ರದಲ್ಲಿ ಆಳುವ ಪಕ್ಷದ ಮರ್ಜಿಯನ್ನೇ ರಾಜ್ಯ ಸರಕಾರ ಅನುಸರಿಸಬೇಕಾದಂತಹ ಸ್ಥಿತಿಯಿದೆ. ಹಲವಾರು ರಾಜ್ಯ ಸರಕಾರಗಳನ್ನು ಉರುಳಿಸಲು ಅವಕಾಶ ನೀಡಿದ 356 ನೇ ಕಲಮಷ್ಟೇ ಅಲ್ಲ ತಾನು ವಿಧಿಸಿದ ಸುಂಕ, ತೆರಿಗೆಗಳಲ್ಲಿ ರಾಜ್ಯಗಳ ಪಾಲೆಷ್ಟು ಎಂಬುದನ್ನು ಕೇಂದ್ರ ಸರಕಾರವೇ ನಿರ್ಧರಿಸುತ್ತದೆ.

ಆದರೆ ಈ ಮಿತಿಯೊಳಗೆ ಕೆಲಸ ಮಾಡುತ್ತಲೇ ಪಶ್ಚಿಮ ಬಂಗಾಳದ ಎಡರಂಗ ಸರಕಾರದ ಸಾಧನೆಗಳು ನಿಜಕ್ಕೂ ಪ್ರಶಂಸಾರ್ಹ. ಬಂಡವಾಳಶಾಹಿ-ಭೂಮಾಲಕ ಪಕ್ಷಗಳು ಹಿಡಿದಿರುವ ದಾರಿಗೆ ಪರ್ಯಾಯವಾದ ದಾರಿ ಹಿಡಿದಿರುವ ಸರಕಾರ ಪಶ್ಚಿಮಬಂಗಾಳದ ಎಡರಂಗ ಸರಕಾರ ಎಂದು ಜನ ನೋಡುತ್ತಾರೆ.

1977 ರ ಮೊದಲಿನ ಅನುಭವ

ಶೋಷಕ ವರ್ಗಗಳು ಅಂದರೆ ಇಲ್ಲಿ ಬಂಡವಾಳಶಾಹಿ-ಭೂಮಾಲಕ ವರ್ಗಗಳು ಜನ ಬಯಸಿದರೂ ಸ್ವಯಂಪ್ರೇರಣೆಯಿಂದಲೇ ಅಧಿಕಾರ ಬಿಟ್ಟುಕೊಡುವುದಿಲ್ಲ ಎಂಬುದು ಕಮ್ಯುನಿಸ್ಟರಾಗಿ ನಮಗೆ ಗೊತ್ತು. ತಮ್ಮ ವರ್ಗ ಆಳ್ವಿಕೆಯನ್ನು ಶಾಶ್ವತಗೊಳಿಸಲು ತಮ್ಮ ಕೈಯಲ್ಲಿರುವ ಎಲ್ಲಾ ಸಂಪನ್ಮೂಲಗಳನ್ನು ಅವರು ಬಳಸುತ್ತಾರೆ.

ಸ್ವತಂತ್ರ ಭಾರತದಲ್ಲಿ 1952 ರಲ್ಲಿ ಮೊದಲ ಸಾರ್ವತ್ರಿಕ ಚುನಾವಣೆಗಳು ನಡೆದಾಗ ಕಮ್ಯುನಿಸ್ಟರು ಮತ್ತು ಮಿತ್ರರು ಆಗಿದ್ದ ಸಂಯೋಜಿತ ಮದ್ರಾಸ್ ಪ್ರಾಂತ್ಯದಲ್ಲಿ ಅಧಿಕಾರಕ್ಕೆ ಬರುವ ಸಾಧ್ಯತೆಯಿತ್ತು. ಹಾಗಾಗದಂತೆ ತಡೆಯಲಾಯಿತು. ಕೇರಳ ರಾಜ್ಯ ರಚನೆಯಾದ ಮೇಲೆ 1957 ರಲ್ಲಿ ನಡೆದ ಮೊದಲ ಚುನಾವಣೆಗಳಲ್ಲಿ, ಕಮ್ಯುನಿಸ್ಟ್ ಪಕ್ಷ ವಿಧಾನ ಸಭೆಯಲ್ಲಿ ಬಹುಮತ ಗಳಿಸಿತು.ಇದು ಕಾಂಗ್ರೆಸ್ ಪಕ್ಷದ ಅಧಿಕಾರ ಗುತ್ತೇದಾರಿಕೆಯಲ್ಲಿನ ಮೊಟ್ಟ ಮೊದಲ ಬಿರುಕು. ಆದರೆ ಇ.ಎಂ.ಎಸ್. ನೇತೃತ್ವದ ಈ ಸರಕಾರ ಭೂ ಸುಧಾರಣೆಗಳು, ಶಿಕ್ಷಣ ವ್ಯವಸ್ಥೆಯಲ್ಲಿನ ಸುಧಾರಣೆ ಮತ್ತಿತರ ಪ್ರಗತಿಪರ ಕ್ರಮಗಳ ಮೂಲಕ ಬಂಡವಾಳ ಶಾಹಿ-ಭೂಮಾಲಕ ವರ್ಗಗಳ ಹಿತಾಸಕ್ತಿಗಳಿಗೆ ಬೆದರಿಕೆ ಒಡ್ಡಲಾರಂಭಿಸಿದಾಗ ಅದನ್ನು ವಜಾ ಮಾಡಲಾಯಿತು.

1967 ರ ಚುನಾವಣೆಗಳಲ್ಲಿ ಕಾಂಗ್ರೆಸ್ಸಿಗೆ ದೊಡ್ಡ ಸೋಲಾಯಿತು. ಎಂಟು ರಾಜ್ಯಗಳಲ್ಲಿ ಕಾಂಗ್ರೆಸ್ಸೇತರ ಸರಕಾರಗಳು ಬಂದವು. ಪಶ್ಚಿಮ ಬಂಗಾಳದಲ್ಲಿ ಸಂಯುಕ್ತ ರಂಗ ಅಧಿಕಾರಕ್ಕೆ ಬಂದರೆ, ಕೇರಳದಲ್ಲಿ ಸಿಪಿಐ(ಎಂ) ಮತ್ತೆ ಸರಕಾರದ ನೇತೃತ್ವ ವಹಿಸಿತು. ಪಶ್ಚಿಮ ಬಂಗಾಳದ ಸಂಯುಕ್ತ ರಂಗ ಸರಕಾರ 18 ಅಂಶಗಳ ಕಾರ್ಯಕ್ರಮದ ಆಧಾರದಲ್ಲಿ ಹಲವು ಪ್ರಗತಿಪರ ಕ್ರಮಗಳನ್ನು ಕೈಗೊಂಡಿತು. ಕೈಗಾರಿಕಾ ವಿವಾದಗಳಲ್ಲಿ ಆಡಳಿತ ಅಥವಾ ಮಾಲಕರ ಪರವಾಗಿ ಪೋಲೀಸರು ಮಧ್ಯ ಪ್ರವೇಶಿಸುವುದನ್ನು ಅದು ನಿಲ್ಲಿಸಿತು. ಆ ಮೂಲಕ ಮೂಲಭೂತ ಟ್ರೇಡ್‌ಯೂನಿಯನ್ ಹಕ್ಕುಗಳಿಗೆ ರಕ್ಷಣೆ ಕೊಟ್ಟಿತು. ಕೃಷಿ ರಂಗದಲ್ಲಿ ತಾವು ಉಳುವ ಭೂಮಿಯಲ್ಲಿನ ಉತ್ಪನ್ನದ ಮೇಲೆ ಒಂದು ಭಾಗ ಪಡೆಯುವ ಭಾಗ ಬೆಳೆಗಾರರ ಮೂಲಭೂತ ಹಕ್ಕುಗಳು ಸಿಗುವಂತೆ ಮಾಡಲಾಯಿತು. ಇವೆರಡು ಬಂಡವಾಳಶಾಹಿ-ಭೂಮಾಲಕ ವರ್ಗಗಳ ಹಿತಾಸಕ್ತಿಗಳ ವಿರುದ್ಧ ಹೋದುದರಿಂದ ಆ ವರ್ಗಗಳ ಪ್ರತಿನಿಧಿ ಹಾಗೂ ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿದ್ದ ಕಾಂಗ್ರೆಸ್ ರಾಜ್ಯದಲ್ಲಿ ಕಾನೂನು ಪರಿಸ್ಥಿತಿ ಹದಗೆಟ್ಟಿದೆಯೆಂದು ಬೊಬ್ಬೆಯೆಬ್ಬಿಸಿತು. ಅದನ್ನೇ ನೆವ ಮಾಡಿ ಕೊನೆಗೆ, ಆ ಸರಕಾರವನ್ನು 1967 ರ ನವಂಬರ್ 21ರಂದು ವಜಾ ಮಾಡಿದ ನಂತರ ನಮ್ಮ ವಿರುದ್ಧ ಭಯೋತ್ಪಾದನೆಯನ್ನೇ ಹರಿಯಬಿಡಲಾಯಿತು. 6000 ಕ್ಕಿಂತಲೂ ಹೆಚ್ಚು ಜನರನ್ನು ಬಂಧಿಸಲಾಯಿತು. 12 ಮಂದಿ ಪೋಲೀಸ್ ಗುಂಡುಗಳಿಗೆ ಬಲಿಯಾದರು. ಸಾವಿರಾರು ಮಹಿಳೆಯರು, ಪುರುಷರನ್ನು ಪೋಲೀಸರು ನಿರ್ದಯವಾಗಿ ಥಳಿಸಿದರು. ಆದರೆ 1969 ರಲ್ಲಿ ಮತ್ತೆ ಚುನಾವಣೆ ನಡೆದಾಗ ಕಮ್ಯುನಿಸ್ಟರು ಮತ್ತು ಇತರ ಎಡಪಕ್ಷಗಳ ಜನ ಬೆಂಬಲ ಇನ್ನಷ್ಟು ವಿಸ್ತಾರವಾಯಿತು. ಸಿಪಿಐ(ಎಂ) ಗಳಿಸಿದ ಮತಗಳು 18% ರಿಂದ 28% ಕ್ಕೇರಿತು. ಆದರೆ ಬೇಗನೇ ಎರಡನೇ ಸಂಯುಕ್ತ ರಂಗ ಸರಕಾರವನ್ನೂ ವಜಾ ಮಾಡಲಾಯಿತು.

1971 ರ ವಿಧಾನ ಸಭಾ ಚುನಾವಣೆಗಳಲ್ಲಿ ಕಮ್ಯುನಿಸ್ಟರು ಗಳಿಸಿದ ಮತಗಳ ಪ್ರಮಾಣ 35% ಕ್ಕೇರಿತು. ಆದರೆ 1972 ರ ಚುನಾವಣೆಗಳಲ್ಲಿ ಭಾರಿ ಮೋಸ ನಡೆಸಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸಿಪಿಐ(ಎಂ) ವಿರುದ್ಧ ಅರೆ-ಫ್ಯಾಸಿಸ್ಟ್ ದಮನವನ್ನು ನಡೆಸಿತು. ಸಿಪಿಐ(ಎಂ)ನ 1200 ಮುಖಂಡರು ಮತ್ತು ಕಾರ್ಯಕರ್ತರು ಪೋಲೀಸರು ಮತ್ತು ಕಾಂಗ್ರೆಸ್ ಗೂಂಡಾಗಳ ಕೈಗಳಲ್ಲಿ ಹುತಾತ್ಮರಾದರು. ಅಲ್ಲದೆ 20 ಸಾವಿರ ಕುಟುಂಬಗಳು ತಮ್ಮ ಮನೆ-ಮಾರು ಬಿಟ್ಟು ಸುರಕ್ಷಿತ ಸ್ಥಳಗಳಿಗೆ ಹೋಗಬೇಕಾಗಿ ಬಂತು.

ಈ ನಗ್ನ ಸರಕಾರಿ ಭಯೋತ್ಪಾದನೆ 1977 ರವರೆಗೂ ನಡೆಯಿತು. ಈ ಹೊತ್ತಿಗೆ ಕಾಂಗ್ರೆಸ್ ಪಕ್ಷದ ಅಡಿಯಲ್ಲಿ ಸರ್ವಾಧಿಕಾರಿ ಆಡಳಿತ ವ್ಯವಸ್ಥೆ ಕೇಂದ್ರದಲ್ಲೂ ಬಂತು. ಜೂನ್ 1975 ರಲ್ಲಿ ಆಂತರಿಕ ತುರ್ತು ಪರಿಸ್ಥಿತಿಯನ್ನು ಹೇರಲಾಯಿತು. ಆದರೆ ಇದಕ್ಕೆ ಎಂತಹ ತೀಕ್ಷ್ಣ ಪ್ರತಿಕ್ರಿಯೆ ಬಂತೆಂದರೆ 1977 ರ ಚುನಾವಣೆಗಳಲ್ಲಿ ಕಾಂಗ್ರೆಸ್ ಉತ್ತರ ಭಾರತದಲ್ಲಿ ಹೇಳ-ಹೆಸರಿಲ್ಲದಂತಾಯಿತು. ಇತರ ಭಾಗಗಳಲ್ಲೂ ಅದು ತೀವ್ರ ಸೋಲು ಅನುಭವಿಸಿತು. ಮೊಟ್ಟ ಮೊದಲ ಬಾರಿಗೆ ಅದು ಕೇಂದ್ರದಲ್ಲಿ ಅಧಿಕಾರ ಕಳಕೊಂಡಿತು. ಈ ಚುನಾವಣೆಗಳಲ್ಲಿ ಕೇಂದ್ರದಲ್ಲಿ ಮತ್ತು ರಾಜ್ಯಗಳಲ್ಲಿ ವಿಭಿನ್ನ ಪಕ್ಷಗಳು, ಅವುಗಳ ಕೂಟಗಳು ಅಧಿಕಾರಕ್ಕೆ ಬಂದವು. ಅಂದಿನಿಂದ ಕಾಂಗ್ರೆಸ್ ಅವನತಿಯ ಮೇಲೆ ಅವನತಿ ಕಾಣಬೇಕಾಯಿತು. ಇಂದು 545 ಸದಸ್ಯ ಬಲದ ಲೋಕಸಭೆಯಲ್ಲಿ ಅದರ ಬೆಲೆ 143 ಕ್ಕಿಳಿದಿದೆ. 25 ರಾಜ್ಯಗಳಲ್ಲಿ ಆರರಲ್ಲಿ ಮಾತ್ರ ಅದರ ಸರಕಾರವಿದೆ.

ಪಶ್ಚಿಮ ಬಂಗಾಳದಲ್ಲಿ 1977 ರಲ್ಲಿ ಸಿಪಿಐ(ಎಂ) ನೇತೃತ್ವದ ಎಡರಂಗ ಬೃಹತ್ ಬಹುಮತದೊಂದಿಗೆ ಅಧಿಕಾರಕ್ಕೆ ಬಂದದ್ದು ಈ ಹಿನ್ನೆಲೆಯಲ್ಲಿ. ಅಂದಿನಿಂದ ಇಂದಿನವರೆಗೂ ಹಿಂದಿರುಗಿ ನೋಡಿಲ್ಲ. ಚುನಾವಣೆಗಳಿಂದ ಚುನಾವಣೆಗಳಿಗೆ ಎಡರಂಗದ ಸ್ಥಾನಗಳ ಸಂಖ್ಯೆ ಹೆಚ್ಚುತ್ತಲೇ ಬಂದಿದೆ. ಇಂದು ಸಿಪಿಐ(ಎಂ) ಒಂದೇ ಪಶ್ಚಿಮ ಬಂಗಾಳದ ವಿಧಾನ ಸಭೆಯಲ್ಲಿ ಬಹುಮತ ಹೊಂದಿದೆ. ಆದರೂ ರಾಜ್ಯದಲ್ಲಿ ಕಾಂಗ್ರೆಸ್‌ಗೆ ಈಗಲೂ ದೊಡ್ಡ ಪ್ರಭಾವವಿದೆ. ಅದು 40% ಮತ ಗಳಿಸುತ್ತಿದೆ.

ಎರಡು ಕಾರಣಗಳು

ಎಡರಂಗ ಈ ಇಪ್ಪತ್ತು ವರ್ಷಗಳ ದೀರ್ಘ ಕಾಲ ಅಡೆ-ತಡೆಯಿಲ್ಲದೆ ಆಡಳಿತ ನಡೆಸಲು ಸಾಧ್ಯವಾಗಿರುವುದು ಎರಡು ಕಾರಣಗಳಿಂದ. ಮೊದಲನೆಯದಾಗಿ ರಾಜಕೀಯ ರಂಗವನ್ನು ಒಂದು ಬಿಕ್ಕಟ್ಟು ಆವರಿಸಿಕೊಂಡಿರುವುದರಿಂದ ಆಳುವ ವರ್ಗಗಳು ಮತ್ತು ಅವುಗಳ ಪಕ್ಷಗಳಲ್ಲಿ ಒಡಕುಗಳು ಉಂಟಾದವು. ಇದರಿಂದ ಎಡ ಪಕ್ಷಗಳಿಗೆ ಸಾಕಷ್ಟು ಅವಕಾಶ ದೊರೆ ಯಿತು. ಎರಡನೆ ಯದಾಗಿ ಎಡರಂಗ ಸರಕಾರ ರಾಜ್ಯದ ಶ್ರಮಜೀವಿ ಜನ ಸಮೂಹಗಳ ಸ್ಥಿತಿಯನ್ನು ಉತ್ತಮ ಪಡಿಸಲು ಕೈಗೊಂಡ ಕ್ರಮಗಳಿಂದಾಗಿ ಎಡ ಪಕ್ಷಗಳ ಪ್ರಭಾವ ಹಾಗೂ ಶಕ್ತಿ ಗಮನಾರ್ಹವಾಗಿ ಬೆಳೆಯಿತು. ಇದರರ್ಥ ಎಡರಂಗಕ್ಕೆ ಜನಗಳ ಆಶೋತ್ತರಗಳನ್ನು ಪೂರ್ಣವಾಗಿ ಈಡೇರಿಸಲು, ಅವರ ಆಕಾಂಕ್ಷೆಗಳನ್ನು ಪೂರೈಸಲು ಸಾಧ್ಯವಾಗಿದೆ ಯೆಂದೇನೂ ಅಲ್ಲ. ಆದರೆ ತನ್ನ ಸೀಮಿತ ಅಧಿಕಾರ ವ್ಯಾಪ್ತಿಯೊಳಗೆ ಏನು ಸಾಧ್ಯವೋ ಅದನ್ನು ಮಾಡಿದೆ. ಇದುವರೆಗೆ ಮಾಡಿರುವ ಸಾಧನೆಗಳ ಬಗ್ಗೆ ಪಕ್ಷಕ್ಕಾಗಲೀ, ಎಡರಂಗಕ್ಕಾಗಲೀ, ಪೂರ್ಣ ಸಮಾಧಾನವೇನೂ ಇಲ್ಲ.

ಕೇಂದ್ರದ ಪಕ್ಷಪಾತಪೂರ್ಣ ನಿಲುವಿಲ್ಲದಿದ್ದರೆ ಇನ್ನೂ ಹೆಚ್ಚಿನ ಸಾಧನೆಯಾಗುತ್ತಿತ್ತು. 1980 ರ ದಶಕದಿಂದೀಚೆಗೆ ಕೇಂದ್ರ ನೇರವಾಗಿ ಮಧ್ಯಪ್ರವೇಶಿಸಿ ಸರಕಾರವನ್ನು ವಜಾ ಮಾಡುವ ಕ್ರಮಕ್ಕಿಳಿಯದಿದ್ದರೂ ಅದು ತನ್ನ ಬಳಿಯಿದ್ದ ಇತರ ಅಧಿಕಾರಗಳನ್ನು ಬಳಸಿ, ರಾಜ್ಯ ಸರಕಾರದ ವಿರುದ್ಧ ಪಕ್ಷಪಾತ ನಡೆಸಿತು. ರಾಜ್ಯಕ್ಕೆ ಹಣ ನೀಡಲಿಲ್ಲ. ರಾಜ್ಯದಲ್ಲಿ ದೊಡ್ಡ ಉದ್ದಿಮೆಗಳನ್ನು ಹಾಕಲು ಅನುಮತಿ ನೀಡಲಿಲ್ಲ. ರಾಜ್ಯದ ಆರ್ಥಿಕ ಬೆಳವಣಿಗೆಯನ್ನು ಕುಂಠಿತಗೊಳಿಸಲು ಇಂತಹುದೇ ಹಲವು ಕ್ರಮಗಳನ್ನು ಬಳಸಿತು. ರಾಜ್ಯದ ವಿಧಾನ ಸಭೆ ಅಂಗೀಕರಿಸಿದ ಶಾಸನಗಳಿಗೆ ರಾಷ್ಟ್ರಪತಿಯವರ ಒಪ್ಪಿಗೆ ನೀಡಲು ವರ್ಷಾನುಗಟ್ಟಲೆ ಕಾಯಬೇಕಾಯಿತು.

ಪಕ್ಷಪಾತದ ನಿಲುವಿನ ವಿರುದ್ಧ

ಇವೆಲ್ಲದರ ವಿರುದ್ಧ ತನ್ನ ಅಸ್ತಿತ್ವ ಮತ್ತು ಬೆಳವಣಿಗೆಗಾಗಿ ನಡೆಸಿದ ದೈನಂದಿನ ಹೋರಾಟದಲ್ಲಿ ಎಡರಂಗ ಜನಗಳ ಪ್ರೀತಿಗೆ ಪಾತ್ರವಾಯಿತು. ಪಶ್ಚಿಮಬಂಗಾಳವನ್ನು ರಾಜಕೀಯ ಅಸ್ಥಿರತೆಯ ಕೆಸರಿನಿಂದ ಹೊರತೆಗೆಯಲು ಕಳೆದ 20 ವರ್ಷಗಳ ಕಾಲ ಸ್ಥಿರ ಆಡಳಿತ ನೀಡಿದ ಹೆಮ್ಮೆ ಎಡರಂಗಕ್ಕಿದೆ. ಅದು ಗೇಣಿದಾರರಿಗೆ ಒಡೆತನದ ಹಕ್ಕು ಕೊಡುವ ಭೂಸುಧಾರಣೆ ಕ್ರಮಗಳನ್ನು ತಂದಿತು, ಭೂದಾಖಲೆಗಳನ್ನು ಸಮಯಬದ್ಧಗೊಳಿಸಿತು ಹಾಗೂ ಭಾಗ ಬೆಳೆಗಾರರ ಹಕ್ಕುಗಳನ್ನು ರಕ್ಷಿಸಿತು. ಈ ಭೂ ಸುಧಾರಣೆಗಳು, ಜತೆಗೆ ಹೆಚ್ಚಿನ ನೀರಾವರಿ ಸೌಲಭ್ಯ ಹಾಗೂ ಕೃಷಿ ಲಾಗುವಾಡುಗಳ ಪೂರೈಕೆಯಿಂದಾಗಿಯೇ ಪಶ್ಚಿಮ ಬಂಗಾಳದ ಆಹಾರ ಉತ್ಪಾದನೆಯ ರಂಗದಲ್ಲಿ ಅಪಾರ ಪ್ರಗತಿ ಸಾಧಿಸಲು ಸಾಧ್ಯವಾಯಿತು. ಕಾರ್ಮಿಕ ಸಂಘಗಳಿಗೆ ಪ್ರಜಾಪ್ರಭುತ್ವ ಹಕ್ಕುಗಳನ್ನು ಸಿಗುವಂತೆ ಮಾಡಿತು. ಕೈಗಾರಿಕಾ ವಿವಾದಗಳು ಅಥವಾ ಮುಷ್ಕರಗಳ ಸಮಯದಲ್ಲಿ ಕಾರ್ಮಿಕರನ್ನು ಸದೆಬಡೆಯಲು ಈಗ ಪೋಲೀಸರನ್ನು ಕಳುಹಿಸಲಾಗುತ್ತಿಲ್ಲ. ಅದೇ ರೀತಿ ಆಡಳಿತದ ವಿಕೇಂದ್ರೀಕರಣ ಹಾಗೂ ಬುಡಮಟ್ಟದ ಸಂಸ್ಥೆಗಳನ್ನು ಬಲಪಡಿಸಲು ಕ್ರಮಗಳನ್ನು ಕೈಗೊಳ್ಳಲಾಯಿತು. ಪಂಚಾಯತುಗಳು, ಬ್ಲಾಕ್ ಸಮಿತಿಗಳು, ಜಿಲ್ಲಾ ಪರಿಷತ್ತುಗಳು ಇತ್ಯಾದಿಗಳಿಗೆ ನಿಯಮಿತ ಚುನಾವಣೆಗಳು ನಡೆಯುತ್ತಿವೆ. ಅವಕ್ಕೆ ಹೆಚ್ಚಿನ ಅಧಿಕಾರ ನೀಡಲಾಗಿದೆ. ದೇಶದಲ್ಲಿ ಮೊಟ್ಟಮೊದಲ ಬಾರಿಗೆ ಹನ್ನೆರಡನೇ ತರಗತಿಯವರೆಗೆ ಶಿಕ್ಷಣ ಪುಕ್ಕಟ್ಟೆಯಾಗಿದೆ. ಶಾಲಾ-ಕಾಲೇಜುಗಳಲ್ಲಿ ಮೊದಲಿದ್ದ ಅರಾಜಕ ಸ್ಥಿತಿ ಕೊನೆಗೊಂಡು ಪರೀಕ್ಷೆಗಳು ನಿಯಮಿತವಾಗಿ ನಡೆಯುತ್ತಿವೆ. 80% ಗ್ರಾಮೀಣ ಜನರಿಗೆ ಕುಡಿಯುವ ನೀರಿನ ಪೂರೈಕೆಯ ವ್ಯವಸ್ಥೆಯಾಗಿದೆ.

ನಿಸ್ಸಂದೇಹವಾಗಿಯೂ, ಕೇಂದ್ರದಲ್ಲಿನ ಸರಕಾರಗಳು ಪಕ್ಷಪಾತ ಪೂರ್ಣ ನಿಲುವು ತಳೆದಿರದಿದ್ದರೆ ಜನಗಳಿಗೆ ಇನ್ನಷ್ಟು ಪರಿಹಾರ ಒದಗಿಸಲು ಸಾಧ್ಯವಿತ್ತು. ಆದ್ದರಿಂದ ಕೇಂದ್ರ-ರಾಜ್ಯ ಸಂಬಂಧಗಳ ಪ್ರಜಾಸತ್ತಾತ್ಮಕ ಪುನರ್‌ರಚನೆಗಾಗಿ ಹೋರಾಟವನ್ನು ನಡೆಸಿಕೊಂಡು ಬರಲಾಗಿದೆ. ಅದು ಈಗಲೂ ಮುಂದುವರಿದಿದೆ. ಕೇಂದ್ರದಲ್ಲಿ ಹಲವು ಪ್ರಾದೇಶಿಕ ಪಕ್ಷಗಳು ಇರುವ ಸಂಯುಕ್ತ ರಂಗ ಸರಕಾರದ ರಚನೆ ಈ ನಿಟ್ಟಿನಲ್ಲಿ ಹೊಸ ಆಶಾಭಾವನೆ ಮೂಡಿಸಿದೆ.

ಕೋಮುಶಾಂತಿ ಮತ್ತು ಸಾಮರಸ್ಯದ ರಂಗದಲ್ಲಂತೂ ಎಡರಂಗದಿಂದಾಗಿ ಪಶ್ಚಿಮ ಬಂಗಾಳ ಒಂದು ಜ್ವಾಜಲ್ಯಮಾನ ಉದಾಹರಣೆ. ದೇಶದ ಇತರ ಭಾಗಗಳಲ್ಲಿ ಮುಖ್ಯವಾಗಿ ಉತ್ತರ ಭಾಗಗಳಲ್ಲಿ ಪರಿಸ್ಥಿತಿ ಬಹಳ ಅಪಾಯಕಾರಿಯಾಗಿರುವಾಗಲೂ ಹಿಂದೂ ಕೋಮುವಾದಿ ಮತ್ತು ಮೂಲ ಭೂತವಾದಿ ಶಕ್ತಿಗಳ ಚಟುವಟಿಕೆಗಳನ್ನು ತಡೆಯಲು ಸಾಧ್ಯವಾಗಿದೆ.

ಎಡಪಕ್ಷಗಳ ಪ್ರತಿಷ್ಠೆ ಹೆಚ್ಚಿದೆ.

ಪಶ್ಚಿಮ ಬಂಗಾಳದಲ್ಲಿ ಎಡರಂಗ ಸರಕಾರದ ಅಸ್ತಿತ್ವ ದೇಶದ ರಾಜಕೀಯ ಸನ್ನಿವೇಶದ ಮೇಲೆ ಭಾರೀ ಪ್ರಭಾವ ಬೀರಿದೆ. ಈಗ ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳನ್ನು ಬಹಿಷ್ಕೃತರಂತೆ ಕಾಣಲಾಗುತ್ತಿಲ್ಲ. ಅವುಗಳ ಪ್ರಭಾವ ಹೆಚ್ಚುತ್ತಿರುವುದರಿಂದಾಗಿ ಬಂಡವಾಳಶಾಹಿ -ಭೂಮಾಲಕ ಆಳುವ ಪಕ್ಷಗಳು ಅವನ್ನು

6ನೇ ಪುಟ ನೋಡಿ

> "ಇಂದು ಗ್ರಾಮೀಣ ಪಶ್ಚಿಮ ಬಂಗಾಳದಲ್ಲಿ ವಯಸ್ಕರಲ್ಲಿ ಪ್ರತಿ ಮೂವರಲ್ಲಿ ಒಬ್ಬರು ಕಿಸಾನ್ ಸಭಾದ ಸದಸ್ಯ ರಾಗಿರುವುದು ಆಕಸ್ಮಿಕವೇನಲ್ಲ. ಅವರ ವರ್ಗ ಸಮರಗಳು, ಜತೆಗೆ ಸಿಪಿಐ(ಎಂ) ಮತ್ತು ಇತರ ಎಡ ಪಕ್ಷಗಳು ನಡೆಸಿದ ಸೈದ್ಧಾಂತಿಕ ಹೋರಾಟಗಳಿಂದಾಗಿ ವಿಶಾಲ ಜನ ಸಮೂಹಗಳನ್ನು ಅಣಿನೆರೆಸಲು ಸಾಧ್ಯವಾಗಿದೆ."

ಪಶ್ಚಿಮ ಬಂಗಾಳ

ಎಡಪಂಥ ಆಡಳಿತ ಇಪ್ಪತ್ತು ವರುಷ
ನಡೆದದ್ದು ನಮಗೆಲ್ಲ ತಂದಿಹುದು ಹರುಷ
ಕಳಂಕರಹಿತವೀ ಸರಕಾರ ನೋಡಿ
ಶತಮಾನ ಇರಲೆಂದು ಹರಸೋಣ ಕೂಡಿ

- ವಿಡಂಬಾರಿ



ಕುಂದಾಪುರ ಹಂಚು ಕಾರ್ಮಿಕರ ಸಹಕಾರಿ ಸಂಘ ದಶಕದ ಸಂಭ್ರಮ - ವಿಶ್ವ

ಸಂಬಳ ಏರಿಕೆ, ತುಟ್ಟಿಭತ್ಯೆ ಮತ್ತಿತರ ಸೌಲಭ್ಯಗಳಿಗಾಗಿ ಶೋಷಣೆಯನ್ನು ವಿರೋಧಿಸಲು ದುಡಿಯುವ ಜನರು ಸಂಘ ಕಟ್ಟಿಕೊಂಡು ಹೋರಾಡುವುದು ಸಹಜ. ಅದು ಅವರ ಹಕ್ಕು ಕೂಡ. ಆದರೆ ಅದರ ಜೊತೆಯಲ್ಲೇ ಕಾರ್ಮಿಕರ ಜೀವನ ಸುಧಾರಣೆಗೆ ರಚನಾತ್ಮಕ ಚಟುವಟಿಕೆಯನ್ನು ಹಮ್ಮಿಕೊಂಡರೆ ಹೇಗೆ?.....

ದೇಶದ ಅತ್ಯಂತ ಸಮರಶೀಲ ಹಾಗೂ ಪ್ರಭಾವಶಾಲಿ ಕಾರ್ಮಿಕ ಸಂಘಟನೆ ಎನಿಸಿ ಕೊಂಡಿರುವ ಸಿಐಟಿಯು ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರದಲ್ಲಿ ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿದೆ.

ಸಿಐಟಿಯು ಸಂಯೋಜಿತ ಹಂಚಿನ ಕೆಲಸಗಾರರ ಸಂಘದ ಪ್ರಾಯೋಜಕತ್ವದಲ್ಲಿ ಹಂಚಿನ ಫ್ಯಾಕ್ಟರಿಗಳ ಕಾರ್ಮಿಕರೇ ಸಹ ಕಾರಿ ಸಂಘವೊಂದನ್ನು ನಡೆಸುತ್ತಿದ್ದಾರೆ.

ಜೀವನಕ್ಕಾಗಿ ಸಂಘರ್ಷ-ಸಹಕಾರ ಈ ಎರಡೂ ತತ್ವಗಳನ್ನು ಜತೆ ಜತೆಯಾಗಿ ಏಕಕಾಲಕ್ಕೆ ಅನುಷ್ಠಾನಗೊಳಿಸುತ್ತಿದ್ದಾರೆ ಕುಂದಾಪುರ ಹಂಚು ಕಾರ್ಮಿಕರು.

1987ರಲ್ಲಿ ಸ್ಥಾಪನೆಯಾದ ಕುಂದಾಪುರ ಹಂಚು ಕಾರ್ಮಿಕ ಸಂಘ ಹತ್ತು ವರ್ಷ ಗಳನ್ನು ಯಶಸ್ವಿಯಾಗಿ ಪೂರೈಸಿದೆ.

ಕುಂದಾಪುರ ಪಟ್ಟಣದ ವ್ಯಾಪ್ತಿಗೆ ಬರುವ ಬಹುತೇಕ ಎಲ್ಲಾ ಹಂಚಿನ ಕಾರ್ಖಾನೆಗಳ ಕಾರ್ಮಿಕರು ಸಂಘದ ಸದಸ್ಯರಾಗಿದ್ದಾರೆ.

ಆರಂಭದಲ್ಲಿ ಸಂಘ 900 ಸದಸ್ಯರನ್ನು ಹೊಂದಿತ್ತು. ಈಗ ಸುಮಾರು 1500 ಕಾರ್ಮಿಕರು ಸದಸ್ಯರಾಗಿದ್ದಾರೆ.

ಸಂಘ ಆರಂಭದಲ್ಲಿ ಹೊಂದಿದ್ದ ಬಂಡವಾಳ ಸುಮಾರು 27 ಸಾವಿರ ರೂಪಾಯಿ. ಇದೀಗ ಕಾರ್ಮಿಕರ ಈ ಸಹಕಾರಿ ಸಂಘದ ವಹಿವಾಟು 65 ಲಕ್ಷ ರೂಪಾಯಿಗಳನ್ನು ಮುಟ್ಟಿದೆ.

ಸಾಲ ಸೌಲಭ್ಯ

ದಿನಬಳಕೆ ಸಾಲವೆಂದು ಸದಸ್ಯರಿಗೆ ಎರಡು ಸಾವಿರ ರೂಪಾಯಿ ಸಾಲ ನೀಡ ಲಾಗುತ್ತದೆ. ಇದಕ್ಕೆ ವಿಧಿಸುವ ಬಡ್ಡಿದರ ಶೇಕಡ 16.

ಪಡೆದ ಸಾಲವನ್ನು ಸದಸ್ಯರು ಸದುಪಯೋಗ ಪಡಿಸಿಕೊಳ್ಳುತ್ತಾರೆ ಎನ್ನುತ್ತಾರೆ ಸಂಘದ ಅಧ್ಯಕ್ಷ ವಿ.ನರಸಿಂಹ. ಸಾಲ ಮರುಪಾವತಿ ಪ್ರಮಾಣವೂ ಉತ್ತಮವಾಗಿದೆ ಎನ್ನುತ್ತಾರೆ.

ಸಾಲದ ಬಾಬ್ತು ಹಣವನ್ನು ಕಾರ್ಮಿಕರ ಸಂಬಳದಲ್ಲೇ ಕಡಿತಗೊಳಿಸಿ ವಸೂಲಿ ಮಾಡುವ ವ್ಯವಸ್ಥೆಗಾಗಿ ಪ್ರಯತ್ನಿಸ ಲಾಗುತ್ತಿದೆ. ಕೆಲವು ಕಾರ್ಖಾನೆಗಳ ಮಾಲೀಕರು ಈ ವ್ಯವಸ್ಥೆಗೆ ಒಪ್ಪಿದ್ದಾರೆ. ಎಲ್ಲರೂ ಇದಕ್ಕೆ ಸಮ್ಮತಿಸಿದರೆ ವಸೂಲಿ ಇನ್ನಷ್ಟು ಸುಲಭವಾಗುತ್ತದೆ ಎಂಬುದು ಅವರ ಅಭಿಪ್ರಾಯ.

ಕಾರ್ಮಿಕರು ಪಡೆದ ಸಾಲವನ್ನು ಮರುಪಾವತಿ ಮಾಡುವುದಿಲ್ಲ ಎಂದಲ್ಲ, ಸಂಘಟನೆಯ ಬದ್ಧತೆಯಿರುವ ಅವರು ಸಾಲವನ್ನು ವಾಪಸು ಮಾಡುತ್ತಾರೆ. ಆದರೆ ಸಂಬಳದಲ್ಲಿಯೇ ಮಾಡುವಂತಿದ್ದರೆ ವಸೂಲಿ ಸುಲಭವೂ ಸರಳವೂ ಆಗುತ್ತದೆ ಎನ್ನುವ ವಾದ ಅವರದು.

ಸಿಐಟಿಯು ಸಂಘಟನೆಯ ಸದಸ್ಯರಾದ ಕಾರ್ಮಿಕರಿಗೆ ಮಾತ್ರವೇ ಸಹಕಾರಿ ಸಂಘದ ಸದಸ್ಯತ್ವ ನೀಡಲಾಗುತ್ತದೆಯೇ ಎಂಬುದು ಸಹಜವಾಗಿಯೇ ಉದ್ಭವವಾಗುವ ಪ್ರಶ್ನೆ.

'ಇಲ್ಲ' ಎನ್ನುವುದು ಇದಕ್ಕೆ ಸಿಗುವ ಸ್ಪಷ್ಟ ಉತ್ತರ. ಹಂಚು ಕಾರ್ಖಾನೆಯಲ್ಲಿ ದುಡಿಯುವ ಯಾವುದೇ (ಸ್ತ್ರೀ-ಪುರುಷ) ಕಾರ್ಮಿಕರಿಗೆ ಸಹಕಾರಿ ಸಂಘದ ಸದಸ್ಯತ್ವ ಸಿಗುತ್ತದೆ ಎಂದು ಅಧ್ಯಕ್ಷರು ವಿವರಿಸುತ್ತಾರೆ.

ಕಾರ್ಮಿಕರು ತಮ್ಮ ಕೆಲಸ ಮುಗಿದ ನಂತರವೂ ಸಂಘದ ಸೇವೆಯನ್ನು ಪಡೆದು ಕೊಳ್ಳಲು ಅನುಕೂಲವಾಗುವಂತೆ ಸಂಜೆ ಹೊತ್ತಿನಲ್ಲಿಯೂ ಕಚೇರಿ ತೆರೆದಿರುತ್ತದೆ.

ಕನಸು.......

ಸಂಘದ ಸದಸ್ಯರಿಗೆ ಕಡಿಮೆ ಬೆಲೆಯಲ್ಲಿ ದಿನ ಬಳಕೆ ವಸ್ತುಗಳನ್ನು ಮಾರಾಟ ಮಾಡುವ ಯೋಜನೆಯಿದೆ. ಕಟ್ಟಡದ ಅಭಾವದಿಂದಾಗಿ ಇದು ಕೈ ಗೂಡಿಲ್ಲ. ಸ್ವಂತ ಕಟ್ಟಡ ನಿರ್ಮಾಣದ ನಂತರ ಈ ಕನಸು ನನಸಾ ಗುತ್ತದೆ ಎಂಬ ನಿರೀಕ್ಷೆಯನ್ನು ಇರಿಸಿಕೊಳ್ಳ ಲಾಗಿದೆ.

ಕಾರ್ಮಿಕರು, ಅವರ ಕುಟುಂಬ ವರ್ಗದವರ ಆರ್ಥಿಕ ಉನ್ನತಿಯ ಉದ್ದೇಶ ದೊಂದಿಗೆ ಹುಟ್ಟಿಕೊಂಡ ಹಂಚು ಕಾರ್ಮಿಕರ ಸಂಘ 1995 - 96 ರಲ್ಲಿ ಸುಮಾರು 50 ಸಾವಿರ ರೂಪಾಯಿ ಲಾಭವನ್ನು ಗಳಿಸಿದೆ.

ಆರಂಭದಲ್ಲಿ ಒಬ್ಬರೇ ಸಿಬ್ಬಂದಿ ಯೊಂದಿಗೆ ಕಾರ್ಯನಿರ್ವಹಿಸುತ್ತಿದ್ದ ಸಂಘಕ್ಕೆ ಈಗ ಮೂವರು ಕಾಯಂ ಸಿಬ್ಬಂದಿ ಇದ್ದಾರೆ.

ಬಡ ನೇಕಾರರನ್ನು ಉಳಿಸಲು ಮನವಿ

ಉಡುಪಿ ಪ್ರಾಥಮಿಕ ನೇಕಾರರ ಸೇವಾ ಸಹಕಾರ ಸಂಘವು ತನ್ನ ನೇಕಾರ ಸದಸ್ಯರಿಗೆ ಉಡುಪಿ ದೊಡ್ಡಣಗುಡ್ಡೆ ನೇಕಾರರ ಕಾಲೋನಿ ಯಲ್ಲಿ ರಾಜ್ಯ ಸರಕಾರದ ಸಾಲಸೌಲಭ್ಯಗಳನ್ನು ಪಡೆದು ಮನೆಗಳನ್ನು ಕಟ್ಟಿಸಿ 1988 ರಲ್ಲಿ ಕೊಟ್ಟಿರುತ್ತದೆ. ಈ ಮನೆಗಳ ಸಾಲದ ಅಸಲು ಮತ್ತು ಬಡ್ಡಿಯನ್ನು ನೇಕಾರರಿಗೆ ಸಿಗುವ ವೇತನದಲ್ಲಿ ಕಡಿತ ಮಾಡಿ ಉಳಿದ ಹಣವನ್ನು ನೇಕಾರರಿಗೆ ಪಾವತಿಸುತ್ತಿದ್ದಾರೆ.

ಕಳೆದ ಕೆಲವು ವರ್ಷಗಳಿಂದ ಸೊಸೈಟಿ ಯಿಂದ ಸಿಗುವ ಕಚ್ಚಾಮಾಲುಗಳ ಗುಣಮಟ್ಟ ಕಳಪೆಯಾಗಿದ್ದು ಇದರಿಂದ ಉತ್ತಮ ರೀತಿಯ ಬಟ್ಟೆ ತಯಾರಿಸುವುದು ಅಸಾಧ್ಯವಾಗಿದೆ ಮತ್ತು ಎಲ್ಲಾ ರೀತಿಯ ನಷ್ಟಗಳಿಗೂ ನೇಕಾರರನ್ನು ಹೊಣೆಯಾಗಿಸಿ ಅವರ ವೇತನದಿಂದಲೇ ಕಡಿತ ಮಾಡುವ ಕ್ರಮ ಈ ಸೊಸೈಟಿಯಲ್ಲಿದೆ. ಕೆಲವು ನೇಕಾರರು ಕಾಯಿಲೆ ಬಿದ್ದುದರಿಂದ ಉತ್ಪಾದನೆ ಕಡಿಮೆಯಾಗಿ ಸಾಲ ಮರುಪಾವತಿ ನಿಧಾನವಾಗುವ ಪರಿಸ್ಥಿತಿ ಉಂಟಾಯಿತು. ಆದರೂ ಎಲ್ಲಾ ನೇಕಾರರು ತಮ್ಮ ದುಡಿಮೆಯ ವೇತನದಲ್ಲಿ ಒಂದು ಪಾಲನ್ನು ಸಾಲ ಸಂದಾಯಕ್ಕೆ ಪಾವತಿ ಮಾಡುತ್ತಾ ಬರುತ್ತಿದ್ದಾರೆ.

ಸರಕಾರದಿಂದ ಸಿಗುವ ಯಾವುದೇ ಸೌಲಭ್ಯಗಳೂ ನೇಕಾರರಿಗೆ ಈ ಸೊಸೈಟಿಯಲ್ಲಿ ಸಿಗುತ್ತಿಲ್ಲ. ಬದಲಾಗಿ ನೇಕಾರರ ವೇತನದಲ್ಲಿ ಶೇರು ಬಂಡವಾಳಕ್ಕೆ ಪ್ರತಿಬಾರಿಯೂ ಕಡಿತ ಮಾಡಿ ಅಗಾಧ ಪ್ರಮಾಣದಲ್ಲಿ ಶೇರು ಬಂಡವಾಳ ಸಂಗ್ರಹಿಸಿದ್ದು ಇದರ ಪ್ರಯೋಜನ ನೇಕಾರರಿಗೆ ಸಿಗದೆ ಸಂಸ್ಥೆಯ ಕೆಲವೇ ಮಂದಿಯ ಐಷಾರಾಮ್ಯದ ಜೀವನಕ್ಕಾಗಿ ಖರ್ಚಾಗುತ್ತಿದೆ. ಸಾಲ ಮರುಪಾವತಿಗೆ 25 ವರ್ಷಗಳಷ್ಟು ಸಮಯಾವಕಾಶವಿದ್ದರೂ 1996 ರವರೆಗೆ ಬಾಕಿಯಿರುವ ಸಾಲಕ್ಕೆ ಸೊಸೈಟಿಯ ಆಡಳಿತ ಮಂಡಳಿಯು ಕುಂದಾಪುರ ಸಬ್‌ರಿಜಿಸ್ಟ್ರಾರ್ ಕೋರ್ಟಿನಲ್ಲಿ ದಾವಾ ನಡೆಸಿ, ಜಪ್ತಿ ಇನ್ನಿತರ ಕ್ರಮಗಳನ್ನು ಕೈಗೊಂಡು ಬಡ ನೇಕಾರರನ್ನು ಬೀದಿಪಾಲು ಮಾಡುವ ಸನ್ನಾಹ ನಡೆಸುತ್ತಿದೆ. ಸಾಲಗಾರ ನೇಕಾರರು ಮುಖ್ಯಮಂತ್ರಿಗಳಿಗೆ, ಜವಳಿಮಂತ್ರಿಗಳಿಗೆ, ಕಾರ್ಮಿಕ ಮಂತ್ರಿಗಳಿಗೆ, ಜಿಲ್ಲಾ ಉಸ್ತುವಾರಿ ಮಂತ್ರಿಗಳಿಗೆ ಶಾಸಕರಿಗೆ, ಸೊಸೈಟಿಯ ಅಧಿಕಾರಿಗಳಿಗೆ ಸಾಲದ ಬಡ್ಡಿ ಮನ್ನಾ ಮಾಡುವಂತೆ ಸಲ್ಲಿಸಿದ ಮನವಿಗಳನ್ನು ಯಾರೂ ಗಣನೆಗೆ ತೆಗೆದುಕೊಂಡಿಲ್ಲ. ಸಾಲಗಾರ ನೇಕಾರರು ಈಗ ತಲೆಗೆ ಕೈ ಇಟ್ಟು ಚಿಂತಾಕ್ರಾಂತರಾಗಿ ಕುಳಿತುಕೊಳ್ಳುವ ಪರಿಸ್ಥಿತಿ ಉಂಟಾಗಿದೆ. ಸೊಸೈಟಿಯ ಆಡಳಿತ ಮಂಡಳಿ, ಸರಕಾರ, ಶಾಸಕರು ಈ ಬಡ ನೇಕಾರರ ಬಗ್ಗೆ ಗಮನ ಹರಿಸಿ ನೇಕಾರರನ್ನು ಮತ್ತು ಅವರ ಮನೆಯನ್ನು ಉಳಿಸುವ ಕೃಪೆ [illegible] ಜಪ್ತಿ ಇನ್ನಿತರ

ದೇವದಾಸಿಯರ ಸಮಾವೇಶ

ಬಳ್ಳಾರಿ: ಇತ್ತೀಚೆಗೆ ಜನವಾದಿ ಮಹಿಳಾ ಸಂಘಟನೆಯ ನೇತೃತ್ವದಲ್ಲಿ ಕುರುಗೋಡಿನಲ್ಲಿ ನಡೆದ ದೇವದಾಸಿಯರ ಪ್ರಥಮ ಬಳ್ಳಾರಿ ತಾಲ್ಲೂಕು ಮಟ್ಟದ ಸಮಾ ವೇಶವನ್ನು ಉದ್ಘಾಟಿಸಿ ಮಾತನಾಡಿ ವರಲಕ್ಷ್ಮಿ ಅವರು ಇಂದಿನ ರಾಜಕೀಯ ವಲಯದಲ್ಲಿ ಪುರುಷ ಪ್ರಧಾನತೆಯಿಂದ ಮಹಿಳೆ ಕಡೆಗಾಣಿಸ ಲ್ಪಟ್ಟಿದ್ದಾಳೆ ಎಂದರು. ಹೆಣ್ಣು ಎಚ್ಚೆತ್ತುಕೊಂಡು ಸಮಾನತೆ ಗಾಗಿ ಹೋರಾಟ ಮಾಡುವುದು ಇಂದಿನ ಅನಿ ವಾರ್ಯವಾಗಿದೆ. ದೇವದಾಸಿ ಪುನರ್ ವಸತಿ ಸೌಲಭ್ಯ ಮಧ್ಯವರ್ತಿಗಳ ಪಾಲಾಗುತ್ತಿದೆ. ಈ ವಿಷಯದಲ್ಲಿ ಸರಕಾರ ಸಂಪೂರ್ಣ ವಿಫಲ ಹೊಂದಿದೆ ಎಂಬುದು ಸಾಬೀತಾಗಿದೆ. ಹಾಗಾಗಿ ಸೌಲಭ್ಯ ಪಡೆಯಲು ದೇವದಾಸಿ ಯರು ಶಿಕ್ಷಣ ಪಡೆದು ಸಂಘಟಿತರಾಗಿ ಹೋರಾಟ ನಡೆಸಬೇಕೆಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಕಾರ್ಯದರ್ಶಿ ಯು.ಬಸವರಾಜ್ ಮಾತಾಡಿ ದೇವದಾಸಿ ಮಹಿಳೆಯು ಒಬ್ಬ ಹೆಣ್ಣು ಮಗಳಾಗಿ, ಕೂಲಿಕಾರಳಾಗಿ, ಜಾತಿಯಿಂದ ಮತ್ತು ದೇವದಾಸಿಯಾಗಿ ಇಡೀ ಸಮಾಜದ ಅತ್ಯಂತ ಶೋಷಿತ ಮಹಿಳೆಯಾಗಿದ್ದಾಳೆ. ಈ ರೀತಿಯ ಅತ್ಯಂತ ದುರ್ಬಲ ಮಹಿಳೆ ಮುಖ ಎತ್ತಿ ಕೊಂಡು ಓಡಾಡುವ ಪರಿಸ್ಥಿತಿ ಇಲ್ಲವಾಗಿದೆ. ಆದ್ದರಿಂದ ದೇವದಾಸಿ ಮಹಿಳೆಯರು ಸಂಘಟಿತರಾಗಿ ತಮ್ಮ ಬೇಡಿಕೆಗಳನ್ನು ಪಡೆಯಲು ಹೋರಾಟ ಅನಿವಾರ್ಯವಾಗಿದೆ ಎಂದರು.

ಅತಿಥಿಯಾಗಿ ಭಾಗವಹಿಸಿದ್ದ ಕರ್ನಾಟಕ ಪ್ರಾಂತ ರೈತ ಸಂಘದ ವಿ.ಎಸ್.ಶಿವಶಂಕರ್ ಮಾತನಾಡಿ ದೇವದಾಸಿಯ ಪುನರ್ ವಸತಿಗಾಗಿ ಸರಕಾರದಿಂದ ಮಂಜೂರಾದ ಹಣ 'ಬಳ್ಳಾರಿ ಜಿಲ್ಲೆಯಲ್ಲಿ 1.7 ಕೋಟಿ ರೂಪಾಯಿಗಳು ಸರಕಾರಕ್ಕೆ ವಾಪಸು ಕಳಿಸಿರುವುದು ಖಂಡ ನೀಯ ಹಾಗೂ ದೇವದಾಸಿಯರಿಗಾಗಿ ಬಂದ ಹಣವನ್ನು ಉಪಯೋಗಮಾಡಿಕೊಳ್ಳಲು ದೇವದಾಸಿ ಯರೆಲ್ಲರೂ ಒಂದಾಗ ಬೇಕೆಂದರು.

ಅನೇಕ ಹಳ್ಳಿಗಳಿಂದ ಬಂದಿದ್ದ ಸುಮಾರು ನೂರಕ್ಕಿಂತಲೂ ಹೆಚ್ಚು ದೇವದಾಸಿಯರ ತಾಲ್ಲೂಕು ಮಟ್ಟದ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಗೌರವ ಅಧ್ಯಕ್ಷರು: ಯು. ಬಸವರಾಜು, ಅಧ್ಯಕ್ಷರು : ಎಂ.ಅನ್ನಪೂರ್ಣ, ಕಾರ್ಯದರ್ಶಿ: ಎನ್.ಟಿ.ಲಲಿತ ಮತ್ತು ಸದಸ್ಯ ರನ್ನಾಗಿ ಇತರೆ 13 ಮಂದಿಯನ್ನು ಆರಿಸ ಲಾಯಿತು. 18 ಬೇಡಿಕೆಗಳುಳ್ಳ ಮನವಿ ಪತ್ರವನ್ನು ಜಿಲ್ಲಾಧಿಕಾರಿಗಳಿಗೆ ಕೊಡುವ ನಿರ್ಣಯವನ್ನು ಸರ್ವಸಮ್ಮತವಾಗಿ ಅಂಗೀಕರಿಸಲಾಗಿದ್ದು, ತಾಲ್ಲೂಕಿನ ಎಲ್ಲಾ ಗ್ರಾಮದಲ್ಲಿರುವ ದೇವದಾಸಿ ಯರನ್ನು ಸಂಘಟಿಸಲು ಸಹ ನಿರ್ಣಯ ಕೈಗೊಂಡಿದೆ.

ರಾಜ್ಯ ಮಟ್ಟದ ಪಕ್ಷದ ಶಾಲೆ

ಪಕ್ಷದ ರಾಜ್ಯಮಟ್ಟದ ಶಾಲೆ ಜೂನ್ 8 ರಿಂದ 12 ರವರೆಗೆ ಮುತ್ತೂರಿನ ರಾಮಸ್ವಾಮಿ ಪಾಳ್ಯದಲ್ಲಿ ನಡೆಯಿತು. ಪಕ್ಷದ ಜಿಲ್ಲಾ ಮಟ್ಟದ ಶಿಕ್ಷಕರಿಗೆಂದು ಈ ಶಾಲೆ ವ್ಯವಸ್ಥೆಯಾಗಿತ್ತು. ಒಟ್ಟು 77 ಸದಸ್ಯರು ಭಾಗವಹಿಸಿದ್ದ ಈ ಶಾಲೆಯನ್ನು ಪಕ್ಷದ ಪಾಲಿಟ್‌ಬ್ಯೂರೋ ಸದಸ್ಯರಾದ ಕಾಂ. ಪಿ.ರಾಮಚಂದ್ರನ್ ಉದ್ಘಾಟಿಸಿದರು.

ಉದ್ಘಾಟನಾ ಭಾಷಣ ಮಾಡುತ್ತಾ ಅವರು ಕಮ್ಯುನಿಸ್ಟ್ ಪ್ರಣಾಳಿಕೆಯ 150ನೇ ವರ್ಷವನ್ನು ಆಚರಿಸುತ್ತಿರುವ ಈ ಸಂದರ್ಭದಲ್ಲಿ ಇಂತಹ ಶಾಲೆ ನಡೆಯುವುದು ಬಹಳ ಸಂತಸದ ವಿಷಯ, ಪಕ್ಷದ ಸದಸ್ಯರು ಉತ್ತಮ ಕ್ರಾಂತಿಕಾರಿಗಳಾಗುವಲ್ಲಿ ಈ [illegible] ಪಕ್ಷದ ಸದಸ್ಯರು ಸ್ವತಃ ಅಧ್ಯಯನ ಮಾಡುವುದರ ಮೂಲಕ ಉತ್ತಮ ಶಿಕ್ಷಕರಾಗಲು ಆ ಮೂಲಕ ಪಕ್ಷದ ಸೈದ್ಧಾಂತಿಕ ಬೆಳವಣಿಗೆಗೆ ಕಾರಣವಾಗಬೇಕೆಂದರು.

ಎರಡು ಗಂಟೆಗಳ ಕಾಲ ವಿಷಯ ಮಂಡನೆ ನಂತರ ಒಂದರಿಂದ ಎರಡು ಗಂಟೆಗಳ ಕಾಲ ಗುಂಪು ಚರ್ಚೆ ನಂತರ ಒಂದು ಗಂಟೆ ಪ್ರಶ್ನೋತ್ತರದ ಕಾರ್ಯಕ್ರಮವಿದ್ದ ಈ ಶಾಲೆಯಲ್ಲಿ ದ್ವಂದ್ವಮಾನ ಭೌತಿಕವಾದ ಮತ್ತು ಚಾರಿತ್ರಿಕ ಭೌತಿಕ ವಾದದ ಬಗ್ಗೆ ರಾಜ್ಯ ಸಮಿತಿಯ ಕಾರ್ಯದರ್ಶಿಗಳಾದ ಕಾಂ. ಪಿ.ರಾಮಚಂದ್ರರಾವ್, ಗುತ್ತೇದಾರಿ ಬಂಡವಾಳಿಶಾಹಿ ಜಾಗತೀಕರಣದ ಬಗ್ಗೆ ಕಾ. ವಿ.ಜೆ.ಕೆ.ನಾಯರ್, ಉದಾರೀಕರಣದ ರಾಜಕೀಯ ಅರ್ಥಶಾಸ್ತ್ರದ ಬಗ್ಗೆ ಕಾಂ. ಜಿ.ಎನ್.ನಾಗರಾಜ್, ಕೃಷಿ ರಂಗದ ರಾಜಕೀಯ ಅರ್ಥಶಾಸ್ತ್ರದ ಬಗ್ಗೆ ಕಾಂ. ಜಿ.ವಿ.ಶ್ರೀರಾಮರೆಡ್ಡಿ, ಪಕ್ಷದ ಕಾರ್ಯಕ್ರಮದ ಬಗ್ಗೆ ಪಾಲಿಟ್‌ಬ್ಯೂರೋ ಸದಸ್ಯರಾದ ಕಾಂ. ಪ್ರಕಾಶ್ ಕಾರಟ್. ಪಕ್ಷದ ಸಂಘಟನೆಯ ಬಗ್ಗೆ ಕಾ. ಸಿ.ನಂಜುಂಡಪ್ಪ, ಜಾತಿ ಬಗ್ಗೆ ಮಾರ್ಕ್ಸ್‌ವಾದಿಗಳ ನಿಲುವಿನ ಬಗ್ಗೆ ಪಾಲಿಟ್ ಬ್ಯೂರೋ ಸದಸ್ಯರಾದ ಕಾಂ. ಪ್ರಕಾಶ್ ಕಾರಟ್. ಸಾಮೂಹಿಕ ಸಂಘಟನೆಗಳು ಮತ್ತು ಪಕ್ಷದ ಬಗ್ಗೆ ಕಾ. ವಿ.ಜೆ.ಕೆ.ನಾಯರ್ ವಿಷಯ ಮಂಡನೆ ಮಾಡಿ ಪ್ರಶ್ನೆಗಳಿಗೆ ಉತ್ತರಿಸಿದರು.

ಇಂತಹ ಶಾಲೆಗಳು ಹೆಚ್ಚಾಗಿ ಮತ್ತು ಹೆಚ್ಚು ಸುವ್ಯವಸ್ಥಿತವಾಗಿ ನಡೆದರೆ ಪಕ್ಷದ ಶಿಕ್ಷಕರಿಗೆ ಬಹಳ ಉಪಯುಕ್ತವಾಗುತ್ತದೆ ಎಂದು ಹಾರೈಸುತ್ತಾ ಈ ಶಾಲೆಯ ನಂತರ ಜಿಲ್ಲಾ ಮಟ್ಟಗಳಲ್ಲಿ ಇಂತಹ ಶಾಲೆಗಳನ್ನು ನಡೆಸಬೇಕೆಂದು ಕಾ. ಪಿ.ರಾಮಚಂದ್ರ ರಾವ್ ಮುಕ್ತಾಯ ಸಮಾರಂಭದಲ್ಲಿ ಹೇಳಿದರು.

ವೈದ್ಯರಿಗೆ ಬೆದರಿಕೆ: ಖಂಡನೆ

ವಿರಾಜಪೇಟೆಯ ಸರಕಾರಿ ಆಸ್ಪತ್ರೆಯ ತಜ್ಞರೊಬ್ಬರು ಅನಾರೋಗ್ಯ ನಿಮಿತ್ತ ರಜೆ ಮಾಡಿ ಮನೆಯಲ್ಲಿ ವಿಶ್ರಾಂತಿ ತೆಗೆದು ಕೊಳ್ಳುತ್ತಿದ್ದವರನ್ನು ವಿರಾಜಪೇಟೆ ತಾಲ್ಲೂಕು ಯುವ ಜನತಾದಳದ ಅಧ್ಯಕ್ಷ ಕೋಳೆರ ದಯ ಚಂಗಪ್ಪ ರಾತ್ರಿ 11 ಗಂಟೆಗೆ ಕರೆದೆಬ್ಬಿಸಿ ಅವರೊಡನೆ ಅನಾಗರೀಕರಂತೆ ವರ್ತಿಸಿ ಅವರನ್ನು ಅವಾಚ್ಯ ಶಬ್ದಗಳಿಂದ ಬೈದು ಮಾನಸಿಕ ಹಿಂಸೆಗೆ ಒಳಪಡಿಸಿದ್ದಲ್ಲದೆ ದೈಹಿಕ ಬೆದರಿಕೆ ಹಾಕಿರುವುದನ್ನು ಭಾರತ (ಕಮ್ಯುನಿಸ್ಟ್) ಮಾರ್ಕ್ಸ್‌ವಾದಿ ಪಕ್ಷದ ವಿರಾಜಪೇಟೆ ಶಾಖೆ ಖಂಡಿಸಿದೆ.

ತನ್ನ ಪಕ್ಷ ಅಧಿಕಾರದಲ್ಲಿರುವ ಈ ರಾಜ್ಯದಲ್ಲಿರುವ ತಾಲ್ಲೂಕು ಆಸ್ಪತ್ರೆಯಲ್ಲಿ ನೀರಿನ ವ್ಯವಸ್ಥೆ ಸರಿಯಾಗಿಲ್ಲ ಕೇವಲ 6 ವೈದ್ಯರುಗಳಿದ್ದು 6-8 ಹುದ್ದೆ ಖಾಲಿ ಇದೆ, ದಾದಿಯರ ಹುದ್ದೆ ಖಾಲಿ ಬಿದ್ದಿದೆ ನಾಲ್ಕನೇ ವಿಭಾಗದ ನೌಕರರ ಸಂಖ್ಯೆ ಇನ್ನೂ ಭರ್ತಿಯಾಗಿಲ್ಲ. ವೈದ್ಯರುಗಳು ವಾಸಿಸುವ ವಾಸಗೃಹಗಳು ಸೋರುತ್ತಿವೆ. ಈ ಯಾವ ವಿಷಯದ ಕಡೆಗೂ ಒಮ್ಮೆಯೂ ಗಮನ ಕೊಡದ ಈವ್ಯಕ್ತಿ ಅಸಹಾಯಕರಾದ ವೈದ್ಯರೊಬ್ಬರ ಮೇಲೆ ಹಾರಿಬಿದ್ದದ್ದು ನಾಚಿಕೆಗೇಡಿನ ವಿಚಾರವಾಗಿದೆ ಎಂದಿದೆ.

ಅನಾರೋಗ್ಯದಿಂದ ಬಳಲುತ್ತಿದ್ದರೂ ಪುರ ಸಭಾಧ್ಯಕ್ಷರ ವಿನಂತಿಯ ಮೇರೆಗೆ ಮಾನವೀಯ ದೃಷ್ಟಿಯಿಂದ ಆಸ್ಪತ್ರೆಗೆ ತೆರಳಿ ಶಸ್ತ್ರ ಚಿಕಿತ್ಸೆ ನಡೆಸಿ ಬಡರೋಗಿ ಒಬ್ಬಳ ಜೀವ ಉಳಿಸಿದ ಆ ವೈದ್ಯರನ್ನು ಪಕ್ಷದ ಶಾಖೆ ಅಭಿನಂದಿಸಿದೆ.

ರಾಜ್ಯ ಸರಕಾರಿ ನೌಕರರ ಸಂಘದ ಚುನಾವಣೆ

ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ವಿವಿಧ ಹಂತದ ಇಲಾಖಾ ವಾರು ಚುನಾವಣೆಗಳನ್ನು 1997 ನೇ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ನಡೆಸಲು ಜೂನ್ 22 ರಂದು ಬೆಂಗಳೂರಿನಲ್ಲಿ ಸೇರಿದ ಸಂಘದ ರಾಜ್ಯ ಮಂಡಳಿ ಸಭೆಯಲ್ಲಿ ತೀರ್ಮಾನಿಸಲಾಯಿತು.

ತಾಲ್ಲೂಕು ಮತ್ತು ಜಿಲ್ಲಾ ಮಟ್ಟಗಳಲ್ಲಿ ಸೆಪ್ಟೆಂಬರ್ ತಿಂಗಳಲ್ಲಿ ಹಾಗೂ ರಾಜ್ಯ ಮಟ್ಟದಲ್ಲಿ ಅಕ್ಟೋಬರ್ ತಿಂಗಳಲ್ಲಿ ಚುನಾವಣೆಗಳು ನಡೆಯಲಿವೆ.

DYFI ರಾಜ್ಯ ಶಿಬಿರ ಮೈಸೂರಿನಲ್ಲಿ

ಡಿ.ವೈ.ಎಫ್.ಐ. ರಾಜ್ಯ ಮಟ್ಟದ ಅಧ್ಯಯನ ಶಿಬಿರವು ಜುಲೈ 9 ರಿಂದ 12 ರವರೆಗೆ ಮೈಸೂರಿನಲ್ಲಿ ನಡೆಯುತ್ತಿದೆ. ಶಿಬಿರವು "ಕ್ಷೇಮಾಲಯ" ಬೋಗಾವೇ ರಸ್ತೆ, ಮಾನಸ ಗಂಗೋತ್ರಿ, ಮೈಸೂರಿನಲ್ಲಿ ನಡೆಯುತ್ತದೆ. ಪ್ರತಿನಿಧಿಗಳು ಜುಲೈ 9ರಂದು ಬೆಳಿಗ್ಗೆ 8 ಘಂಟೆಯೊಳಗೆ ಸ್ಥಳದಲ್ಲಿ ಹಾಜರಿರಬೇಕೆಂದು ರಾಜ್ಯ ಸಮಿತಿ ತಿಳಿಸಿದೆ.

ಕರ್ನಾಟಕದಲ್ಲಿ ಕಳೆದ ವಾರ

ಜೂನ್ 20

➤ಕೆ.ಪಿ.ಸಿ.ಸಿ. ಅಧ್ಯಕ್ಷ ಮತ್ತು ಮತ್ತಿತರ ಪದಾಧಿಕಾರಿಗಳ ಚುನಾವಣೆ ಮತ್ತೆ ಮುಂದಕ್ಕೆ

➤ಸುಮಾರು 70.41 ಲಕ್ಷ ರೂಗಳ ಮೌಲ್ಯದ ಅಕ್ಕಿಯನ್ನು ಆಹಾರ ಮತ್ತು ನಾಗರೀಕ ಪೂರೈಕೆ ಗೋದಾಮುಗಳಿಗೆ ತಲುಪಿಸುವ ಬದಲು ಅಕ್ರಮವಾಗಿ ಬೇರೆಡೆ ಸಾಗಿಸಿದ ಆಪಾದನೆಯ ಮೇರೆಗೆ ನಾಲ್ವರು ಹಿರಿಯ ಸರಕಾರಿ ಅಧಿಕಾರಿಗಳ ಅಮಾನತು ಎಂದು ಸಚಿವರು

➤ರೈತರ ಸಾಲದ ಮೇಲಿನ ನೊಂದಣಿ ಶುಲ್ಕ ಸಂಪೂರ್ಣ ರದ್ದು ಎಂದು ಕೃಷಿ ಸಚಿವರು

ಜೂನ್ 21

➤ಕೃಷ್ಣಾ ಮೇಲ್ದಂಡೆ ಯೋಜನೆ ಕಾಮಗಾರಿಯಲ್ಲಿ ನಿಗದಿತ ಮೊತ್ತಕ್ಕಿಂತ ಹೆಚ್ಚು ಬಿಲ್‌ಗಳನ್ನು ಪಾವತಿಸದಂತೆ ಕೃಷ್ಣಾ ಜಲ ಭಾಗ್ಯ ನಿಗಮದ ಹಣಕಾಸು ನಿರ್ದೇಶಕರ ಆದೇಶ.

ಜೂನ್ 22

➤3 ತಿಂಗಳಲ್ಲಿ ನೀರಾವರಿ ಪಂಪ್‌ಸೆಟ್‌ಗಳನ್ನು ಬಳಸುತ್ತಿರುವ ರೈತರಿಂದ ಬಾಕಿ ಹಣವನ್ನು ವಸೂಲು ಮಾಡಬೇಕು ಎಂದು ಸಚಿವ ಸಂಪುಟದ ಕೆಇಬಿ ಕಾರ್ಯ ವೈಖರಿ ಅಧ್ಯಯನ ಉಪಸಮಿತಿ ಗಡುವು.

➤ಮಂಗಳೂರು ಪವರ್ ಕಂಪನಿಯ ವಿದ್ಯುತ್ ಖರೀದಿ ಒಪ್ಪಂದವನ್ನು ಪರಿಷ್ಕರಿಸಿ ವಿದ್ಯುತ್ ಖರೀದಿ ಬೆಲೆಯನ್ನು ಇನ್ನಷ್ಟು ಹೆಚ್ಚಿಸಬೇಕು ಎಂದು ಕೇಂದ್ರವಿದ್ಯುತ್ ಮಂಡಳಿಗೆ ಕೊಜೆಂಟ್ರಿಕ್ಸ್ ಮನವಿ.

ಜೂನ್ 23

➤ಹುಬ್ಬಳ್ಳಿ ನಗರ ಪಾಲಿಕೆಯಲ್ಲಿ ಅವಳಿನಗರಗಳಿಗೆ ಪೂರೈಸಲಾಗುತ್ತಿರುವ ಕುಡಿಯುವ ನೀರು ಕಲುಷಿತಗೊಳ್ಳುತ್ತಿರುವ ಬಗ್ಗೆ ತೀವ್ರ ಕೋಲಾಹಲ.

➤ಪ್ರಸಕ್ತ ಸಾಲಿನಲ್ಲಿ ಆರಾಧನಾ ಯೋಜನೆಯಡಿ ಐದು ಕೋಟಿ ರೂ. ಹಾಗೂ ಪುರಾತನ ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಎರಡು ಕೋಟಿರೂ ಬಿಡುಗಡೆ ಮಾಡಿರುವುದಾಗಿ ಮುಜರಾಯಿ ಖಾತೆ ಸಚಿವರು.

ಜೂನ್ 24

➤ರಸ್ತೆ ಅಪಘಾತದಲ್ಲಿ ಗ್ರಾಮೀಣ ವಿಧಾನ ಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ಶ್ರೀಕಾಂತ್ ರುದ್ರಪ್ಪ ಅಂಬಡಗಟ್ಟಿರವರ ಸಾವು.

ಜೂನ್ 25

➤1995 ರ ಕರ್ನಾಟಕ ಶಿಕ್ಷಣ ತಿದ್ದುಪಡಿ ಕಾಯ್ದೆಯ ಪ್ರಕಾರ ಕಾಲೇಜುಗಳಲ್ಲಿ ಡೊನೇಷನ್ ಹಾವಳಿಗೆ ಕಡಿವಾಣ ಹಾಕಲು. ಸಂಬಂಧಪಟ್ಟವರ ವಿರುದ್ಧ ಕ್ರಮ ಕೈಗೊಳ್ಳಲು ಕಾಲೇಜು ಶಿಕ್ಷಣ ಉಪನಿರ್ದೇಶಕರ ನೇತೃತ್ವದಲ್ಲಿ ಜಾಗೃತ ದಳ ರಚನೆ.

➤ಎಪಿಎಂಸಿ ಸದಸ್ಯರ ನಾಮಕರಣಕ್ಕೆ ಹೈಕೋರ್ಟ್ ಅನುಮತಿ. ಆದರೆ ರಿಟ್ ಅರ್ಜಿ ಇತ್ಯರ್ಥ ಆಗುವವರೆಗೆ ಅಧ್ಯಕ್ಷ, ಉಪಾಧ್ಯಕ್ಷ ಚುನಾವಣೆ ನಡೆಸದಿರಲು ಆದೇಶ.

➤ಕಾರವಾರದ ಬಳಿಯ ಕದ್ರಾ ಜಲ ವಿದ್ಯುತ್ ಯೋಜನೆಯ ಮೊದಲ ಘಟಕ ಪೂರ್ಣ ಸಾಮರ್ಥ್ಯದಲ್ಲಿ ವಿದ್ಯುತ್ ಉತ್ಪಾದನೆ ಆರಂಭಿಸಿರುವುದಾಗಿ ಮುಖ್ಯ ಇಂಜಿನಿಯರ್.

ಜೂನ್ 26

➤ಕಾವೇರಿ ನೀರು ಕುರಿತಂತೆ ಕೇಂದ್ರ ಸರಕಾರದ ಅಧಿಸೂಚನೆಗಳನ್ನು ತಿರಸ್ಕರಿಸಬೇಕು ಎಂದು ಕಾಂಗ್ರೆಸ್‌ನ 'ಆಗ್ರಹ'

➤ಕನಿಷ್ಠ ವೇತನ ನಿಗದಿಯಲ್ಲಿ ಮೂಲ ವೇತನ ತುಟ್ಟಿಭತ್ಯೆ, ಇತರ ಭತ್ಯೆ ಹೇಗೆ ಯಾವುದು ಎಷ್ಟೆಷ್ಟು ಎಂಬ ಲೆಕ್ಕಾಚಾರದಲ್ಲಿ ಹೂಡಬೇಕೆ ಹೊರತು ಒಟ್ಟಾರೆಯಾಗಿ ಅಲ್ಲ ಎಂದು ಕರ್ನಾಟಕ ಹೈಕೋರ್ಟ್ ಆದೇಶ. ಇಬ್ಬರು ಮಾಲಿಕರ ಮೇಲ್ಮನವಿ ವಜಾ.

ಕಳೆದ 24 ದಿನಗಳ ಸರಾಸರಿ ಪ್ರಕಾರ ರಾಜ್ಯದಲ್ಲಿ ಮುಂಗಾರು ದುರ್ಬಲವಾಗಿದೆ ಎಂದು ವರದಿಯಾಗಿದೆ. ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಮೈಸೂರು, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಕೊಡಗು ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮಾಮೂಲಿಗಿಂತ ಕಡಿಮೆ ಮಳೆ, ಕೋಲಾರ, ಚಿತ್ರದುರ್ಗ, ಶಿವಮೊಗ್ಗ, ಮಂಡ್ಯ, ಹಾಸನ, ಬಳ್ಳಾರಿ, ಕಲ್ಬುರ್ಗಿ, ಬೀದರ್, ಧಾರವಾಡ ಜಿಲ್ಲೆಗಳಲ್ಲಿ ಮಾಮೂಲು ಮಳೆ, [illegible] ಅಧಿಕ ಮಳೆಯಾದ ವರದಿಯಾಗಿದೆ

ಜುಲೈ 1, 1997
ಈ ಶತಮಾನದ ಇನ್ನೊಂದು ಮಹತ್ವದ ದಿನ

- ಅಫೀಮು, ಗುಂಡುಗಳ ದಾಳಿಯಿಂದ ಚೀನಾದ ಒಂದು ಭಾಗದ ಮೇಲೆ ಹೊರಿಸಿದ ನೂರೈವತ್ತು ವರ್ಷದ ದಾಸ್ಯ ಕೊನೆಗಾಣುವ ದಿನ
- ಚೀನಾವನ್ನು ಅಫೀಮಿನಿಂದ ನಿಸ್ತೇಜಗೊಳಿಸಿ ವಸಾಹತುಶಾಹಿ ಹೊರಿಸಿದ "ರಾಷ್ಟ್ರೀಯ ಲಜ್ಜೆ" ಕೊನೆಗೊಳ್ಳುವ ದಿನ
- ಕೆಲವೇ ದಶಕಗಳ ಹಿಂದೆ ಸೂರ್ಯಾಸ್ತ ಕಾಣದ ಬ್ರಿಟಿಷ್ ಸಾಮ್ರಾಜ್ಯದ ಕೊನೆಯ ವಸಾಹತು ಸ್ವತಂತ್ರವಾಗುವ ದಿನ
- ಹಾಂಗ್‌ಕಾಂಗ್ ಸತ್ತುಹೋಗುತ್ತದೆ ಎಂದು ಸಾಮ್ರಾಜ್ಯಶಾಹಿ ಮಾಧ್ಯಮಗಳ ಕುಹಕ, ಸುಳ್ಳು ಅಪಪ್ರಚಾರಗಳ ಒಂದು ದಶಕದ ಅಬ್ಬರವನ್ನು ಮೀರಿ ತಮ್ಮ ಭವಿಷ್ಯವನ್ನು ತಾವೇ ನಿರ್ಧರಿಸುವ ಕೆಲಸವನ್ನು ಹಾಂಗ್ ಕಾಂಗ್ ನಾಗರಿಕರು ಆತ್ಮವಿಶ್ವಾಸದಿಂದ ಆರಂಭಿಸುವ ದಿನ.
- ಜನಾಂಗೀಯ ವಾದ, ಪ್ರಾದೇಶಿಕ ವಿವಾದಗಳು, ಸೈದ್ಧಾಂತಿಕ ಭಿನ್ನತೆ ತುಂಬಿರುವ ಇಂದಿನ ಜಗತ್ತಿನಲ್ಲಿ 'ಒಂದು ದೇಶ ಎರಡು ವ್ಯವಸ್ಥೆ' ನೀತಿಯನ್ನು ಜಾರಿಗೊಳಿಸಿ ಚರಿತ್ರೆಯಲ್ಲಿ ಉಳಿದುಹೊದ ಒಂದು ಸಮಸ್ಯೆಯನ್ನು ಯಶಸ್ವಿಯಾಗಿ ಪರಿಹರಿಸಿ ಅಂತರ್‍ರಾಷ್ಟ್ರೀಯ ಸಂಬಂಧಗಳಿಗೆ ಮಾದರಿಯಾಗುವ ದಿನ.

ಈ ದಿನದ ಹಿನ್ನೆಲೆ, ಸುತ್ತಲಿರುವ ಪ್ರಶ್ನೆಗಳು, ಸಮಸ್ಯೆಗಳು, ಸಮಾಜವಾದದ ಹೋರಾಟದಲ್ಲಿ ಅದರ ಪರಿಣಾಮಗಳ ಮೇಲೆ ನೋಟ ಹರಿಸುವ ಲೇಖನವಿದು.

ಬ್ರಿಟಿಷ್ ವಸಾಹತುಶಾಹಿಯ ಸೂರ್ಯಾಸ್ತ



香港 ಹಾಂಗ್‌ಕಾಂಗ್
ಮರಳಿ ತಾಯ ಮಡಿಲಿಗೆ

- ಶರತ್ ಚಂದ್ರ

ಜುಲೈ 1 - 1997. ಬ್ರಿಟಿಷರ ವಸಾಹತು ಶಾಹಿಗೆ ಅಡಿಯಾಳಾಗಿದ್ದ ಹಾಂಗ್‌ಕಾಂಗ್‌ನ 65 ಲಕ್ಷ ಜನ ತಮ್ಮ ಭವಿಷ್ಯವನ್ನು ತಮ್ಮ ಕೈಗೆ ತೆಗೆದುಕೊಳ್ಳುತ್ತಾರೆ. ಹಾಂಗ್‌ಕಾಂಗ್ ಬ್ರಿಟಿಷರ ಕೊನೆಯ ವಸಾಹತು. 20ನೇ ಶತಮಾನದ ಈ ಅದ್ಭುತವನ್ನು ನೋಡಲು ಏಳು ಸಾವಿರಕ್ಕೂ ಹೆಚ್ಚು ಪತ್ರಕರ್ತರು, ದೇಶಗಳ ಮುಖ್ಯಸ್ಥರು ಬಂದಿಳಿಯುತ್ತಿದ್ದಾರೆ. ಜೂನ್ 30 ರ ಮಧ್ಯರಾತ್ರಿ ಬ್ರಿಟಿಷರು ಹಾಂಗ್ ಕಾಂಗ್‌ನಿಂದ ಕಾಲ್ತೆಗೆಯುತ್ತಿದ್ದಾರೆ. 150 ವರ್ಷಗಳ ಆಳ್ವಿಕೆಯ ನಂತರ ಹಾಂಗ್‌ಕಾಂಗ್ ಮರಳಿ ತನ್ನ ತಾಯ್ನಾಡಾದ ಚೀನಾಕ್ಕೆ ಮರಳುತ್ತಿದೆ - ಸ್ವಾಯತ್ತತೆಯುಳ್ಳ ವಿಶೇಷ ಆಡಳಿತ ಪ್ರದೇಶವಾಗಿ.

ಏನೀ ಘಟನೆಯ ವಿಶೇಷತೆ? ಎಲ್ಲಾ ಮಾಧ್ಯಮಗಳಲ್ಲಿ ಹಾಂಗ್‌ಕಾಂಗ್ ಸುದ್ದಿಯೋ ಸುದ್ದಿ. ಹಿಂದೆ ಹಲವು ಬಾರಿ ವಸಾಹತುಶಾಹಿಯಿಂದ ದೇಶಗಳು ಸ್ವತಂತ್ರವಾಗಿದೆ. ಆದರೆ ಒಂದು ದೇಶದಿಂದ ಸ್ವತಂತ್ರವಾಗಿ, ಇನ್ನೊಂದು ದೇಶದ ಭಾಗವಾದದ್ದು ಇಲ್ಲವೇ ಇಲ್ಲವೆನ್ನಬಹುದು. ಜಗತ್ತಿನ ಚರಿತ್ರೆಯಲ್ಲಿ ಬೇರೆ ಯಾವುದೇ ದೇಶದ ಸ್ವಾತಂತ್ರ್ಯ ದಿನ ಹಲವಾರು ವರ್ಷಗಳ ಮೊದಲೇ ನಿಗದಿಯಾದದ್ದಿಲ್ಲ ಅಂತ ಕಾಣುತ್ತದೆ. ಇವೆಲ್ಲಕ್ಕಿಂತ ಹೆಚ್ಚಾಗಿ ಎರಡು ಬೇರೆ ಬೇರೆ ಸಾಮಾಜಿಕ ವ್ಯವಸ್ಥೆಯುಳ್ಳ ದೇಶಗಳು ಒಂದೇ ದೇಶವಾದದ್ದು ಬಹುಶಃ ಇದೇ ಮೊದಲು - ಆ ಎರಡು ವ್ಯವಸ್ಥೆಗಳನ್ನು ಹಾಗೆಯೇ ಉಳಿಸಿಕೊಂಡು, ಅದೂ ಶಾಂತಿಯುತವಾಗಿ ಒಪ್ಪಂದದ ಪ್ರಕಾರ.

ಹಾಂಗ್‌ಕಾಂಗ್ (ಚೀನಿ. ಭಾಷೆಯಲ್ಲಿ ಇದರ ಅರ್ಥ 'ಸುವಾಸನೆಯ ಬಂದರು' ಎಂದಂತೆ)ನ ಈ ಶಾಂತಿಯುತ ಹಸ್ತಾಂತರವನ್ನು ಹಾಂಗ್‌ಕಾಂಗ್‌ನ ವಿಶಿಷ್ಟ ಅಂತರ್‍ರಾಷ್ಟ್ರೀಯ ಸ್ಥಾನಮಾನದಿಂದಾಗಿ ಅವರವರ ಸೈದ್ಧಾಂತಿಕ ವರ್ಗ ದೃಷ್ಟಿಗನುಗುಣವಾಗಿ ಎಲ್ಲರೂ ತಮ್ಮದೇ ಆದ ರೀತಿಯಲ್ಲಿ ಅರ್ಥೈಸುತ್ತಿದ್ದಾರೆ.

ಹಾಂಗ್‌ಕಾಂಗ್‌ನ ಹಿನ್ನೆಲೆ

ಹಾಂಗ್‌ಕಾಂಗ್ ಚೀನಾದ ದಕ್ಷಿಣದಲ್ಲಿರುವ ದ್ವೀಪ ಸಮೂಹ ಮತ್ತು ಚೀನಾ ಸಮುದ್ರ ಭಾಗದಲ್ಲಿರುವ ಕೌಲೂನ್ ಎಂಬ ಸಣ್ಣ ಪರ್ಯಾಯ ದ್ವೀಪಗಳನ್ನೊಳಗೊಂಡ ಸುಮಾರು ಸಾವಿರ ಚದರ ಕಿ.ಮೀ. ನ ಪ್ರದೇಶ. ಈ ದ್ವೀಪ ಸಮೂಹದ ಸುತ್ತಮುತ್ತ ಅತ್ಯುತ್ತಮ ಆಳ ಸಮುದ್ರದ ಬಂದರಿಗೆ ಅನುಕೂಲವಾದ ಪ್ರಾಕೃತಿಕ ಸೌಲಭ್ಯವಿದೆ. ಶತಮಾನಗಳಿಂದ ಚೀನಾ ದೇಶದ ಅಂಗವಾಗಿದ್ದ ಹಾಂಗ್‌ಕಾಂಗ್ ಮೊದಲಿಂದಲೂ, ಜಗತ್ತಿಗೆ ಚೀನಾದ ಹೆಬ್ಬಾಗಿಲಿನಂತಿತ್ತು. ಚೀನಾದ ಜತೆ ಅಫೀಮು ವ್ಯಾಪಾರ ನಡೆಸಲು ಪ್ರವೇಶ ದ್ವಾರಗಳಿಗೆ ನೆಲೆ ಹುಡುಕುತ್ತಿದ್ದ ಬ್ರಿಟಿಷ್ ನಾವಿಕರನ್ನು ಈ ದ್ವೀಪ ಸಮೂಹ ಆಕರ್ಷಿಸಿತು. ಈ ದ್ವೀಪ ಸಮೂಹವನ್ನು ಸ್ಥಳೀಯರು 'ಕಡಲುಗಳ್ಳರ ದ್ವೀಪ' ವೆಂದು ಕರೆಯುತ್ತಿದ್ದರಂತೆ. ಬ್ರಿಟಿಷರ ಅಫೀಮು ವ್ಯಾಪಾರವನ್ನು ನಿಗ್ರಹಿಸಲು ಪ್ರಯತ್ನಿಸಿದ ಆಗಿನ ಚೀನಾದ ರಾಜರ ಮೇಲೆ ಬ್ರಿಟಿಷರು ಯುದ್ಧ ಹೂಡಿ ಈ ಪ್ರದೇಶವನ್ನು ಚೀನಾದಿಂದ ಕಸಿದು ಕೊಂಡರು. ಹಂತ ಹಂತವಾಗಿ - 50 ವರ್ಷಗಳಲ್ಲಿ. ಕಸಿದುಕೊಂಡ 50 ವರ್ಷಗಳ ನಂತರ ಗುಂಡು ಮದ್ದಿನ ಬಲದಿಂದ, ಆಗಿನ ಭ್ರಷ್ಟ ಚೀನೀ ರಾಜನಿಂದ 99 ವರ್ಷಗಳ ಕಾಲಕ್ಕೆ ಈ ಪ್ರದೇಶವನ್ನು ಚಿಕ್ಕಾಸೂ ಕೊಡದೆ ಭೋಗ್ಯಕ್ಕೆ ಪಡೆದು ಕೊಂಡರು. 1898 ರಲ್ಲಿ ಆಗ ದುರ್ಬಲವಾಗಿದ್ದ ಚೀನಾದ ರಾಜರ ಮೇಲೆ ಮೂರು ಅಸಮಾನ ಒಪ್ಪಂದಗಳನ್ನು ಹೇರಲಾಯಿತು. ಆನಂತರದ ಯಾವುದೇ ಚೀನಾದ ಸರ್ಕಾರಗಳು (ಸನ್-ಯಾಟ್ ಸೇನರ, ಚಿಯಾಂಗ್ ಕೈ ಶೇಕರ ಸರ್ಕಾರಗಳಾಗಲಿ, ಕಮ್ಯುನಿಸ್ಟ್-ರಾಷ್ಟ್ರೀಯವಾದಿಗಳ ಸಂಯುಕ್ತ ರಂಗವಾಗಲಿ, ಕಮ್ಯುನಿಸ್ಟ್ ಸರ್ಕಾರವಾಗಲಿ) ಈ ಅಸಮಾನ ಒಪ್ಪಂದಗಳನ್ನು ಮಾನ್ಯ ಮಾಡಲಿಲ್ಲ. ಆದರೂ ಹಾಂಗ್‌ಕಾಂಗ್ ಬ್ರಿಟಿಷ್ ವಸಾಹತುವಾಗುಳಿಯಿತು. ಚೀನಾ ಅದನ್ನು ವಾಪಸು ಪಡೆಯಲು ಮಾಡಿದ ಪ್ರಯತ್ನಗಳು ವಿಫಲವಾದವು. ಕೊನೆಗೆ ಮನಸ್ಸಿಲ್ಲದ ಮನಸ್ಸಿನಿಂದ ಭೋಗ್ಯದ ಅವಧಿ ಮುಗಿದ ಮೇಲೆ, ಅದೂ ದೀರ್ಘ ಮಾತುಕತೆ ನಡೆಸಿದ ನಂತರವೇ ಬ್ರಿಟಿಷ್ ತನ್ನ 'ಪುಕ್ಕಟೆ' ವಸಾಹತನ್ನು ಬಿಟ್ಟುಕೊಡಲು ತಯಾರಾಯಿತು. (ಹಾಂಗ್‌ಕಾಂಗ್‌ನ ಕಥೆಯ ಸಾರಾಂಶವನ್ನು- 'ನೂರೈವತ್ತು ವರ್ಷಗಳ ದಾಸ್ಯದ ಕೊಂಡಿಗಳು' ನೋಡಿ, ಪುಟ 7ರಲ್ಲಿ)

ಚೀನಾವನ್ನು ಹಲವು ದಶಕಗಳವರೆಗೆ ಹಾಳುಗೆಡವಿದ ಅಫೀಮು ವ್ಯಾಪಾರಕ್ಕೆ ಹಾಗೂ ತಮ್ಮ ಇತರ ವ್ಯಾಪಾರದ ಅನುಕೂಲಕ್ಕಾಗಿ ಬ್ರಿಟಿಷರು ಹಾಂಗ್‌ಕಾಂಗನ್ನು ಬೆಳೆಸಿದರು. ಹಾಂಗ್‌ಕಾಂಗ್ ಸುಂಕ ರಹಿತ, ಎಲ್ಲಾ ದೇಶಗಳ ನಾವಿಕರಿಗೆ ತೆರೆದಿರುವ ಮುಕ್ತ ಬಂದರಾಗಿ ಬೆಳೆಯಿತು.

ಆದರೆ ನಿಜವಾಗಿ ಹಾಂಗ್‌ಕಾಂಗ್‌ನ್ನು ಬೆಳೆಸಿದ್ದು ಬ್ರಿಟಿಷರಲ್ಲ-ಚೀನೀ ಕಾರ್ಮಿಕರು, ಉದ್ಯಮಿಗಳು, ಸಾಹಸಿಗಳು

ರಾಜಕೀಯ ಅಲ್ಲೋಲ ಕಲ್ಲೋಲವಾದಾಗಲೆಲ್ಲ ನಿರಾಶ್ರಿತರು, ದೂರದ ಊರಿನಲ್ಲಿ ನೆಲೆಸುವ ಉದ್ಯಮಶೀಲ ಸಾಹಸಿಗಳು ಹಾಂಗ್‌ಕಾಂಗ್‌ನಲ್ಲಿ ಕಳೆದ ನೂರೈವತ್ತು ವರ್ಷಗಳಿಂದ ನೆಲೆಸುತ್ತಲೇ ಬಂದಿದ್ದಾರೆ. ಹೀಗೆ ನೆಲೆಸಿದ ಚೀನೀಯರ ಉದ್ಯಮಶೀಲತೆ, ತೀವ್ರ ಶ್ರಮವೇ ಹಾಂಗ್‌ಕಾಂಗ್‌ನ ಭಾರೀ ಆರ್ಥಿಕ ಬಲದ ಮೂಲ ಸೆಲೆ. 50 ರ ದಶಕದ ನಂತರ ಅಂತರ್‍ರಾಷ್ಟ್ರೀಯ ಬ್ಯಾಂಕಿಂಗ್, ಹಣಕಾಸು, ವಾಣಿಜ್ಯ ಕೇಂದ್ರವಾಗಿ ಇದು ಬೆಳೆಯಿತು. ಜಲಯಾನ ಸಾಗಾಣಿಕೆ ಕೇಂದ್ರವಲ್ಲದೆ, ವಿಮಾನಯಾನ, ಪ್ರಸಾರ ಮಾಧ್ಯಮಗಳ ಅಂತರ್‍ರಾಷ್ಟ್ರೀಯ ಕೇಂದ್ರವಾಗಿಯೂ ಹಾಂಗ್‌ಕಾಂಗ್ ಬೆಳೆಯಿತು. ಹಾಂಗ್‌ಕಾಂಗನ್ನು ಬ್ರಿಟಿಷರು ಬೆಳೆಸಿದರು ಎಂಬುದು ಬ್ರಿಟಿಷರ ಪ್ರಚಾರ ಅಷ್ಟೇ. 50 ರ ದಶಕದ ವರೆಗೆ ಆಮೇಲೂ ಬಂಡವಾಳವಾಗಲಿ, ಶ್ರಮವಾಗಲಿ, ಉದ್ಯಮ ಶೀಲತೆಯಾಗಲಿ, ಸಾರಾಸಗಟಾಗಿ ಬಂದದ್ದು ಮುಖ್ಯವಾಗಿ ಚೀನಿಯರಿಂದಲೇ. ಇತರ [illegible] ಜಗತ್ತಿನ ಎಲ್ಲಾ ದೇಶಗಳವರು ಹಾಂಗ್‌ಕಾಂಗ್‌ನಲ್ಲಿ ಬಂದು ನೆಲೆಸಿ, ಅದರ ಬೆಳವಣಿಗೆಗೆ ಕಾಣಿಕೆ ನೀಡಿದ್ದಾರೆ. ಬ್ರಿಟಿಷ್ ಸರ್ಕಾರ ಹಾಂಗ್‌ಕಾಂಗ್‌ನ ಸಾರ್ವಜನಿಕ ಸೌಲಭ್ಯ ಇತ್ಯಾದಿಗಳಿಗೆ ಖರ್ಚು ಮಾಡಿದ ಒಟ್ಟು ಮೊತ್ತಕ್ಕಿಂತ ಅಫೀಮು ಮತ್ತಿತರ ವ್ಯಾಪಾರದಲ್ಲಿ ಲಾಭದ ರೂಪದಲ್ಲಿ ಲೂಟಿ ಮಾಡಿದ್ದೇ ಹೆಚ್ಚು.

ಚೀನಾಕ್ಕೆ ಹಿಂದಿರುಗುವ ನಿರ್ಧಾರ ತೆಗೆದುಕೊಂಡ ನಂತರ ಕಳೆದ ಐದು ವರ್ಷಗಳಲ್ಲಿ ಚೀನಾದ ಬಂಡವಾಳ ಹೂಡಿಕೆ, ಚೀನಾದ ಮಾರುಕಟ್ಟೆಗಳಿಗೆ ಆಮದು ಸರಕುಗಳ ವ್ಯಾಪಾರ ಇತ್ಯಾದಿಗಳಿಂದ ಹಾಂಗ್‌ಕಾಂಗ್ ಇನ್ನೂ ತೀವ್ರಗತಿಯಲ್ಲಿ ಬೆಳೆದಿದೆ. ಹಾಂಗ್ ಕಾಂಗ್ ಎಂದೆಂದೂ ಚೀನಾಕ್ಕೆ ಜಗತ್ತಿನ ಹೆಬ್ಬಾಗಿಲಾಗಿಯೇ ಬೆಳೆದದ್ದು. ಆಹಾರ ಪದಾರ್ಥಗಳು, ಇಂಧನಕ್ಕೆ ಹಾಂಗ್‌ಕಾಂಗ್ ಸಹ ಚೀನಾದ ಮೇಲೆ ಅವಲಂಭಿಸಿತ್ತು. ಹಾಂಗ್‌ಕಾಂಗ್‌ನ ಆಹಾರ ಅಗತ್ಯಗಳ ಮೂರನೇ ಒಂದು ಭಾಗ, ಕಚ್ಚಾ ಸರಕುಗಳಲ್ಲಿ ಸ್ವಾಲ್ಪನೇ ಒಂದು ಭಾಗ ಚೀನಾದಿಂದ ಬಂದದ್ದು.

ಹಾಂಗ್‌ಕಾಂಗ್ ಇಂದು ಅಂತರ್‍ರಾಷ್ಟ್ರೀಯ ಹಣಕಾಸು ಕೇಂದ್ರ. 185 ಬ್ಯಾಂಕುಗಳು ಇವೆ. ಇವುಗಳಲ್ಲಿ 154 ವಿದೇಶೀ ಬ್ಯಾಂಕುಗಳು. ಜಗತ್ತಿನ 100 ದೊಡ್ಡ ಬ್ಯಾಂಕುಗಳಲ್ಲಿ, 85 ಹಾಂಗ್‌ಕಾಂಗ್‌ನಲ್ಲಿ ನೆಲೆಸಿವೆ. ಹಾಂಗ್ ಕಾಂಗ್‌ನಿಂದ ಕೆಲಸ ಮಾಡುವ ಬ್ಯಾಂಕ್‌ಗಳ ಒಟ್ಟು ಆಸ್ತಿ 1000 ಶತಕೋಟಿ ಡಾಲರುಗಳು.

⇨

ಇಲ್ಲಿ ಎಡದಲ್ಲಿರುವುದು 1944 ರಲ್ಲಿ ಬ್ರಿಟಿಷ್ ವಸಾಹತುಶಾಹಿಗಳು ಹಾಂಗ್‌ಕಾಂಗ್‌ಗೆಂದು ಅಂಗೀಕರಿಸಿದ ಮೊಹರು. ಇದರ ಕೆಳಭಾಗದಲ್ಲಿರುವ ಚಿತ್ರ ಅಫೀಮಿನ ಪೆಟ್ಟಿಗೆಗಳದ್ದು ಎಂದು ಹೇಳಲಾಗುತ್ತದೆ. ಬ್ರಿಟಿಷ್ ವಸಾಹತುಶಾಹಿಗಳಿಗೆ ಹಾಂಗ್‌ಕಾಂಗ್ ಅಫೀಮು ವ್ಯಾಪಾರದ ಭಂಡಾರವೋ ಎಂಬುದನ್ನು ಇದು ತೋರಿಸುತ್ತದೆ. ಬಲಭಾಗದಲ್ಲಿರುವುದು ಏಪ್ರಿಲ್ ಏಪ್ರಿಲ್ 4, 1990 ರಂದು ಚೀನಾದ 7ನೇ ರಾಷ್ಟ್ರೀಯ ಜನತಾ ಮಹಾಧಿವೇಶನದ ಮೂರನೇ ಪ್ಲೀನಂ ಅಧಿವೇಶನ ಅಂಗೀಕರಿಸಿದ 'ಹಾಂಗ್‌ಕಾಂಗ್ ವಿಶೇಷ ಆಡಳಿತ ಪ್ರದೇಶ'ದ ಚಿಹ್ನೆ - ಚೀನಾ ಜನತಾ ಗಣತಂತ್ರದ ಕೆಲವು ನಕ್ಷತ್ರಗಳನ್ನು ಹೊಂದಿರುವ ಚಿಹ್ನೆ.





ಹಸ್ತಾಂತರದ ಬಗ್ಗೆ ಮಂಕು ಕವಿಸುತ್ತಿರುವ ಸಾಮ್ರಾಜ್ಯಶಾಹಿ ಮಾಧ್ಯಮಗಳೇ! ಅವರ ಮರು ಪ್ರಸಾರಕರೇ,

ಈ ಪ್ರಶ್ನೆಗಳಿಗೆ ನಿಮ್ಮಲ್ಲಿ ಉತ್ತರವಿದೆಯೇ?

♦ ಹಾಂಗ್‌ಕಾಂಗ್ ಪ್ರಜಾಪ್ರಭುತ್ವದಿಂದ ಕಮ್ಯುನಿಸ್ಟ್ ಏಕಾಧಿಕಾರದತ್ತ ಹೋಗುತ್ತದೆ ಎನ್ನುತ್ತಿರಲ್ಲ, ಕಳೆದ 150 ವರ್ಷಗಳಲ್ಲಿ ಹಾಂಗ್‌ಕಾಂಗ್‌ನಲ್ಲಿ ಹಾಂಗ್‌ಕಾಂಗ್ ನಾಗರೀಕರಿಗೆ ಯಾವುದೇ ರಾಜಕೀಯ ಪಾತ್ರವಿರಲಿಲ್ಲ ಎಂದು ನಿಮಗೆ ಗೊತ್ತೇ? ಐದು ವರ್ಷಗಳ ಹಿಂದೆ 'ನಾಟಕ' ಕ್ಕಾಗಿ ಅದೂ ಅರ್ಧದಷ್ಟು ಮಾತ್ರ ಚುನಾಯಿತವಾದ ವಿಧಾನಸಭೆ 'ಪ್ರಜಾಪ್ರಭುತ್ವ' ದ ಪ್ರತೀಕ ಎಂದು ಹೇಳುವುದು ಮೋಸದ ಮಾತಲ್ಲವೇ?

♦ 1984 ರಲ್ಲಿ ಥ್ಯಾಚರ್-ಡೆಂಗ್ ಸಹಿ ಹಾಕಿದ ಒಪ್ಪಂದದ ಮೂಲಭೂತ ಕಾನೂನು ಬಗೆಗಿನ ನಿಯಮಗಳನ್ನು ಗಾಳಿಗೆ ತೂರಿದ್ದು ಬ್ರಿಟಿಷ್ ಸರಕಾರ ಹಾಗೂ ಹಾಂಗ್ ಕಾಂಗ್‌ನ ಬ್ರಿಟಿಷ್ ಗವರ್ನರ್. ಎಲ್ಲಾ ಪ್ರಮುಖ ಆರ್ಥಿಕ ರಾಜಕೀಯ ನಿರ್ಧಾರ ದಲ್ಲಿ ಎರಡೂ ದೇಶಗಳು ಮಾತುಕತೆಗಳ ಮೂಲಕ ಭಾಗವಹಿಸಬೇಕು ಎಂಬ ನೀತಿ ಯನ್ನು ಉಲ್ಲಂಘಿಸಿದ್ದು ಅವರೇ. ಆದರೆ ಈಗ ನೀವು ವಿಷಾದಿಸುತ್ತಿರುವುದು ಚೀನಾ ಹಸ್ತಾಂತರದ ಮೊದಲೇ ಮೂಗು ತೂರಿಸುತ್ತಿದೆ ಎಂದು. ಇದು ಯಾವ ನ್ಯಾಯ?

♦ ಹಾಂಗ್‌ಕಾಂಗ್‌ನ ಹೊಸ ಮುಖ್ಯಸ್ಥನನ್ನು ನೇಮಿಸಲಾಗಿದೆ ಎಂದು ಟಾಂ ಟಾಂ ಮಾಡುತ್ತೀರಿ. ಕೊನೆಯ ಗವರ್ನರ್ ಸೇರಿದಂತೆ ಹಾಂಗ್‌ಕಾಂಗ್‌ನ ಗವರ್ನರ್‌ರನ್ನು ಯಾವಾಗಲೂ ಬ್ರಿಟಿಷ್ ಸರಕಾರ ನೇಮಿಸಿದ್ದು ಮತ್ತು ಅವರು ಯಾವಾಗಲೂ ಬ್ರಿಟಿಷ್‌ರೇ ಆಗಿದ್ದರು ಎಂದು ವಿಶ್ವದ ಜನತೆಗೆ ಹೇಳಲು ನಿಮಗೆ ನಾಚಿಕೆಯಾಗುತ್ತದೆಯೇ? ಹಾಂಗ್‌ಕಾಂಗ್‌ನ ಹೊಸ ಮುಖ್ಯಸ್ಥ ತುಂಗ್ ಅಲ್ಲಿನ ಸ್ಥಳೀಯ ನಾಗರೀಕ. ಹಾಂಗ್‌ಕಾಂಗ್‌ನ ನಾಗರಿಕರಾದ ನಾಲ್ಕುನೂರು ಜನ ಅವರನ್ನು ಆಯ್ಕೆ ಮಾಡಿದ್ದು, ಚೀನಾದ ಸರ್ಕಾರವಲ್ಲ ಎಂಬ ಸತ್ಯ ಯಾಕೆ ನಿಮ್ಮ ಗಂಟಲಲ್ಲಿ ಸಿಕ್ಕಿಹಾಕಿಕೊಳ್ಳುತ್ತದೆ?

♦ ಹಾಂಗ್‌ಕಾಂಗ್‌ನ ಚರಿತ್ರೆಯ ಪುಸ್ತಕಗಳನ್ನು ಬದಲಾಯಿಸಲು ಚೀನಾ ಹವಣಿಸುತ್ತಿದೆ ಎಂದು ನಿಮ್ಮ ಆಪಾದನೆ. ಅಫೀಮು ಮಾರಾಟಕ್ಕೆ ಅವಕಾಶ ಕೊಡದ್ದಕ್ಕೆ ಚೀನೀ ದೇಶದ ಮೇಲೆ ಎರಡು ಬಾರಿ ಮಾಡಿದ ಯುದ್ಧಗಳನ್ನು ಇಡೀ ಜಗತ್ತು 'ಅಫೀಮು ಯುದ್ಧ' ವೆಂದು ಕರೆಯುತ್ತದೆ. ಆದರೆ ಹಾಂಗ್‌ಕಾಂಗ್‌ನ ವಸಾಹತುಶಾಹಿಗಳ ಪುಸ್ತಕಗಳು 'ಆಂಗ್ಲೋ-ಚೀನೀ' ಯುದ್ಧ ಎಂದು ಕರೆಯುತ್ತಾರೆ. ಇಂತಹ ಪುಸ್ತಕಗಳನ್ನು ಬದಲಾಯಿಸಬಾರದೆ?

♦ ಇಡೀ ಸಾಮ್ರಾಜ್ಯಶಾಹಿ ಮಾಧ್ಯಮ ಇಂದು ಅಫೀಮು, ಮಾದಕ ದ್ರವ್ಯಗಳ ವಿರುದ್ಧ 'ಸಮರ' ಸಾರಿದ ನಾಟಕವಂತೂ ಮಾಡುತ್ತದೆ. ಹಾಂಗ್‌ಕಾಂಗ್‌ನ ಚರಿತ್ರೆಯ ಬಗ್ಗೆ ಮಾತನಾಡುವಾಗ ಮಾತ್ರ ಅಫೀಮು ವಿರುದ್ಧ ದಿಟ್ಟ ಕ್ರಮ ಕೈಗೊಂಡ ಚೀನೀ ಸರ್ಕಾರದ ಸಾಹಸಿ ಅಧಿಕಾರಿ ಲಿನ್ ತ್ಸೆಯ ಹೆಸರೂ ಕೂಡಾ ನಿಮ್ಮ ಚರಿತ್ರೆಗಳಲ್ಲೂ, ಹಾಂಗ್‌ಕಾಂಗ್‌ನ ಚರಿತ್ರೆ ಪುಸ್ತಕದಲ್ಲೂ ಇಲ್ಲ ಏಕೆ?


♦ ಹಾಂಗ್‌ಕಾಂಗ್‌ನಲ್ಲಿ ಮತ್ತು ಚೀನಾದ ಇತರೆ ವಿದೇಶಿ ಸಾಮ್ರಾಜ್ಯಶಾಹಿಗಳು ದೇಶಕ್ಕೆ ಮಾಡಿದ ಹಾನಿ, 'ರಾಷ್ಟ್ರೀಯ ಅವಹೇಳನ'ದ ಬಗ್ಗೆ ನೆನಪಿಸುವ, ಸತ್ಯಕ್ಕೆ ನಿಷ್ಠವಾದ ಒಳ್ಳೆಯ ಫಿಲಂ 'ಅಫೀಮು ಯುದ್ಧ' ಚೀನಾದಲ್ಲಿ ಭಾರಿ ಜನಪ್ರಿಯವಾದರೆ, ಅದಕ್ಕೆ ನಿಮ್ಮ ಸಮಜಾಯಿಷಿ ಏನು? ಚೀನಾದ ಸರ್ಕಾರ ಆಕ್ರಾಮಕ 'ದೇಶಪ್ರೇಮ' ಬಡಿದೆಬ್ಬಿಸುವ ಎಲ್ಲಾ ಪ್ರಯತ್ನ ಮಾಡುತ್ತಿದೆ ಎಂದು! ಏಕೆಂದರೆ 'ಅಫೀಮು ಯುದ್ಧ' ನೆನಪಿಸು ವುದು ನಿಮಗೆ ಮುಜುಗರ ಉಂಟು ಮಾಡುತ್ತದೆ ಅಲ್ಲವೆ?

♦ 'ಒಂದು ದೇಶ, ಎರಡು ವ್ಯವಸ್ಥೆ' ಯ ಪ್ರಾಮಾಣಿಕ ನೀತಿ ನಿಮಗೆ ಸಮಾಜವಾದದ ದೌರ್ಬಲ್ಯವಾಗಿ ಕಾಣುತ್ತದೆ. ಚರಿತ್ರೆಯಲ್ಲಿ ಉಳಿದುಹೋದ ಸಮಸ್ಯೆಯೊಂದನ್ನು ಶಾಂತಿಯುತವಾಗಿ ಪರಿಹರಿಸುವ ಮುತ್ಸದ್ದಿತನ ಎಂದು ನಿಮಗೆ ಕಾಣುವುದಿಲ್ಲ ಅಲ್ಲವೆ? ಇತ್ತೀಚಿನ ವರ್ಷಗಳಲ್ಲಿ ಶಾಂತಿಯುತವಾಗಿ ಯಾವ 'ಸ್ವಾತಂತ್ರ್ಯ' 'ಹಸ್ತಾಂತರ' ಈ ರೀತಿ ನಡೆದಿದೆ? ಇದು ಮುಂಬರುವ ದಶಕಗಳ ಅಂತರ್‍ರಾಷ್ಟ್ರೀಯ ಸಂಬಂಧಗಳಿಗೆ ಮಾದರಿ ಎಂದು ಹೇಳಲು ನಿಮಗೆ ಮುಜುಗರ ಆಗುತ್ತದೆ ಅಲ್ಲವೆ? ☑

ಆನು ವಿಶ್ವದಲ್ಲಿ 5ನೇ ಅತಿ ದೊಡ್ಡ ಬ್ಯಾಂಕಿಂಗ್ ಕೇಂದ್ರ. ಜಗತ್ತಿನಲ್ಲೇ 7ನೇ ಅತಿ ದೊಡ್ಡ ವಿದೇಶೀ ವ್ಯಾಪಾರ ಕೇಂದ್ರ. ಹಾಂಗ್‌ಕಾಂಗ್‌ನ ವಾರ್ಷಿಕ ತಲಾ ಆದಾಯ 23 ಸಾವಿರ ಡಾಲರುಗಳು - ಜಗತ್ತಿನಲ್ಲೇ ಮೂರನೇ ಸ್ಥಾನ. ಬ್ರಿಟನ್ನಿನ ಹಾಗೂ ಇತರ ಹಲವಾರು ಅಭಿವೃದ್ಧಿ ದೇಶಗಳ ತಲಾ ಆದಾಯಕ್ಕಿಂತ ಹೆಚ್ಚು. ಚೀನಾ ಬಟ್ಟೆಗಳ ಉತ್ಪಾದನೆಯಲ್ಲಿ ಹೆಸರುವಾಸಿ.

''ಒಂದು ದೇಶ, ಎರಡು ವ್ಯವಸ್ಥೆ''

ಇಂತಹ ಹಿನ್ನೆಲೆಯ ಹಾಂಗ್‌ಕಾಂಗ್ ಸಮಾಜವಾದಿ ಚೀನಾದ ಭಾಗವಾಗುವುದರಲ್ಲಿ ಅರ್ಥವಿದೆಯೇ? ಚೀನಾದ ಸಮಾಜವಾದಿ ವ್ಯವಸ್ಥೆಗೆ ಇದರಿಂದ ಧಕ್ಕೆ ಬರುವುದಿಲ್ಲವೇ? ಎರಡು ಪ್ರದೇಶಗಳನ್ನು ಈರೀತಿ ಕೃತಕವವಾಗಿ ಕಸಿ ಮಾಡಿ ಒಂದು ದೇಶವಾಗಿಸಲು ಸಾಧ್ಯವೇ? ಎಂದೆಲ್ಲಾ ಪ್ರಶ್ನೆಗಳು ಏಳಬಹುದು.




''ಯುರೋಪಿಯನ್ ಸರಕಾರಗಳು ಚೀಣಾವನ್ನು ವಿಶಾಡಿಗಳು ಹೆಣಗಳನ್ನು ಕಿತ್ತಾಡುವಂತೆ ದರೋಡೆ ಮಾಡ ಲಾರಂಭಿಸಿವೆ''

- ಲೆನಿನ್

1900 ರಲ್ಲಿ

ಈಗಾಗಲೇ ಹೇಳಿದ ಹಾಗೆ ಹಾಂಗ್‌ಕಾಂಗ್ (ಕಳೆದ 150 ವರ್ಷಗಳಲ್ಲಿ ರಾಜಕೀಯವಾಗಿ ಬಿಟ್ಟರೆ) ಹಲವು ಶತಮಾನಗಳಿಂದ ಎಲ್ಲಾ ವಾಗಲೂ ಸಾಂಸ್ಕೃತಿಕವಾಗಿ, ಜನಾಂಗೀಯವಾಗಿ, ಮಾನಸಿಕವಾಗಿ ಚೀನಾದ ಭಾಗ ವಾಗಿದ್ದದ್ದು. ಆರ್ಥಿಕವಾಗಿಯೂ ಹಾಂಗ್ ಕಾಂಗ್ ಚೀನಾ ಜತೆ ಘನಿಷ್ಟ ಸಂಬಂಧ ಹೊಂದಿತ್ತು. ಚೀನಾ ಹೊರ ಜಗತ್ತಿಗೆ ತೆರೆದು ಕೊಳ್ಳುತ್ತಿರುವ ನೀತಿಯ ಕಳೆದು ಹತ್ತು - ಹದಿನೈದು ವರ್ಷಗಳಲ್ಲಂತೂ, ಹಾಂಗ್ ಕಾಂಗ್ ಜತೆ ಆರ್ಥಿಕ ಸಂಬಂಧ ಇನ್ನಷ್ಟು ಪ್ರಬಲವಾಗಿದೆ.

ಹಾಂಗ್‌ಕಾಂಗ್‌ನಲ್ಲಿ ಬಹಳ ಜನಾಂಗಗಳ, ದೇಶಗಳ ಜನ ನೆಲೆಸಿ ಇದು ಒಂದು ಅಂತರ್ರಾಷ್ಟ್ರೀಯ ಪ್ರದೇಶ ವಾಗಿದ್ದರೂ, ಶೇಕಡಾ 90 ಕ್ಕೂ ಹೆಚ್ಚು ಜನ ಚೀನಿಯರು, ಚೀನಿ ಮೂಲದವರು. ಇದ ರಲ್ಲಿ ಹೆಚ್ಚು ಕಡಿಮೆ ಎಲ್ಲರೂ ಒಂದೆರೆಡು ಪೀಳಿಗೆ ಹಿಂದ ದಕ್ಷಿಣ ಚೀನಾದ ಯಾವುದಾ ದರೂ ಹಳ್ಳಿ, ನಗರ ತಮ್ಮ ಮೂಲಸ್ಥಾನ ಎಂದು ಹೇಳಬಲ್ಲವರು. ಅಲ್ಲಿ ಸಂಬಂಧಿಕರನ್ನು ಹೊಂದಿರುವವರು. ಆದ್ದರಿಂದ ಕಳೆದ ಹತ್ತು ವರ್ಷಗಳು ಸಾಮ್ರಾಜ್ಯಶಾಹಿ ಮಾಧ್ಯಮಗಳು ತಮ್ಮೆಲ್ಲ ಬಲ, ಕೌಶಲ್ಯಗಳನ್ನು ಬಳಸಿ ಹಾಂಗ್‌ಕಾಂಗ್ ಕುಸಿಯುತ್ತದೆ, ಸತ್ತು ಹೋಗುತ್ತದೆ, ಹಾಳಾಗಿ ಹೋಗುತ್ತದೆ ಎಂದು ಅಬ್ಬರದ ಪ್ರಚಾರ ಮಾಡುತ್ತಿದ್ದರೂ ಹಾಂಗ್ ಕಾಂಗ್‌ನ ಜನ ವಿಚಲಿತರಾಗಿಲ್ಲ. ಇತ್ತೀಚಿಗೆ ಈ ಅಪಪ್ರಚಾರ ತಾರಕಕ್ಕೇರಿದರೂ, ಇತ್ತೀಚಿಗೆ ಮಾಡಿದ ಸಮೀಕ್ಷೆಯ ಪ್ರಕಾರ ಶೇಕಡಾ 80 ಜನ ಹಾಂಗ್‌ಕಾಂಗ್‌ನ ಭವಿಷ್ಯದ ಬಗ್ಗೆ ತೀವ್ರ ಆಶಾಭಾವನೆ ಹೊಂದಿದ್ದಾರೆ. ಹಾಂಗ್‌ಕಾಂಗ್‌ನ ಮುಖ್ಯಸ್ಥರಾಗಿ ಆಯ್ಕೆಯಾಗಿರುವ, ಶಾಂಘಾಯ್ ಮೂಲದ ಚೀನಿ ಉದ್ಯಮಿ ತುಂಗ್ ಚೀ-ಹ್ವಾ 'ನಾವು ಹಾಂಗ್‌ಕಾಂಗ್‌ನ ಹಸ್ತಾಂತರ - ಕೃತಕವಾಗಿ ಬೇರ್ಪಡಿಸಿರುವುದನ್ನು ಕೊನೆಗೊಳಿಸಿ ಪುನಃ ಒಂದಾಗುವ ಪ್ರಕ್ರಿಯೆ ಎಂದು ಭಾವಿಸುತ್ತೇವೆ. ನಾವು ಪುನಃ ನಮ್ಮ ಮಾನಿಯ ಯಜಮಾನಿಕೆ ಪಡೆದಿದ್ದೇವೆ' ಎನ್ನುತ್ತಾರೆ.



''ಬಂಡವಾಳ ಶಾಹಿಯ ಇತಿಹಾಸದಲ್ಲಿ ಯಾವುದಾದರೂ ಪಾಶ್ಚಿಮಾತ್ಯ ದೇಶ ಹಾಂಗ್‌ಕಾಂಗ್ ಕುರಿತಂತೆ ಚೀಣಾ ತಳೆದಂತಹ ಉದಾರ ಧೋರಣೆಯನ್ನು ತಳೆದ ಒಂದಾದರೂ ಉದಾಹರಣೆಯಿದೆಯೇ? ಹಾಂಗ್‌ಕಾಂಗ್ ಸಮಸ್ಯೆಯ ಶಾಂತಿಯುತ ಪರಿಹಾರಕ್ಕಾಗಿ ''ಒಂದು ದೇಶ, ಎರಡು ವ್ಯವಸ್ಥೆ'ಯ ನೀತಿ ಅನುಸರಿಸುವುದು ಆವೇಶದಿಂದಲೂ ಅಲ್ಲ, ಒಂದು ಉಪಾಯವೆಂದೂ ಅಲ್ಲ; ಹಾಂಗ್‌ಕಾಂಗ್ ಹಿಂದಿನ ಹಾಗೂ ಇಂದಿನ ಸನ್ನಿವೇಶವಾಸ್ತವತೆಯ ಆಧಾರದಲ್ಲಿ''

— ಡೆಂಗ್ ಕ್ಸಿಯಾವೋಪಿಂಗ್

ಜುಲೈ 1984 ರಲ್ಲಿ

80ರ ದಶಕದ ಮಧ್ಯ ದಲ್ಲಿ ಸಾಮ್ರಾಜ್ಯ ಶಾಹಿ ಅಬ್ಬರದ ಅಪಪ್ರಚಾರ ದಿಂದ ಹಾಂಗ್ ಕಾಂಗ್ ನಿಂದ ಹಲವರು ವಲಸೆ ಹೋದರೂ, ಆ ಸಂಖ್ಯೆ ಗಮನಾರ್ಹವಾಗಿರಲಿಲ್ಲ. ಅದ ರಲ್ಲಿ ಹಲ ವರು ವಾಪಾಸು ಬಂದಿ ದ್ದಾರೆ. ವರ್ಷಕ್ಕೆ ಈ ಸಂಖ್ಯೆ 30 ಸಾವಿರದಿಂದ 40 ಸಾವಿರ ಇತ್ತು, ಕಳೆದ ಹತ್ತು ವರ್ಷಗಳಲ್ಲಿ ಚೀನಾದಿಂದ ಹಾಗೂ ಇತರ ದೇಶಗಳಿಂದ ಜನ ಬರುತ್ತಲೂ ಇದ್ದಾರೆ-ಹಾಂಗ್ ಕಾಂಗ್‌ನಲ್ಲಿ ನೆಲೆಸಲು.

ಹಾಂಗ್‌ಕಾಂಗ್ ಜಗತ್ತಿನಲ್ಲೇ ಅತ್ಯಂತ ಜನನಿಬಿಡ ಪ್ರದೇಶ. ಚದರ ಮೈಲಿಗೆ 15 ಸಾವಿರ ಜನ ಇದ್ದಾರೆ. ಬ್ರಿಟಿಷ್ ಪಾಸ್‌ಪೋರ್ಟ್ ಹೊಂದಿರುವ ಒಂದುವರೆಲಕ್ಷ ಜನ ಇನ್ನೂ ಹಾಂಗ್‌ಕಾಂಗ್‌ನಲ್ಲಿ ನೆಲೆಸಿದ್ದಾರೆ ಎಂಬುದು ಹಾಂಗ್‌ಕಾಂಗ್‌ನ ಭವಿಷ್ಯದ ಬಗ್ಗೆ ಆಶಾಭಾವನೆಯ ಸೂಚಕ.

ಘನಿಷ್ಟ ಆರ್ಥಿಕ ಸಂಬಂಧ

ಅಪಪ್ರಚಾರದಿಂದಾಗಿ 85-90 ರ ವರೆಗೆ ಹಾಂಗ್‌ಕಾಂಗ್‌ನ ಹಣಕಾಸಿನ ಮಾರುಕಟ್ಟೆಯ ಸೂಚ್ಯಂಕ(ಹಂಗ್ ಸೆಂಗ್ ಸೂಚಕ) ಮೂರು ಸಾವಿರಕ್ಕೆ ಇಳಿದಿದ್ದರೂ, 1995 ರ ಹೊತ್ತಿಗೆ 12 ಸಾವಿರ(ನಾಲ್ಕು ಪಟ್ಟು) ದಾಟಿತ್ತು. ಹಾಂಗ್‌ಕಾಂಗ್‌ನಲ್ಲಿರುವ ಕಂಪನಿಗಳ ಸಮೀಕ್ಷೆಯ (ಬ್ರಿಟಿಷ್ ಚೆಂಬರ್ ಆಫ್ ಕಾಮರ್ಸ್ ನಡೆಸಿದ್ದು) ಪ್ರಕಾರ ಶೇಕಡಾ 93 ಕಂಪನಿಗಳು ಅಲ್ಲೇ ತಮ್ಮ ಕೆಲಸ ಮುಂದುವರೆಸುವುದರ ಬಗ್ಗೆ ಯಾವ ಅನುಮಾನವೂ ಇಲ್ಲ ಎಂದು ಹೇಳಿದ್ದಾರೆ. ಚೀನಾದಲ್ಲಿ ಈಗ ಇರುವ ಸುಮಾರು 4500 ವಿದೇಶಿ ಕಂಪನಿಗಳಲ್ಲಿ ಶೇಕಡಾ 40 ಭಾಗ ಕಳೆದ ಐದು ವರ್ಷಗಳಲ್ಲಿ ಹಾಂಗ್ ಕಾಂಗ್‌ಗೆಬಂದಿದ್ದು.

ಆರ್ಥಿಕವಾಗಿ ಹಾಂಗ್‌ಕಾಂಗ್ ಹಾಗೂ ಚೀನಾ ಈಗಾಗಲೇ ಒಂದಾ ಗುತ್ತಿವೆ. ಹಾಂಗ್ ಕಾಂಗ್‌ನ ಮರು ರಫ್ತಿನ ಶೇಕಡಾ 90 ಭಾಗ ಚೀನಾಕ್ಕೆ ಹೋಗುತ್ತದೆ. ಚೀನಾದಲ್ಲಿ ಹೂಡಲಾಗಿರುವ ವಿದೇಶಿ ಬಂಡವಾಳದ ಶೇಕಡಾ 58 ಹಾಂಗ್‌ಕಾಂಗ್‌ನಿಂದ ಬಂದಿದ್ದು. ಹಾಂಗ್‌ಕಾಂಗ್‌ನಲ್ಲಿ ಚೀನಾದ ಕಂಪನಿಗಳ ಹೂಡಿಕೆಯ ಪ್ರಮಾಣ ಶೇಕಡಾ 20. ಹಾಂಗ್‌ಕಾಂಗ್‌ನ ಪಾದರಕ್ಷೆ, ಬಟ್ಟೆ, ಆಟಿಕೆಗಳ ರಫ್ತಿನಲ್ಲಿ ಸೇಕಡಾ 90 ಕ್ಕೂ ಹೆಚ್ಚು ಭಾಗ ಚೀನಾದಲ್ಲಿ ತಯಾರಾದ್ದು. ಚೀನಾ ಆಮದುಮಾಡುವ ಬಟ್ಟೆಯ ಶೇಕಡಾ 46 ಭಾಗ, ದೂರಸಂಪರ್ಕ ಉಪಕರಣಗಳ ಶೇಕಡಾ 76 ಭಾಗ ಹಾಂಗ್‌ಕಾಂಗ್‌ನಿಂದ ಬರುತ್ತದೆ. ದಕ್ಷಿಣ ಚೀನಾದಲ್ಲಿ ಹಾಂಗ್ ಕಾಂಗ್ ಕಂಪನಿಗಳು ಅಥವಾ ಚೀನಿ-ಹಾಂಗ್‌ಕಾಂಗ್ ಜಂಟಿ ಉದ್ಯಮಗಳು ದೊಡ್ಡ ಪ್ರಮಾಣದಲ್ಲಿ ಆರಂಭವಾಗಿದ್ದು 40 ಲಕ್ಷ ಜನ ಇಂತಹ ಉದ್ಯಮಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಚೀನಾದ ಸುಮಾರು 880 ಕಂಪನಿಗಳು ಹಾಂಗ್‌ಕಾಂಗ್‌ನಲ್ಲಿ ಬಂಡವಾಳ ಹೂಡಿವೆ. ಈಗಾಗಲೇ ಚೀನಿ ಕಂಪನಿಗಳು ಹಾಂಗ್‌ಕಾಂಗ್ ಬ್ಯಾಂಕಾಕ್‌ನಲ್ಲಿ, ಸಾಗಾಣಿಕೆ, ವಿದೇಶಿ ವ್ಯಾಪಾರ ಕ್ಷೇತ್ರದಲ್ಲಿ ಕಾಲು ಭಾಗವನ್ನು ಆಕ್ರಮಿಸಿವೆ. ಹೀಗೆ ಘನಿಷ್ಟ ಆರ್ಥಿಕ ಸಂಬಂಧ ಗಳಿಂದಾಗಿ, ಹಾಂಗ್‌ಕಾಂಗ್ ಚೀನಾಕ್ಕೆ ವಾಪಾಸಾಗುವ ಕ್ರಿಯೆ ಬಹಳ ಸ್ವಾಭಾವಿಕ ಕ್ರಿಯೆಯಾಗಿರುತ್ತದೆ.

ಹಾಂಗ್‌ಕಾಂಗ್‌ನ ವಿಶಿಷ್ಟ ಸ್ಥಾನ

ಹಾಂಗ್‌ಕಾಂಗ್‌ನ ವಿಶಿಷ್ಟ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಹಾಂಗ್‌ಕಾಂಗ್‌ನ ಮೂಲ ಬುನಾದಿ ಕಾನೂನಿನಲ್ಲಿ(ಮಿನಿ ಸಂವಿಧಾನ ಎನ್ನಬಹುದು.) ಹಾಂಗ್‌ಕಾಂಗ್‌ನ ಬಂಡ ವಾಳಶಾಹಿ ವ್ಯವಸ್ಥೆಯನ್ನು 50 ವರ್ಷಗಳವರೆಗೆ ಬದಲಾಯಿಸುವುದಿಲ್ಲ ಎಂಬ ಭರವಸೆ ಕೊಡಲಾಗಿದೆ. ಹಾಂಗ್ ಕಾಂಗ್ ಚೀನಾದ ಜನತಾಗಣ ರಾಜ್ಯದ ವಿಶೇಷ ಆಡಳಿತ ಪ್ರದೇಶ ವಾಗಿ ಇರುತ್ತದೆ. ಚೀನಾದ ಕೇಂದ್ರ ಸರಕಾರ. ರಕ್ಷಣೆ ಹಾಗೂ ವಿದೇಶ ವ್ಯವಹಾರಗಳನ್ನು ಮಾತ್ರ ನೋಡಿಕೊಳ್ಳುತ್ತದೆ. ಉಳಿದೆಲ್ಲಾ ವಿಷಯಗಳಲ್ಲಿ ಹಾಂಗ್‌ಕಾಂಗ್‌ಗೆ ಪೂರ್ಣ ಸ್ವಾಯತ್ತತೆ ಇರುತ್ತದೆ. ಹಾಂಗ್ ಕಾಂಗ್‌ನ ನಾಣ್ಯ-ಹಾಂಗ್‌ಕಾಂಗ್ ಡಾಲರು

ಪುಟ 7 ನೋಡಿ

''ವೆಚ್ಚ ಕಡಿತ ಬಡವರ ನೋವನ್ನು ಹೆಚ್ಚಿಸಿದೆ''

ಇದು ಉದಾರೀಕರಣದ ವಿರೋಧಿಯೊಬ್ಬರು ಹೇಳಿದ್ದಲ್ಲ, ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ ತನ್ನ 'ಮಾನವ ಅಭಿವೃದ್ಧಿ ವರದಿ'ಯಲ್ಲಿ ಹೀಗೆ ಹೇಳಿದೆ. ಭಾರತದ ಉದಾರೀಕರಣದ ಕಾರ್ಯಕ್ರಮವನ್ನು ಪ್ರತ್ಯೇಕವಾಗಿ ಪ್ರಸ್ತಾಪಿಸಿರುವ ಈ ವರದಿ ಜಾಗತೀಕರಣವೆಂಬುದು ಜನರ ಸಂಕಷ್ಟಗಳನ್ನು ಹೆಚ್ಚಿಸಿದೆ ಎಂದಿದೆ. ಹಣಕಾಸು ಕೊರತೆಯನ್ನು ನೀಗುವ ಹೆಸರಿನಲ್ಲಿ ಸಾರ್ವಜನಿಕ ವೆಚ್ಚವನ್ನು ಕಡಿತಗೊಳಿಸುತ್ತಿರುವುದರಿಂದ ಪ್ರಭುತ್ವ ಜನತೆಯ ಜೀವನವನ್ನು ತಟ್ಟುವ ಕ್ಷೇತ್ರಗಳಲ್ಲಿ ತನ್ನ ಜವಾಬ್ದಾರಿಗಳನ್ನು ಕೈ ಬಿಟ್ಟಂತೆ ಆಗಿದೆ ಎಂದಿದೆ.

ಈ ವರದಿ ಕಳೆದ 50 ವರ್ಷಗಳಲ್ಲಿ ಭಾರತದ ಸಾಧನೆಗಳನ್ನು ವಿಶ್ಲೇಷಿಸುತ್ತಾ ಇದು ಸಮ್ಮಿಶ್ರವಾಗಿದೆ ಎಂದಿದೆ. ''ಭಾರತ ಅತ್ಯಧಿಕ ವೈರುಧ್ಯ ಮತ್ತು ಅಸಮಾನತೆಗಳ ನಾಡಾಗಿದೆ'' ಎಂದಿದೆ. ಅದು ಭಾರತ ಅತಿ ಭೀಕರ ಬಡತನವನ್ನು ತೊಡೆದು ಹಾಕ ಬೇಕಾದರೆ ಅದು ಸಾಮೂಹಿಕ ಕ್ರಿಯೆಗೆ ಇಳಿಯಬೇಕಾಗುತ್ತದೆ ಮತ್ತು ಸಮಾನ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅವಕಾಶಗಳನ್ನು ಸೃಷ್ಟಿಸಬೇಕಾಗುತ್ತದೆ'' ಎಂದಿದೆ.

ಈ ವರ್ಷದಿಂದ ಯುಎನ್‌ಡಿಪಿ (ಸಂಯುಕ್ತ ರಾಷ್ಟ್ರಗಳ ಅಭಿವೃದ್ಧಿ ಕಾರ್ಯಕ್ರಮ) ಮಾನವ ಬಡತನದ ಸೂಚ್ಯಂಕವೆಂಬ ಒಂದು ಹೊಸ ಸೂಚ್ಯಂಕವನ್ನು ಬಳಕೆಗೆ ತಂದಿದೆ. ಈ ಸೂಚ್ಯಂಕ ಅಪ್ರಾಪ್ತ ವಯಸ್ಸಿನಲ್ಲಿ ಮರಣ, ಅನಕ್ಷರತೆ ಮತ್ತು ಆರೋಗ್ಯ ಸೌಲಭ್ಯಗಳ ಲಭ್ಯತೆ, ಸುರಕ್ಷಿತ ನೀರು ಮತ್ತು ಸಾಕಷ್ಟು ಆಹಾರಗಳ ಲಭ್ಯತೆಗಳನ್ನು ಗಣನೆಗೆ ತೆಗೆದುಕೊಳ್ಳುತ್ತದೆ. ಭಾರತ ಈ ಸೂಚ್ಯಂಕದ ಪ್ರಕಾರ 47 ನೇ ಸ್ಥಾನ ಪಡೆದಿದೆ. ಭಾರತದಲ್ಲಿ ಬಿಹಾರ, ಮಧ್ಯಪ್ರದೇಶ ಮತ್ತು ಉತ್ತರ ಪ್ರದೇಶಗಳಲ್ಲಿ ಬಡತನದ ಪ್ರಮಾಣ ಅಪಾರವಾಗಿದೆ ಎಂದಿದೆ ಅದು. ಆಂಧ್ರಪ್ರದೇಶ, ಹರ್‍ಯಾಣ ಕೇರಳ ಮತ್ತು ಪಂಜಾಬ್ ಆದಾಯ ಬಡತನವನ್ನು ಶೇ 50 ರಷ್ಟು ಕಡಿಮೆ ಮಾಡಿವೆ ಎಂದಿದೆ ಈ ವರದಿ.

ಜಾಗತೀಕರಣದ ಬಗ್ಗೆ ಒಂದು ಅಧ್ಯಾಯವನ್ನು ಮೀಸಲಿರಿಸಿರುವ ವರದಿ ಹಲವು ಅಭಿವೃದ್ಧಿಶೀಲ ದೇಶಗಳು ವಿವಿಧ ಜಾಗತಿಕ ವೇದಿಕೆಗಳಲ್ಲಿ ಹೇಳುತ್ತಿರುವುದು ನಿಜ-ವ್ಯಾಪಾರದಲ್ಲಿ ಅಸಮಾನ ಲಭ್ಯತೆ ಇರುವುದರಿಂದ 500 ಬಿಲಿಯ ಡಾಲರುಗಳಷ್ಟು ನಷ್ಟವಾಗುತ್ತಿದೆ ಎಂದಿದೆ ಅದು.

ಬಿಗಿಯಾಗುತ್ತಿರುವ ಗ್ಯಾಟ್ ಉರುಳು

ಈಗ ಗ್ಯಾಟ್‌ಗೆ ವಿಶ್ವ ವ್ಯಾಪಾರ ಸಂಸ್ಥೆ (ಅಥವಾ ಡಬ್ಲ್ಯುಟಿಓ) ಎಂದು ಹೆಸರು. ಗ್ಯಾಟ್ ಒಪ್ಪಂದ 1994 ರ ಡಿಸೆಂಬರ್ ಕೊನೆಯ ವೇಳೆಗೆ ಸಹಿಯಾದಾಗ ಇದು ಭಾರತದ ಕೊರಳಿಗೆ ಉರುಳಾಗುತ್ತದೆಂದು ಜನ ತೀವ್ರವಾಗಿ ಪ್ರತಿಭಟಿ ಸಿದ್ದರು. ಪ್ರತಿಭಟನಾಕಾರರನ್ನು ನರಸಿಂಹ ರಾಯರ ಸರಕಾರ ಕ್ರೂರವಾಗಿ ಹತ್ತಿಕ್ಕಲು ಪ್ರಯತ್ನಿಸಿತು. ಇದು ಹಳೆಯ ಮಾತು.

ಈಗ ಗ್ಯಾಟ್‌ನ ಒಂದೊಂದು ಉರುಳೂ ಬಿಗಿಯಾಗುತ್ತಲೇ ಹೋಗುತ್ತಿದೆ. ಗ್ಯಾಟ್ ಒಪ್ಪಂದಕ್ಕೆ ಸಹಿ ಹಾಕಿದ ದೇಶಗಳು ತಮ್ಮ ದೇಶ ಪರ್ಶ್ವ ಆಮದುಗಳ ಮೇಲಿನ ನಿರ್ಬಂಧಗಳನ್ನು ತೆಗದು ಹಾಕಬೇಕೆಂಬುದು ಗ್ಯಾಟ್‌ನ ಒಂದು ಶರತ್ತು. ಈ ಭಾರತ ಗ್ಯಾಟ್ ಒಪ್ಪಂದಕ್ಕೆ ಸಹಿ ಹಾಕಿದ ಮೇಲೆ ಸತತವಾಗಿ ಆಮದು ಉದಾರೀ ಕರಣ ಮಾಡುತ್ತಲೇ ಬಂದಿದೆ. ಅಭಿವೃದ್ಧಿ ಹೊಂದಿದ ದೇಶಗಳಿಗೆ ಇದು ಸಾಲದು. ಅವರ ಒತ್ತಾಯವೆಂದರೆ ಆಮದಿನ ಮೇಲೆ ಯಾವುದೇ ಅಡೆತಡೆಗಳಿರಬಾರದೆಂಬುದು ಅಮೆರಿಕ, ಯುರೋಪಿಯನ್ ಒಕ್ಕೂಟ, ಜಪಾನ್ ಮತ್ತು ಕೆನಡಾ ಈ ಒತ್ತಡ ಹೇರುತ್ತಿರುವ ದೇಶಗಳು.

ಯುರೋಪಿನ ಒಕ್ಕೂಟ ಈ ವಿಶ್ವ ವ್ಯಾಪಾರ ಸಂಸ್ಥೆಯ ನ್ಯಾಯ ವಿಭಾಗ ಈ ವಿಷಯದಲ್ಲಿ ತನ್ನ ಅಧಿಕಾರ ಚಲಾಯಿಸಿ ನ್ಯಾಯ ನೀಡಬೇಕೆಂದು ಕೇಳಿದೆ.

ಈ ಆಮದಿನ ಮೇಲಿನ ನಿರ್ಬಂಧ ತೆಗೆಯುವುದರಿಂದ ಈ ದೇಶಗಳಿಗೇನು ಲಾಭ? ಅಭಿವದ್ಧಿ ಹೊಂದಿದ ಈ ದೇಶಗಳಲ್ಲಿ ಬೆಳವಣಿಗೆಯ ದರ ಬಹಳ ಕಡಿಮೆ. ಯಾಕೆಂದರೆ ಕಡಿಮೆ ಜನಸಂಖ್ಯೆಯಿರುವ ದೇಶಗಳಲ್ಲಿ ಮಾರುಕಟ್ಟೆ ಬೆಳೆಯಲು ಅವಕಾಶ ಹೆಚ್ಚಿಲ್ಲ. ಭಾರತದಂತಹ ವಿಶಾಲ ದೇಶದ ಮಾರುಕಟ್ಟೆ ದೊರೆತರೆ ಅವರಿಗೆ ಲಾಭದ ಹೊಳೆಯೇ ಹರಿದು ಬರುತ್ತದೆ. ಆದ್ದರಿಂದಲೇ ಈ ಒತ್ತಡ

ಆದರೆ ಈ ದೇಶಗಳಲ್ಲಿ ಭಾರತದಿಂದ ಆ ದೇಶಗಳಿಗೆ ರಫ್ತಾಗುವ ಸರಕುಗಳ ಬಗ್ಗೆ ವಿವಿಧ ನಿಬಂಧನೆ ಹೇರುತ್ತವೆ. ಸರಕು ಉತ್ತಮ ಗುಣಮಟ್ಟದ್ದಲ್ಲ, ಉತ್ಪಾದನೆಯಲ್ಲಿ ಬಾಲ ಕಾರ್ಮಿಕರ ಬಳಕೆಯಾಗಿದೆ ಎಂಬಿತ್ಯಾದಿ ನೆಪಗಳನ್ನು ಅವು ಒಡ್ಡುತ್ತವೆ. ಭಾರತದಿಂದ ರಫ್ತಾಗುವ ಜವಳಿಯ ಮೇಲೆ ಕೋಟಾ ಪದ್ಧತಿ ಹೇರಿರುವ ಯುರೋಪ್ ಇತರೆ ಸರಕುಗಳ ಮೇಲೂ ತನ್ನದೇ ನಿರ್ಬಂಧಗಳನ್ನು ಹೇರಿದೆ. ಅವರಿಗೆ ಮಾತ್ರ ನಮ್ಮ ಮಾರುಕಟ್ಟೆಗಳು ಮುಕ್ತವಾಗಿ ದೊರೆಯಬೇಕು. ಇದು ಸಾಮ್ರಾಜ್ಯ ಶಾಹಿಗಳ ನ್ಯಾಯ ಪ್ರಜ್ಞೆ.

ಉದ್ದಿಮೆಗಳಿಗೆ ಮಲರೋಗ

'ಕರೆದು ಹೆಣ್ಣು ಕೊಟ್ಟರೆ ಮಗನಿಗೆವಕ್ತಾರರು ಬ್ಯಾಂಕುಗಳು ಸಾಲ ನೀಡಲು
ಮಲರೋಗ' ಎಂಬ ಗಾದೆಯೊಂದಿದೆ. ಹಾಗೆತುಂಬಾ ಹಿಂಜರಿದವು ಇದೂ ಒಂದು ಕಾರಣ
ನಮ್ಮ ಭಾರತೀಯ ಉದ್ದಿಮೆಗಳು. ಉದಾರೀಕರಿಂದಿದ್ದಾರೆ. ಅಲ್ಲದೆ ತಮ್ಮ ಸಂಘಟನೆ
ಕರಣದ ಕ್ರಮಗಳು ಒಂದರ ಮೇಲೆ ಒಂದುಮೊದಲೇ ಇಂತಹ ಬೆಳವಣಿಗೆಯ ಕುಸಿತ
ರಂತೆ ಸರಮಾಲೆಯಾಗಿ ಬಂದು ಉರುಳಿದರೂಆಗುತ್ತದೆ ಎಂದು ಭವಿಷ್ಯ ನುಡಿದಿತ್ತು ಎಂದು
ಔದ್ಯಮಿಕ ಬೆಳವಣಿಗೆಯ ವೇಗ ತೀವ್ರವಾಗುಮದೆ ತಟ್ಟಿ ಹೇಳಿಕೊಂಡಿದ್ದಾರೆ.
ಲಕ್ಷಣವೇ ಇಲ್ಲ. ಬದಲಿಗೆ ಅದು ಕಡಿಮೆ ಇದಕ್ಕೆ ತದ್ವಿರುದ್ಧ ವಾಗಿ ಸಿಐಐ ಎಂಬ
ಯಾಗುತ್ತಿದೆ. ಉದ್ದಿಮೆದಾರರ ಸಂಘಟನೆಯಾದಸಂಘಟನೆಯ ವಕ್ತಾರರು ಬರುವ ವರ್ಷದಲ್ಲಿ
ಆಸ್ಸೋಚಾಮ್ ಬೆಳವಣಿಗೆ ದರ ಬರೀ ಶೇಬೆಳವಣಿಗೆ ದರ ಶೇ 12 ಕ್ಕೆ ಏರಲಿದೆ ಎಂಬ
8.5 ರಷ್ಟಿರುತ್ತದೆ ಎಂದಿದೆ(1997-98ಕ್ಕೆ). ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ.
ಆದರೆ ಉದ್ದಿಮೆದಾರರ ಇನ್ನೊಂದು ಸಂಘ ಔದ್ಯಮಿಕ ಬೆಳವಣಿಗೆಯ ದರದ ಬಗ್ಗೆ
'ಟನೆಯಾದ ಸಿಐಐ ಬೆಳವಣಿಗೆ ದರ ಶೇ 12ಬಂಡವಾಳಿಗರಲ್ಲೇ ಒಮ್ಮತವಿಲ್ಲ. ಒಬ್ಬರು
ರಷ್ಟಿರುತ್ತದೆ ಎಂಬ ಆಶಾವಾದ ವ್ಯಕ್ತಪಡಿಸಿದೆಬೆಳವಣಿಗೆ ಆಗುತ್ತದೆ ಎಂದರೆ ಇನ್ನೊಬ್ಬರು
ಆಸ್ಸೋಚಾಮ್ 1996-97 ರ ಇಲ್ಲ ಎನ್ನುತ್ತಾರೆ. ಇವರು ಹೇಳುವ ತರಹದ
ಬೆಳವಣಿಗೆ ದರ ಕಡಿಮೆಯಾದದ್ದನ್ನು ಗಮಬೆಳವಣಿಗೆ ಆದರೂ ದೇಶದ ದುಡಿವ
ನಿಸಿ ಔದ್ಯಮಿಕ ಕ್ಷೇತ್ರದಲ್ಲಿ ಎದುರಾಗಿರುವಜನರಿಗೆ ಲಾಭವಾಗುತ್ತದೆಂದಲ್ಲ. ಉದಾರೀ
ಸವಾಲುಗಳ ಚರ್ಚೆಗೆ ಸಭೆಯೊಂದನ್ನು ನಡೆಸುಕರಣದ ಕ್ರಮ ಜನಸಾಮಾನ್ಯರ ಲಾಭಕ್ಕಾಗಿ
ಲಿದೆ. ಈ ಸಭೆಯಲ್ಲಿ ಔದ್ಯಮಿಕ ಬೆಳವಣಿಗೆತಂದಂತಹವೇ ಅಲ್ಲ. ಅವು ಕೆಲವೇ ಕೆಲವರಿಗೆ
ಹೆಚ್ಚಲು ಎಂತಹ ನೀತಿಯನ್ನು ಸರಕಾರ ಅನುಅಪಾರ ಶ್ರೀಮಂತಿಕೆ ಮತ್ತು ಅಪಾರ ಜನಕ್ಕೆ
ಸರಿಸಬೇಕು ಎಂಬ ಬಗೆಗೂ ಚರ್ಚೆ ಆಗಲಿಬಡತನ, ನೋವು, ತರಲೆಂದೇ ಬಂದಂತಹವು.
ಎಷ್ಟೇ ಉದಾರೀಕರಣ ಮಾಡಿದರೂ ಬೆಳ
ದೆಯಂತೆ.
ಕಳೆದ ವರ್ಷದ ಕೊನೆಯಾರ್ಧದಲ್ಲಿ ವಣಿಗೆ ಹೀಗೇ ಏರುಪೇರು ಆಗುತ್ತಲೇ ಇರು
ಔದ್ಯಮಿಕ ಬೆಳವಣಿಗೆಯ ದರವನ್ನು ಗಮನಿಸ್ತದೆ. ಇದು ಬಂಡವಾಳಶಾಹಿಯ ಬಿಕ್ಕಟ್ಟನ್ನು
ಸಿದರೆ ಈ ಬೆಳವಣಿಗೆ ದರ ಹೆಚ್ಚಲು ಸಾಕಷ್ಟುಜಗತ್ತಿನ ಬಿಕ್ಕಟ್ಟುಗಳನ್ನು ಪರಿಹರಿಸುವ
ಸಮಯ ಬೇಕಾಗುತ್ತದೆ ಎಂಬುದು ಆಸ್ಸೋಚಾಮ್‌ನಾಡುವ ಇವರುಗಳಿಗೆ ತಮ್ಮ ಬಿಕ್ಕಟ್ಟ
ಚಾಮ್‌ನ ಅಭಿಪ್ರಾಯ. ಈ ಸಂಘಟನೆಯನ್ನೇ ಪರಿಹರಿಸಿಕೊಳ್ಳಲಾಗುತ್ತಿಲ್ಲ. ಅಲ್ಲವೇ?

ವಾರದ ಆರ್ಥಿಕ ಟಿಪ್ಪಣಿಗಳು

ಟಿ.ಎಸ್.ವಾಣಿ

ಮತ್ತೊಮ್ಮೆ ತಪ್ಪಿದ ಪೆಟ್ರೋಲಿಯಂ ಬೆಲೆ ಏರಿಕೆ

ಸಿಪಿಐ(ಎಂ)ನಿಂದಾಗಿ ಮತ್ತೊಮ್ಮೆ ಪೆಟ್ರೋಲ್ ಬೆಲೆಗಳು ಏರುವುದು ತಪ್ಪಿ ಹೋಗಿದೆ. ಬೂರ್ಜ್ವಾ ಅರ್ಥಶಾಸ್ತ್ರಜ್ಞರು/ಸಮೂಹ ಮಾಧ್ಯಮಗಳು ಸಿಪಿಐ(ಎಂ) ಇದಕ್ಕೆ ಪ್ರಬಲ ವಿರೋಧ ವ್ಯಕ್ತಪಡಿಸಿ, ಏರಿಕೆಗೆ ಪರ್ಯಾಯ ಮಾರ್ಗಗಳಿವೆ ಎಂದು ಎತ್ತಿ ತೋರಿಸಿದ್ದನ್ನು ನೋಡಿ ಬಾಯಿ ಬಡಿದುಕೊಳ್ಳುತ್ತಿವೆ. ಒಂದು ಹಣಕಾಸು ಸುದ್ದಿ ದೈನಿಕವಂತೂ ಸೀತಾರಾಂ ಯೆಚೂರಿಯವರ ವಾದವನ್ನು ಖಂಡಿಸುತ್ತಾ 'ತಪ್ಪು ಯೆಚೂರಿಯವರೆ' ಎಂದು ಸಂಪಾದಕೀಯವನ್ನೇ ಬರೆದಿದೆ.

ಸಿಪಿಐ(ಎಂ) ಪೆಟ್ರೋಲಿಯಂ ಬೆಲೆ ಏರಿಸಿದರೆ ದೇಶದಾದ್ಯಂತ ಪ್ರತಿಭಟನೆ ಮಾಡುವುದಾಗಿ ಹೇಳಿದ್ದು ಬಹುಶಃ ಸರಕಾರಕ್ಕೆ ವಿಷಯದ ಗಂಭೀರತೆಯನ್ನು ಅರ್ಥ ಮಾಡಿ ಕೊಟ್ಟಿರಬೇಕು. ಜೂನ್ 16 ರಂದು ನಡೆದ ಸಂಯುಕ್ತ ರಂಗದ ಚಾಲನಾ ಸಮಿತಿಯಲ್ಲಿ ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಲೇ ಬೇಕೆಂದು ಕೂಡಿದ್ದ ಪ್ರಧಾನ ಮಂತ್ರಿ ಮತ್ತು ಹಣಕಾಸು ಮಂತ್ರಿಗಳಿಗೆ ಸ್ವಲ್ಪ ಭಯ ಹುಟ್ಟಿರುವಂತೆ ಕಾಣುತ್ತಿದೆ. ಬಂಡವಾಳಿಗರ ಸಮೂಹ ಮಾಧ್ಯಮಗಳೆಲ್ಲ ಬೆಲೆಯೇರಿಸದೆ ಬೇರೆ ದಾರಿಯೇ ಇಲ್ಲ ಎಂದು ವಾದ ಮಾಡುತ್ತಿದ್ದಾರೆ.

ಜನರ ಬಗ್ಗೆ ನಿಜವಾದ ಕಾಳಜಿ ಇರುವುದು ಸಿಪಿಐ(ಎಂ) ಮತ್ತು ಎಡ ಪಕ್ಷಗಳಿಗೋ ಅಥವಾ ಈ ಬೂರ್ಜ್ವಾ ಜಮೀನ್ದಾರಿ ವರ್ಗ ಗಳಿಗೋ ಎಂಬುದು ಜನರಿಗೆ ಸ್ಪಷ್ಟವಾಗ ತೊಡಗಿದೆ

''ಉಪವಾಸವ ಉಣ್ಣಿರಿ''

ಈ ಮಾತು ಹೇಗಿದೆ? ಬಹಳ ವಿಚಿತ್ರವೆನಿಸುತ್ತದೆಯಲ್ಲವೇ? ಇದು ಉದಾರೀಕರಣ ಜನಗಳಿಗೆ ಹೇಳುವ ಮಾತು. ಈಗ ಅನ್ನ ಬೆಳೆವ ಪಂಜಾಬ್ ಮತ್ತು ಹರ್‍ಯಾಣಗಳ ರೈತರಿಗೆ ಕೇಂದ್ರ ಸರಕಾರ ದೊಡ್ಡ ಕಿವಿ ಮಾತನ್ನು ಟಿ.ವಿ. ಮೂಲಕ ಹೇಳುತ್ತದಂತೆ ''ಬಾಸುಮತಿ ಭತ್ತ ಬೆಳೆದು ಶ್ರೀಮಂತರಾಗಿ'' ಎಂದು ಬಾಸುಮತಿ ಭತ್ತ ಬೆಳೆಯಲು ತೊಡಗಿದರೆ ಏನಾಗುತ್ತದೆ? ಸಾಮಾನ್ಯರು ಉಣ್ಣುವ ಅಕ್ಕಿ ಉತ್ಪಾದನೆ ಕಡಿಮೆಯಾಗುತ್ತದೆ. ಬಾಸುಮತಿ ಅಕ್ಕಿಯನ್ನು ರಫ್ತು ಮಾಡಲಾಗುತ್ತದೆ. ಯಾಕೆಂದರೆ ಈ ಬಾಸುಮತಿ ಅನ್ನ ಉಣ್ಣುವ ಶ್ರೀಮಂತರು ವಿದೇಶಗಳಲ್ಲೇ ಇರುವುದು. ಇವೆಲ್ಲದರ ಒಟ್ಟಾರೆ ಪರಿಣಾಮ ನಾವು ಬಾಸುಮತಿ ಬೆಳೆದು ರಫ್ತು ಮಾಡಿದರೆ ನಮ್ಮ ದೇಶದ ಜನರಿಗೇ ಉಣ್ಣಲು ಅಕ್ಕಿ ದೊರೆಯುವುದಿಲ್ಲ. ಅಕ್ಕಿಯನ್ನು ಆಮದು ಮಾಡಿಕೊಳ್ಳಹೋದರೆ ಅದರ ಬೆಲೆ ಹೆಚ್ಚುತ್ತದೆ. ಹೆಚ್ಚು ಬೆಲೆ ತೆತ್ತು ಕೊಳ್ಳುವ ಸಾಮರ್ಥ್ಯ ನಮ್ಮ ಜನಸಾಮಾನ್ಯರಿಗೆ ಇರುವುದಿಲ್ಲ. ಆದ್ದರಿಂದ ನಮ್ಮ ಜನಸಾಮಾನ್ಯರಿಗೆ ಉಪವಾಸವೇ ಗತಿಯಾಗುತ್ತದೆ. ಅದನ್ನೇ (ಉಪವಾಸವನ್ನೇ) ಉಣ್ಣಬೇಕು ಅವರು.

ಮನುಷ್ಯರ ಆಹಾರವೊಂದನ್ನೇ ರಫ್ತು ಮಾಡಲಾಗುತ್ತಿಲ್ಲ. ಭಾರತದ ಪ್ರಾಣಿಗಳಿಗೂ ಈ ರಫ್ತಿನ ಬಿಸಿ ತಟ್ಟಿದೆ. ಭಾರತದಿಂದ ಪಶು ಆಹಾರದ ರಫ್ತು ಆಗುತ್ತಿದೆ. ದೇಶದ ಪಶುಗಳಿಗೆ ಸಾಕಷ್ಟು ಆಹಾರವಿಲ್ಲ. ಈ ರಫ್ತು ಅಭಿಮುಖದ ಉದಾರೀಕರಣ ಮನುಷ್ಯರ ಆಹಾರ ಬೆಳೆವ ಭೂಮಿಯನ್ನೇ ವಿದೇಶಿ ಪಶುಗಳಿಗೆ ಆಹಾರ ಬೆಳೆಯಲು ಬಳಸುವಂತೆ ಒತ್ತಡ ಹೇರುತ್ತಿವೆ. ಆದ್ದರಿಂದ ದೇಶದ ಜನರಿಗೆ (ಜನಸಾಮಾನ್ಯರಿಗೆ) ಮತ್ತು ಪ್ರಾಣಿಗಳಿಗೆ ಉಪವಾಸ. ಬೆಳೆದ ಆಹಾರ ರಫ್ತು ಹೇಗಿದೆ ಈ ನೀತಿ?



ಸುಪ್ರಿಂಕೋರ್ಟ್ ತೀರ್ಪಿನಿಂದ ಹಸಿವಿನ ದವಡೆಗೆ ಕಾರ್ಮಿಕರು

ಮಾಲಿನ್ಯ ತಡೆಯ ಹೆಸರಿನಲ್ಲಿ ಸುಪ್ರಿಂ ಕೋರ್ಟ್ ನೀಡಿರುವ ವಿವೇಚನೆಯಿಲ್ಲದ, ಕ್ರೂರ ಹಾಗೂ ಮಾಲಕರ ಪರವಾದ ಏಕ ಮುಖವಾದ ತೀರ್ಪಿನಿಂದಾಗಿ ಸಾವಿರಾರು ಕಾರ್ಮಿಕರ ಸ್ಥಿತಿ ದಿನದಿಂದ ದಿನಕ್ಕೆ ಹದಗೆಡುತ್ತಿದೆ ಎಂದು ಸಿಪಿಐ(ಎಂ) ಮತ್ತು ಸಿಐಟಿಯು ದೆಹಲಿ ರಾಜ್ಯ ಸಮಿತಿಗಳು ತೀವ್ರ ಕಳವಳ ವ್ಯಕ್ತಪಡಿಸಿವೆ.

ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ 163 ಕೈಗಾರಿಕಾ ಘಟಕಗಳನ್ನು ಮುಚ್ಚಲಾಗಿದೆ. ಇವುಗಳ ಪೈಕಿ ಬಹುತೇಕ ಪ್ರತಿಯೊಂದು ಉದ್ಯಮದ ಮಾಲಿಕರು ತೀರ್ಪಿನಲ್ಲಿರುವ ದೋಷಗಳು ಹಾಗೂ ದೌರ್ಬಲ್ಯಗಳನ್ನು ತಮ್ಮ ಲಾಭಕ್ಕೆ ಬಳಸಿಕೊಂಡಿದ್ದಾರೆ. ಕೈಗಾರಿಕೆ ಮುಚ್ಚಿದ್ದಕ್ಕೆ ಕೊಡಬೇಕಾದ ಆರು ವರ್ಷಗಳ ಪರಿಹಾರವನ್ನು ಕಾರ್ಮಿಕರಿಗೆ ಕೊಡದೆ ವಂಚಿಸಿದ್ದಾರೆ. ಈ ರೀತಿಯ ಪರಿಹಾರ ಪಡೆಯುವುದು ಕಾರ್ಮಿಕರ ಹಕ್ಕಾಗಿದೆ.

ಮಾಲೀಕರ ವಂಚನೆಯಿಂದಾಗಿ ಕಾರ್ಮಿಕರು ಹಾಗೂ ಅವರ ಕುಟುಂಬಗಳು ಉಪವಾಸದ ದವಡೆಯಲ್ಲಿದ್ದಾರೆ. ಜವಳಿ ಕೈಗಾರಿಕೆ ಇದಕ್ಕೆ ಒಂದು ಒಳ್ಳೆಯ ಉದಾಹರಣೆಯಾಗಿದೆ.

ಮುಂಬಯಿಯಂತೆ ದಹಲಿಯಲ್ಲಿ ಕೂಡಾ ಜವಳಿ ಮಿಲ್‌ಗಳು ಸಾವಿರಾರು ಕೋಟಿ ರೂಪಾಯಿ ಬೆಲೆ ಬಾಳುವ ಅಮೂಲ್ಯ ಜಮೀನಿನಲ್ಲಿವೆ. ಕಾರ್ಮಿಕರಿಗೆ ಕನಿಷ್ಟ ಪರಿಹಾರ ಕೊಟ್ಟು ಮಿಲ್‌ಗಳನ್ನು ಮುಚ್ಚುವುದನ್ನೇ ಮಾಲಿಕರು ಕಾಯುತ್ತಿದ್ದರು. ಸುಪ್ರಿಂ ಕೋರ್ಟ್‌ನ ತೀರ್ಪು ಇಂಥ ಹಣದಾಹಿ ಮಾಲಿಕರ ಕೈಗೆ ಒಳ್ಳೆಯ ಅಸ್ತ್ರವನ್ನೇ ಕೊಟ್ಟಿತು. ಕಾರ್ಖಾನೆಗಳನ್ನು ದೆಹಲಿಯಿಂದ ದೂರ ಪ್ರದೇಶಗಳಿಗೆ ಸ್ಥಳಾಂತರಿಸಲು ಅನುಮತಿ ಸಿಕ್ಕಿದೆ. ಉದಾಹರಣೆಗೆ ರಾಜಸ್ಥಾನದ ಟೋಂಕ್ ಮತ್ತು ಹಿಮಾಚಲ ಪ್ರದೇಶದ ಬದ್ದಿಗೆ ಸ್ಥಳಾಂತರಿಸಲಾಗುತ್ತಿದೆ.

ದೇಶದ ಉನ್ನತ ನ್ಯಾಯಾಲಯ ಕಾರ್ಮಿಕರ ಎಲ್ಲಾ ಅರ್ಜಿಗಳನ್ನು ತಿರಸ್ಕರಿಸಿತು. ಆದರೆ ಆದೇಶಿತ ಮಿಲ್‌ಗಳು ನಿಜವಾಗಿಯೂ ಸ್ಥಳಾಂತರಗೊಂಡಿವೆಯೇ ಎಂಬುದರ ಪರಿಶೀಲನೆಗೆ ಅದು ಸೂಕ್ತವಾದ ವ್ಯವಸ್ಥೆಯನ್ನು ಮಾಡಲಿಲ್ಲ.

ಮಿಲ್ ಮಾಲೀಕರು ಭಾರೀ ಮೋಸ ಮಾಡುತ್ತಿರುವುದಕ್ಕೆ ಜವಳಿ ಕಾರ್ಮಿಕರೊಂದಿಗೆ ಸೇರಿ ಎಐಎಲ್‌ಯು(ಅಖಿಲ ಭಾರತ ವಕೀಲರ ಸಂಘ) ನಡೆಸಿದ ಅಧ್ಯಯನವೊಂದರಿಂದ ಪ್ರಬಲ ಸಾಕ್ಷ್ಯಗಳು ದೊರೆತಿವೆ. ಕಾಟಾಚಾರಕ್ಕಷ್ಟೆ ಮಿಲ್ ಸ್ಥಳಾಂತರಿಸಿದ ಹಾಗೆ ತೋರಿಸಲಾಗಿದೆ. ವಾಸ್ತವವಾಗಿ ಅಲ್ಲಿ ಕೆಲವು ಟಿನ್‌ಶೆಡ್‌ಗಳು ಮಾತ್ರ ಇವೆ. ವಿದ್ಯುತ್ತಿಲ್ಲ, ನೀರಿಲ್ಲ, ವಾಸಸ್ಥಳವಿಲ್ಲ. ಪರ್ಯಾಯ ಕೆಲಸವಿಲ್ಲವೆಂದರೆ ಮಿಲ್‌ಗಳು ಮುಚ್ಚಲಾಗಿದೇ ಎಂದೇ ಅರ್ಥ. ಇದಕ್ಕಾಗಿ ಕಾರ್ಮಿಕರಿಗೆ ಆರು ವರ್ಷಗಳ ಪರಿಹಾರವನ್ನು ನೀಡಬೇಕಾಗುತ್ತದೆ.

ಬಿಜೆಪಿ ಸರಕಾರ ಶಾಮೀಲು

ದೆಹಲಿಯಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ಸರಕಾರ ಜವಳಿ ಮಿಲ್ ಮಾಲಿಕರೊಂದಿಗೆ ಶಾಮೀಲಾಗುತ್ತಿದೆ. ತಥಾಕಥಿತ ಪರ್ಯಾಯ ಕೆಲಸದ ಸ್ಥಳಗಳ ಬಗ್ಗೆ ವಿವರಗಳನ್ನು ಪಡೆಯುವ ಬದಲು ಪರ್ಯಾಯ ಸ್ಥಳಗಳಿಗೆ ತೆರಳಿ, ಇಲ್ಲವೇ ಕೆಲಸಕ್ಕೆ ರಾಜೀನಾಮೆ ಕೊಡಿ ಎಂದು ಕಾರ್ಮಿಕರಿಗೆ ನೋಟಿಸ್‌ಗಳನ್ನು ನೀಡಲಾಗಿದೆ.

ಬಿಜೆಪಿ ಸರಕಾರದ ಈ ನಾಚಿಕಗೇಡಿನ ಕಾರ್ಮಿಕ ವಿರೋಧಿ, ಮಾಲೀಕರ ಪರವಾದ ಧೋರಣೆಯನ್ನು ಸಿಪಿಐ(ಎಂ) ಮತ್ತು ಸಿಐಟಿಯು ಕಟುವಾಗಿ ಖಂಡಿಸಿದೆ.

ಈಗಿನ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಸುಪ್ರಿಂ ಕೋರ್ಟ್ ತನ್ನ ತೀರ್ಪನ್ನು ಪುನರ್ ಪರಿಶೀಲಿಸಬೇಕು. ಮಾಲಿಕರೊಂದಿಗೆ ಶಾಮೀಲಾಗುವುದನ್ನು ಬಿಜೆಪಿ ಸರಕಾರ ನಿಲ್ಲಿಸಬೇಕು ಹಾಗೂ 1.12.96 ರಿಂದಲೇ ಪೂರ್ಣ ವೇತನವನ್ನು ಕೊಡುವಂತೆ ಆಡಳಿತ ವರ್ಗಗಳ ಮೇಲೆ ಒತ್ತಡ ಹೇರಬೇಕು. ತೀರ್ಪಿನಿಂದ ತೊಂದರೆಗೊಳಗಾದ ಕಾರ್ಮಿಕರಿಗೆ ಪರಿಹಾರ ನೀಡುವಂತೆಯೂ ದೆಹಲಿ ಸರಕಾರ ಮಾಲಿಕರ ಮೇಲೆ ಒತ್ತಡ ತರಬೇಕು ಎಂದು ಸಿಪಿಐ(ಎಂ) ಮತ್ತು ಸಿಐಟಿಯು ಆಗ್ರಹಪಡಿಸಿವೆ.

ಬಿಹಾರ: ಹತಾಶ ಶಕ್ತಿಗಳಿಂದ ಕೋಮು ಹಿಂಸಾಚಾರ

ಬಿಹಾರದ ಗೊಡ್ಡಾ ಜಿಲ್ಲೆಯ ರಣ್‌ದಿಹ್ ಸಕೌನಿ ಪ್ರದೇಶದಲ್ಲಿ ಈಚೆಗೆ ನಡೆದ ಕೋಮು ಹಿಂಸಾಚಾರಗಳನ್ನು ಸಿಪಿಐ(ಎಂ) ಬಿಹಾರ ರಾಜ್ಯ ಸಮಿತಿ ಅತ್ಯುಗ್ರವಾಗಿ ಖಂಡಿಸಿದೆ.

ಈ ಪ್ರದೇಶಗಳಲ್ಲಿ ಮೇ 27 ರಂದು ಇಬ್ಬರು ಮುಸ್ಲಿಮರನ್ನು ಕ್ರೂರವಾಗಿ ಕೊಲ್ಲಲಾಗಿತ್ತು. ಮುಸ್ಲಿಂ ಸಮುದಾಯದವರಿಗೆ ಸೇರಿದ ಸುಮಾರು 70 ಮನೆಗಳನ್ನು ಸುಟ್ಟುಹಾಕಲಾಯಿತು. ಸುಮಾರು 10 ಲಕ್ಷ ರೂಪಾಯಿ ಮೌಲ್ಯದ ಆಸ್ತಿ ನಾಶ ಮಾಡಲಾಗಿತ್ತು. ದುರುಳರು ನಡೆಸಿದ ದುಷ್ಕೃತ್ಯದಲ್ಲಿ ನೂರಾರು ದನಕರುಗಳೂ ಸತ್ತುಹೋದವು. ನೂರಾರು ದನಕರುಗಳನ್ನು ಗಲಭೆಕೋರರು ತೆಗೆದುಕೊಂಡು ಹೋದರು.

ಈ ಭೀಕರ ಘಟನೆಗಿಂತ ಮುಂಚೆಯೇ ವಿಶೇಷವಾಗಿ ವಸಂತ ಪಂಚಮಿ ಮತ್ತು ರಾಮನವಮಿ ಹಬ್ಬಗಳ ಹಿನ್ನೆಲೆಯಲ್ಲಿ ಈ ಪ್ರದೇಶಗಳಲ್ಲಿ ಕೋಮು ವಿದ್ವೇಷ ಹೆಚ್ಚು ಬಿಗುವಿನ ವಾತಾವರಣ ನೆಲೆಸಿತ್ತು.

ಇದು ಬಿಜೆಪಿಯ ಪ್ರಬಲ ಕೇಂದ್ರವಾಗಿದ್ದು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಮುಸ್ಲಿಂ ವಿರೋಧಿ ಪ್ರಚಾರವನ್ನು ಹಬ್ಬಿಸಿತ್ತು. ಮೇ 21 ರಂದು ಮುಸ್ಲಿಂ ಯುವಕನೊಬ್ಬ ಹಿಂದೂ ಮಹಿಳೆಯೊಬ್ಬರ ಮಾನಹರಣ ಮಾಡಿದ್ದರಿಂದ ಬೆಂಕಿಗೆ ಪೆಟ್ರೋಲ್ ಸುರಿದಂತಾಯಿತು. ಈ ಘಟನೆಯ ನಂತರ ಅದೇ ದಿನ ನಾಲ್ಕು ಮುಸ್ಲಿಂ ಮನೆಗಳನ್ನು ಲೂಟಿ ಮಾಡಲಾಯಿತು. ಸಕಾಲದಲ್ಲಿ ಮಾಹಿತಿ ನೀಡಿದರೂ ಪೋಲೀಸರು ಇಲ್ಲಿ ಮೂಕ ಪ್ರೇಕ್ಷಕರಾಗಿ ಉಳಿದರು.

ಪೋಲೀಸರ ಈ ಅದಕ್ಷತೆಯ ಪ್ರಯೋಜನ ಪಡೆದ ಕ್ರಿಮಿನಲ್ ಶಕ್ತಿಗಳು ವ್ಯಾಪಕ ದುಷ್ಕೃತ್ಯದಲ್ಲಿ ತೊಡಗಿದರು. ಪೋಲೀಸರು ಹಾಗೂ ಅಧಿಕಾರಿಗಳು ತುಂಬಾ ಅನುಮಾನಕ್ಕೆ ಎಡೆಮಾಡಿಕೊಡುವ ರೀತಿಯಲ್ಲಿ ವರ್ತಿಸಿದರು. ಮಾನಹರಣಕ್ಕೆ ಒಳಗಾದ ಮಹಿಳೆಯ ಗಂಡನನ್ನೇ ಪೋಲೀಸರು ವಶಕ್ಕೆ ತೆಗೆದುಕೊಂಡಾಗ ಪರಿಸ್ಥಿತಿ ನಿಯಂತ್ರಣ ಮೀರಿತು.

ಪರಿಸ್ಥಿತಿಯನ್ನು ತಹಬಂದಿಗೆ ತರಲು ಪ್ರಯತ್ನಿಸುವ ಬದಲು, ಶಾಂತಿ ಸಮಿತಿ ಸಭೆಗೆ ಶಸ್ತ್ರಾಸ್ತ್ರಗಳೊಂದಿಗೆ ಬರಲು ಕ್ರಿಮಿನಲ್ ಶಕ್ತಿಗಳಿಗೆ ಅಧಿಕಾರಿಗಳು ಅವಕಾಶ ಮಾಡಿಕೊಟ್ಟರು. ಪೋಲೀಸರು ಮತ್ತು ಅಧಿಕಾರಿಗಳ ಈ ಅವಿವೇಕದ ಕ್ರಮದಿಂದಾಗಿ ಶಾಂತಿ ಸಮಿತಿಯಲ್ಲೇ ಕೋಮುವಾದಿ ಶಕ್ತಿಗಳಿಗೆ ದುಷ್ಕೃತ್ಯ ನಡೆಸಲು ಉತ್ತಮ ವೇದಿಕೆಯನ್ನು ಒದಗಿಸಿತು.

ಸುಮಾರು ಹತ್ತು ಸಾವಿರಕ್ಕಿಂತ ಹೆಚ್ಚಿನ ಗಲಭೆಕೋರರು ಶಾಂತಿ ಸಮಿತಿ ಸಭೆಯ ಸ್ಥಳದ ಬಳಿ ನೆರೆದು ರಣದಿಹ್ ಗ್ರಾಮದಲ್ಲಿ ಹಿಂಸಾಚಾರವನ್ನು ಹರಿಯಬಿಟ್ಟರು. ಮಹಮದ್ ಶಕೂರ್ ಮತ್ತು ಧಿಬು ಅನ್ಸಾರಿ ಎಂಬುವರನ್ನು ಕೊಂದರು. ಅದೇ ಸಮುದಾಯದ ಇನ್ನೊಬ್ಬ ಯುವಕ ತೀವ್ರವಾಗಿ ಗಾಯಗೊಂಡನು.

ಪ್ರತ್ಯಕ್ಷ ದರ್ಶಿಗಳು ಹೇಳುವ ಪ್ರಕಾರ ಕೋಮುವಾದಿಗಳು ದಾಂಧಲೆ ನಡೆಸುತ್ತಿದ್ದಾಗ ಎಲ್ಲಾ ಹಿರಿಯ ಅಧಿಕಾರಿಗಳು ಹಾಜರಿದ್ದರೂ ದುಷ್ಕರ್ಮಿಗಳನ್ನು ನಿಯಂತ್ರಿಸುವ ಬದಲು ಸ್ಥಳದಿಂದ ಪಲಾಯನ ಮಾಡಿದರು.

ಸಿಪಿಐ(ಎಂ) ಮತ್ತು ಸಿಪಿಐ(ಎಂಎಲ್) ನಾಯಕರಿದ್ದ ಸತ್ಯಶೋಧನೆ ತಂಡವೊಂದು ಮೇ 30 ರಂದು ಗ್ರಾಮಗಳಿಗೆ ಭೇಟಿ ನೀಡಿತು. ಜಿಲ್ಲಾಧಿಕಾರಿಗಳ ಸಹಿತ ಇಡೀ ಜಿಲ್ಲಾಡಳಿತ ಈ ದುರಂತಕ್ಕೆ ಪೂರ್ಣ ಹೊಣೆ ಎಂದು ಸತ್ಯಶೋಧನೆ ತಂಡ ಹೇಳಿದೆ. ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳುವಂತೆ ಆಗ್ರಹಿಸಿದೆ.

ಬಿಜೆಪಿ ಹತಾಶ ಯತ್ನ

ಕೋಮು ಹಿಂಸೆಯನ್ನು ಪ್ರಚೋದಿಸುವಲ್ಲಿ ಬಿಜೆಪಿ ವಹಿಸಿದ ಪಾತ್ರವನ್ನು ಸಿಪಿಐ(ಎಂ) ಬಿಹಾರ ರಾಜ್ಯ ಸಮಿತಿ ತೀವ್ರವಾಗಿ ಖಂಡಿಸಿದೆ. ಬುಡಕಟ್ಟು ಜನರೇ ಹೆಚ್ಚಿರುವ ಛೋಟಾನಾಗಾಪುರ ಮತ್ತು ಸಂತಾಲ್ ಪರಗಣ ಪ್ರದೇಶಗಳಲ್ಲಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ಭಾರತೀಯ ಜನತಾಪಕ್ಷ ಕೋಮು ವಿಷಯವನ್ನು ಬಿತ್ತುತ್ತಿದೆ ಎಂದು ಸಿಪಿಐ(ಎಂ) ಹೇಳಿದೆ. ಮೇವು ಹಗರಣದ ಆರೋಪಿ ಮುಖ್ಯಮಂತ್ರಿ ಲಾಲೂ ಪ್ರಸಾದ್ ಯಾದವ್ ರಾಜಿನಾಮೆ ಆಗ್ರಹಿಸಿ 15 ಎಡ ಹಾಗೂ ಪ್ರಜಾಸತ್ತಾತ್ಮಕ ಪಕ್ಷಗಳು ನಡೆಸಿದ ಆಂದೋಲನಕ್ಕೆ ಸಿಕ್ಕ ಅಭೂತಪೂರ್ವ ಪ್ರತಿಕ್ರಿಯೆಯಿಂದ ಧೃತಿಗೆಟ್ಟಿರುವ ಬಿಜೆಪಿ ಮತ್ತೆ ತನ್ನ ಕೋಮುವಾದಿ ಆಟಕ್ಕೆ ಶರಣಾಗಿದೆ ಎಂದು ಪಕ್ಷ ಹೇಳಿದೆ

ನಿಯೋಗಿ ಹಂತಕರಿಗೆ ಜೀವಾವಧಿ, ಗಲ್ಲು ಶಿಕ್ಷೆ

ಜನಪ್ರಿಯ ಕಾರ್ಮಿಕ ಮುಖಂಡ ಶಂಕರ್ ಗುಹಾ ನಿಯೋಗಿ ಅವರ ಹಂತಕರಿಗೆ ಕೊನೆಗೂ ನ್ಯಾಯಾಲಯದಲ್ಲಿ ಶಿಕ್ಷೆ ಆಗಿದೆ. ಮಧ್ಯಪ್ರದೇಶದಲ್ಲಿ ಖ್ಯಾತರಾಗಿದ್ದ ನಿಯೋಗಿ ಅವರನ್ನು 1991 ಸೆಪ್ಟೆಂಬರ್ 28 ರಂದು ಭಿಲಾಯಿಯಲ್ಲಿ ಅವರ ಮನೆಯಲ್ಲಿ ಗುಂಡಿಟ್ಟು ಕೊಲ್ಲಲಾಗಿತ್ತು.

ಮಧ್ಯಪ್ರದೇಶದ ಚತ್ತೀಸ್‌ಗಢ ವಲಯದಲ್ಲಿ ಕಾರ್ಮಿಕ ಆಂದೋಲನದಲ್ಲಿ ಮುಂಚೂಣಿಯಲ್ಲಿದ್ದ ನಿಯೋಗಿ ಹತ್ಯೆಯಲ್ಲಿ ಆ ವಲಯದ ಕಾರ್ಖಾನೆಗಳ ಮಾಲಿಕರ, ಸ್ಥಾಪಿತ ಹಿತಾಸಕ್ತಿಗಳ ಕೈವಾಡ ಇತ್ತು. ನಿಯೋಗಿ ಹತ್ಯೆಗೆ ವ್ಯಾಪಕ ಪ್ರತಿಭಟನೆ ವ್ಯಕ್ತವಾಗಿತ್ತು. ವ್ಯಾಪಕ ಪ್ರತಿಭಟನೆಯ ಫಲಶೃತಿಯಾಗಿ ಹಲವು ಉದ್ಯಮಿಗಳಲ್ಲದೆ ಬಾಡಿಗೆ ಹಂತಕರನ್ನು ಬಂಧಿಸಲಾಗಿತ್ತು.

ಇದೀಗ ದೀರ್ಘ ವಿಚಾರಣೆಯ ನಂತರ ನ್ಯಾಯಾಲಯದ ತೀರ್ಪು ಹೊರಬಿದ್ದಿದೆ. ಬಾಡಿಗೆ ಹಂತಕರಲ್ಲಿ ಪಾಲ್ತಾನ್ ಮುಲ್ಲಾ ಅಲಿಯಾಸ್ ರವಿಗೆ ಮರಣದಂಡನೆ ಶಿಕ್ಷೆಯನ್ನು ವಿಧಿಸಲಾಗಿದೆ. ಇಬ್ಬರು ಪ್ರಮುಖ ಉದ್ಯಮಿಗಳಾದ ಮೂಲ್‌ಚಂದ್ ಷಾ ಮತ್ತು ಚಂದ್ರಕಾಂತ ಷಾ ಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿದ. ಇವರಿಬ್ಬರಲ್ಲದೆ ಜ್ಞಾನ ಪ್ರಕಾಶ್ ಮಿಶ್ರಾ, ಅವದೇಶ್ ರಾಯ್ ಮುಂಚೂಣಿಯಲ್ಲಿದ್ದ ನಿಯೋಗಿ ಹತ್ಯೆಯಲ್ಲಿ ಮತ್ತು ಅಭಯ ಸಿಂಗ್ ಎಂಬುವವರಿಗೂ ಜೀವಾವಧಿ ಶಿಕ್ಷೆಯಾಗಿದೆ.

ಕಾರ್ಮಿಕ ಚಳುವಳಿಯನ್ನು ಬಗ್ಗು ಬಡಿಯಲು ಬಂಡವಾಳಶಾಹಿಗಳು ಎಲ್ಲಾ ತಂತ್ರಗಳನ್ನು ಬಳಸುತ್ತಾರ ಮುಖಂಡರ, ಕಾರ್ಮಿಕ ಸಂಘಟನೆಗಳ ಸದಸ್ಯರ ಮೇಲೆ ದೈಹಿಕ ಹಲ್ಲೆ ನಡೆಸುವುದೂ ಇದರಲ್ಲಿ ಸೇರಿರುತ್ತದೆ. ಕೊಲೆ ಮಾಡಲೂ ಅವರು ಹೇಸುವುದಿಲ್ಲ. ಸ್ಥಾಪಿತ ಹಿತಾಸಕ್ತರ ಪಿತೂರಿಯಿಂದಾಗಿ ಆದೆಷ್ಟೋ ಟ್ರೇಡ್‌ಯೂನಿಯನ್ ನಾಯಕರು, ಕಾರ್ಯಕರ್ತರು ಬಲಿಯಾಗಿದ್ದಾರೆ. ಬಹುತೇಕ ಸಂದರ್ಭಗಳಲ್ಲಿ ಯಾರೋ ಕೊಲೆಗಾರರು ಸಿಗುತ್ತಾರೆ. ಅವರಿಗೆ ಶಿಕ್ಷೆ ಯಾಗುತ್ತದೆಯೇ ಹೊರತು ಹತ್ಯೆ ಹಿಂದಿರುವ ನಿಜವಾದ ಶಕ್ತಿಗಳು ತಪ್ಪಿಸಿಕೊಳ್ಳುತ್ತಾರೆ. ಆದರೆ ಶಂಕರ ಗುಹಾನಿಯೋಗಿ ಪ್ರಕರಣದಲ್ಲಿ ಅವರ ಹಂತಕನಲ್ಲದೆ ಹತ್ಯೆಯನ್ನು ಯೋಜಿಸಿದ್ದ ಕೈಗಾರಿಕೋದ್ಯಮಿಗಳೂ ಸಿಕ್ಕಿಬಿದ್ದು ಶಿಕ್ಷೆಯಾಗಿ ರುವುದು ಒಂದು ಗಮನಾರ್ಹ ವಿದ್ಯಮಾನ ವಾಗಿದೆ.

ದಿಲ್ಲಿ ಅಗ್ನಿ ದುರಂತ ಸಂರಕ್ಷಣಾ ಕ್ರಮಗಳನ್ನು ಪಾಲಿಸುವಂತೆ ಮಾಡಬೇಕು - ಪೊಲಿಟ್‌ಬ್ಯೂರೊ

ಜೂನ್ 14 ರಂದು ದೆಹಲಿಯ ಸಿನೆಮಾ ಮಂದಿರವೊಂದರಲ್ಲಿನ ಭಯಾನಕ ಅಗ್ನಿ ದುರಂತದಲ್ಲಿ 59 ಜನ ಸಾವಿಗೀಡಾಗಿ, ಇನ್ನೂ ಹಲವರು ಗಂಭೀರ ಗಾಯಗಳಾಗಿರುವ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯೂರೋ ತನ್ನ ಆಘಾತ ಹಾಗೂ ದುಃಖವನ್ನು ವ್ಯಕ್ತಪಡಿಸಿದೆ. ಸಿನೆಮಾ ಮಂದಿರಗಳು, ಹೋಟೇಲ್‌ಗಳು ಎತ್ತರದ ಕಟ್ಟಡಗಳಲ್ಲಿ ಅಗ್ನಿ-ಸಂರಕ್ಷಣಾ ಕ್ರಮಗಳ ಸಂಪೂರ್ಣ ಅಭಾವ ಅಥವಾ ಉಲ್ಲಂಘನೆಯ ಪ್ರವೃತ್ತಿಯತ್ತ ಮತ್ತೊಮ್ಮೆ ಗಮನ ಸೆಳೆದಿದೆ. ಮತ್ತೆ-ಮತ್ತೆ ಇಂತಹ ಅಘಘಾತಗಳಾದರೂ ಕನಿಷ್ಠ ಅಗ್ನಿ-ಸಂರಕ್ಷಣಾ ಕ್ರಮಗಳಿರುವಂತೆ [illegible] ಭಯಾನಕ ಘಟನೆಯ ಹೊಣೆಗಾರಿಕೆಯನ್ನು ನಿರ್ದಿಷ್ಟಪಡಿಸಲು ಒಂದು ಸೂಕ್ತ ಪರಿಣತ ವಿಚಾರಣೆಯನ್ನು ಬೇಗನೆ ನಡೆಸಬೇಕು. ಈ ದುರಂತವಾದರೂ ಈಗಿನ ಪರಿಸ್ಥಿತಿಯನ್ನು ಪರಿಶೀಲಿಸಿ ಸಂರಕ್ಷಣಾ ಕ್ರಮಗಳನ್ನು ಜನಗಳ ಸಹಕಾರದಿಂದ ಕಟ್ಟುನಿಟ್ಟಾಗಿ ಜಾರಿಗೊಳಿಸುವಂತಾಗಲಿ ಎಂದು ಪೊಲಿಟ್‌ಬ್ಯೂರೋ ಆಶಿಸಿದೆ. ಈ ದುರಂತದಲ್ಲಿ ದುಃಖಕ್ಕೀಡಾದ, ನಷ್ಟ ಅನುಭವಿಸಿದ ಎಲ್ಲಾ ಕುಟುಂಬಗಳಿಗೆ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸಹಾನುಭೂತಿ ಹಾಗೂ ಸಂತಾಪ ವ್ಯಕ್ತಪಡಿಸಿದೆ.

......ಇಪ್ಪತ್ತು ವರ್ಷಗಳ ಆಡಳಿತ

ಪುಟ 2 ರಿಂದ

ಗೌರವದಿಂದ ಕಾಣುತ್ತಿವೆ. ಜನಗಳಿಗೆ ಎಡಪಕ್ಷಗಳ ಬಗ್ಗೆ ಬಹಳ ಗೌರವವಿರುವುದರಿಂದ ಸಂಖ್ಯೆಯ ದೃಷ್ಟಿಯಿಂದ ಮಾತ್ರವಲ್ಲ, ಜನಗಳಲ್ಲಿ ವಿಶ್ವಾಸ ಮೂಡಿಸಲು ಕೂಡಾ ಈ ಪಕ್ಷಗಳಿಗೆ ಎಡಪಕ್ಷಗಳ ಬೆಂಬಲದ ಅಗತ್ಯವಿದೆ. ಇದು ಸಾಧ್ಯವಾಗಿರುವುದು ಎಡಪಂಥೀಯರು ರಾಜಕೀಯ ಆರ್ಥಿಕ, ಸಾಮಾಜಿಕ ಪ್ರಶ್ನೆಗಳ ಮೇಲೆ ಒಂದು ಸುಸಂಬದ್ಧ ನಿಲುವು ತಳೆದು ಎಡೆಬಿಡದೆ ಹೋರಾಟ ನಡೆಸಿದ್ದರಿಂದಾಗಿ. ಎಡರಂಗ ಈಗ ಅಧಿಕಾರದಲ್ಲಿ 20 ವರ್ಷಗಳನ್ನು ಪೂರ್ಣಗೊಳಿಸಿರುವುದರಿಂದಾಗಿ ಸಿಪಿಐ(ಎಂ)ನ, ಒಟ್ಟಾರೆ ಯಾಗಿ ಎಡಪಕ್ಷಗಳ ಪ್ರತಿಷ್ಠೆ ಇಡೀ ದೇಶದಲ್ಲಿ ಹೆಚ್ಚಿದೆ. ಈ ಇಪ್ಪತ್ತು ವರ್ಷಗಳಲ್ಲಿ ದೇಶದ ರಾಜಕೀಯ ರಂಗದಲ್ಲಿ ಮಹತ್ತರ ಬದಲಾವಣೆಗಳಾಗಿವೆ. ಎಡಪಕ್ಷಗಳ ದನಿ ಮತ್ತು ಅಭಿಪ್ರಾಯಗಳಿಗೆ ಈಗ ಬಹಳ ಬೆಲೆ ದೊರೆಯುತ್ತಿದೆ. ಇದು ಪಶ್ಚಿಮ ಬಂಗಾಳದ ಎಡರಂಗ ಸರಕಾರ, ತ್ರಿಪುರಾ ಎಡ ರಂಗ ಸರಕಾರ ಮತ್ತು ಕೇರಳದ ಎಡ-ಪ್ರಜಾಪ್ರಭುತ್ವವಾದಿ ಸರಕಾರ ನೀಡಿದ ಕೊಡುಗೆ. ಕಾರ್ಮಿಕ ವರ್ಗ, ರೈತಾಪಿ ಜನ, ವಿದ್ಯಾರ್ಥಿಗಳು, ಯುವಜನ ಹಾಗೂ ಮಹಿಳೆಯರು ತಮ್ಮ ಪರಿಸ್ಥಿತಿಯನ್ನು ಉತ್ತಮಗೊಳಿಸಲು ನಡೆಸಿದ ನಿರಂತರ ಹೋರಾಟಗಳಿಂದಾಗಿ ಕಾರ್ಮಿಕರ, ರೈತರ, ಇತರ ಶ್ರಮ ಜೀವಿ ಸಮೂಹಗಳ ಶಕ್ತಿಶಾಲೀ ಸಂಘಟನೆಗಳು ಮೂಡಿಬಂದದ್ದರ ಫಲಿತಾಂಶ ಇವು. ಇಂದು ಗ್ರಾಮೀಣ ಪಶ್ಚಿಮ ಬಂಗಾಳದಲ್ಲಿ ವಯಸ್ಕರಲ್ಲಿ ಪ್ರತಿ ಮೂವರಲ್ಲಿ ಒಬ್ಬರು ಕಿಸಾನ್ ಸಭಾದ ಸದಸ್ಯರಾಗಿರುವುದು ಆಕಸ್ಮಿಕವೇನಲ್ಲ ಅವರ ವರ್ಗ ಸಮರಗಳು, ಜತೆಗೆ ಸಿಪಿಐ(ಎಂ) ಮತ್ತು ಇತರ ಎಡ ಪಕ್ಷಗಳು ನಡೆಸಿದ ಸೈದ್ಧಾಂತಿಕ ಹೋರಾಟಗಳಿಂದಾಗಿ ವಿಶಾಲ ಜನ ಸಮೂಹಗಳನ್ನು ಅಣಿನೆರೆಸಲು ಸಾಧ್ಯವಾಗಿದೆ. ಸಂಸದೀಯ ಮತ್ತು ಸಂಸದೀಯೇತರ ಚಟುವಟಿಕೆಗಳನ್ನು ಒಂದುಗೂಡಿಸದೆ ವರ್ಗಶಕ್ತಿಗಳ ಬಲಾಬಲದಲ್ಲಿ ಒಂದು ತೀವ್ರ ಬದಲಾವಣೆ ತರುವುದು, ಕ್ರಾಂತಿಕಾರಿ ಆಂದೋಲನವನ್ನು ಬೆಳೆಸುವುದು ಸಾಧ್ಯವಿಲ್ಲ. ಪಶ್ಚಿಮ ಬಂಗಾಳದ ಅನುಭವ ಇದನ್ನು ಸಾಬೀತು ಮಾಡಿದೆ.

ಕೇಂದ್ರ ಸರಕಾರದ ಖೋತಾ ಪಡಿತರ ಅಂಗಡಿಗಳಲ್ಲಿ ಮೋಸ

ಪುಟ ಒಂದರಿಂದ

ಪಡಿತರ ಚೀಟಿದಾರರಿಗೆ ಅಕ್ಕಿ ಮಾತ್ರ ಪಡೆಯಬಹುದಂತೆ. ಗೋಧಿಗೆ ಪಂಗನಾಮವಂತೆ.

ಸರಕಾರದ ಅನಿಶ್ಚಿತ ಧೋರಣೆಯಿಂದಾಗಿ ಈ ತಿಂಗಳ ಪಡಿತರ ಆಹಾರ ಧಾನ್ಯ ಬಿಡುಗಡೆಯಾಗಿಲ್ಲ. ಜನರಲ್ಲಿ ಅಸಂತೋಷ ಉಕ್ಕಿ ಬರುತ್ತಿದೆ. ಈ ಅಸಂತೋಷ ಸಂಘಟಿತ ರೂಪ ತಾಳಿ ಜನಾಂದೋಲನವಾಗಿ ಬೆಳೆದು ಬಂದು ಈ ಜನ ವಿರೋಧಿ ನೀತಿಯನ್ನು ಬದಲಾಯಿಸುವಂತೆ ಜನತಾದಳ ಸರಕಾರದ ಮೇಲೆ ಒತ್ತಾಯ ತರಲಿ.

ಹೀಗೆ ಕೇಂದ್ರ ಮತ್ತು ರಾಜ್ಯ ಸರಕಾರಗಳು ಜನರ ಅವಶ್ಯಕತ ಸಮಸ್ಯೆಗಳಿಗೆ ಸ್ಪಂದಿಸದೆ ಬಡವರನ್ನು ಉದ್ಧರಿಸುವ ನೆಪದಲ್ಲಿ ಬಡವರಿಗೇನೇ ಅನ್ಯಾಯವೆಸಗುತ್ತಿರುವಾಗ ಕೇಂದ್ರದಲ್ಲಿ ಹುಟ್ಟಿಕೊಂಡು ವಿಶಾಲವಾಗಿ ಬೆಳೆದು ಬರುತ್ತಿರುವ ಭ್ರಷ್ಟಾಚಾರ ನಮ್ಮ ರಾಜ್ಯದ ಪ್ರತಿಯೊಂದು ಅಂಗಗಳಲ್ಲಿ ಕಾಣಿಸಿಕೊಳ್ಳುತ್ತಿದೆ. ಜೈಲು ಹಗರಣ, ಅಂಗನವಾಡಿ ಹಗರಣ, ಕ್ವಾರಿಹಗರಣ, ನೀರಾವರಿ ಯೋಜನೆಗಳಲ್ಲಿಯ ಹಗರಣಗಳ ಮಧ್ಯ ಪಡಿತರ ಅಕ್ಕಿಯ ಅಕ್ರಮ ಸಾಗಾಣಿಯ ಹಗರಣ ಬೆಳಕು ಕಂಡಿದೆ. ಪಡಿತರ ಅಂಗಡಿದಾರರು ಗ್ರಾಹಕರಿಗೆ ಸರಿಯಾಗಿ ಸಕ್ಕರೆ ಮತ್ತು ಇತರ ಪಡಿತರ ವಸ್ತುಗಳನ್ನು ವಿತರಣೆ ಮಾಡದೆ, ಹೆಚ್ಚಿನ ಲಾಭದಾಸೆಗಾಗಿ ಪಡಿತರ ಚೀಟಿದಾರರಿಗೆ ಮೋಸ ಮಾಡಿ ಸರಕಾರದ ಕೊಡಮಾಡಿದ ಸಕ್ಕರೆ, ಅಕ್ಕಿ, ಗೋಧಿಗಳನ್ನು ವ್ಯಾಪಾರಸ್ಥರಿಗೆ ಮಾರಾಟ ಮಾಡುತ್ತಿದ್ದಾರೆಂಬ ಆರೋಪ ಕೇಳಿ ಕೇಳಿ ಸಾಕಾಗಿದೆ. ಪಡಿತರ ಅಂಗಡಿಗಳ ಮೂಲಕ ವಿತರಣೆ ಮಾಡಲು ಕೇಂದ್ರ ಆಹಾರ ನಿಗಮ ಕಳುಹಿಸಿದ ಒಂದು ಕೋಟಿ ರೂಪಾಯಿ ಮೌಲ್ಯದ ನೂರುಟನ್ ಅಕ್ಕಿ ಯನ್ನು ಮುಕ್ತ ಪೇಟೆಗೆ ವರ್ಗಾಯಿಸಲಾಗಿದೆಯೆಂಬ ಅಂಶ ಬಯಲಾಗಿದೆ. ಕರ್ನಾಟಕ ಆಹಾರ ಮತ್ತು ನಾಗರಿಕ ಸರಬ ರಾಜು ನಿಗಮದ ಹಿರಿಯ ಅಧಿಕಾರಿಗಳು ಗುತ್ತಿಗೆದಾರರ ಜತೆ ಸೇರಿ ಈ ಕೃತ್ಯವೆಸಗಿ ದ್ದಾರಂತೆ. ಕಳೆದ ಎರಡು ವರ್ಷಗಳಿಂದಲೂ ಈ ವ್ಯವಹಾರ ನಡೆಯುತ್ತಿದ್ದು ನಿಗಮದ ಹಣಕಾಸು ಮ್ಯಾನೇಜರ್. ಕಳೆದ ತಿಂಗಳಲ್ಲೇ ಇದನ್ನು ಬಯಲು ಗೊಳಿಸಿದ್ದರೂ ಕೂಡ ಸರಕಾರ ಇದನ್ನು ಮುಚ್ಚಿಡುವ ಪ್ರಯತ್ನ ನಡೆಸಿರುವುದು ಖಂಡನೀಯ.

ಆಹಾರ ನಿಗಮದಿಂದಲೂ ಮೋಸ, ಪಡಿತರ ಅಂಗಡಿಗಳಲ್ಲೂ ಮೋಸ, ಇದಕ್ಕೆಲ್ಲ ಕಿರೀಟ ಪ್ರಾಯವಾಗಿ ಕೇಂದ್ರ ಸರಕಾರ ರಾಜ್ಯಕ್ಕೆ ಕೊಡಮಾಡುವುದರಲ್ಲಿಯೂ ಖೋತಾ, ಜನರಿಗೆ ಹಂಚುವುದರಲ್ಲಿಯೂ ಖೋತಾ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಈ ವ್ಯವಸ್ಥೆಯನ್ನು, ಜನರಿಗಾಗು ತ್ತಿರುವ ಅನ್ಯಾಯವನ್ನು ಖಂಡಿಸುತ್ತದೆ.

“ಹಸ್ತಾಂತರವೆಂದರೆ ನಮ್ಮ ಮುಟ್ಟಿಗೆ ಬಿಟ್ಟಿದ್ದು ಅಸಹಜ ಅಗಲಿಕೆಯ ನಂತರದ ರಾಜಿ. ಒಂದುಗೂಡಿಕೆ. ನಾವೀಗ ನಮ್ಮದೇ ಮನೆಯ ಒಡೆಯರು”

– ತುಂಗ್ ಚೀ-ಹ್ವಾ

ಹಾಂಗ್‌ಕಾಂಗ್ ಮುಖ್ಯನಿರ್ವಹಣಾಧಿಕಾರಿಯಾಗಿ ಚುನಾಯಿತರಾಗಿರುವವರು.



ಹಾಂಗ್‌ಕಾಂಗ್: ಮರಳಿ ತಾಯ ಮಡಿಲಿಗೆ

ಪುಟ 5 ರಿಂದ

ಹಾಗೆಯೇ ಮುಂದುವರಿಯುತ್ತದೆ. ಹಾಂಗ್‌ಕಾಂಗ್‌ನ ವಿದೇಶಿ ವಿನಿಮಯ ನೀತಿ ಹಾಗೂ ವಿದೇಶಿ ವಿನಿಮಯ ಧನರಾಶಿಯಲ್ಲಿ ಚೀನಾ ಮಧ್ಯ ಪ್ರವೇಶ ಮಾಡುವುದಿಲ್ಲ. ಚೀನಾ ಹಾಗೂ ಹಾಂಗ್‌ಕಾಂಗ್‌ನ ನಡುವಿನ ವಾಣಿಜ್ಯವನ್ನು ವಿದೇಶಿ ವಾಣಿಜ್ಯವೆಂದೇ ಪರಿಗಣಿಸಲಾಗುವುದು. ಹಾಂಗ್‌ಕಾಂಗ್‌ನಲ್ಲಿ ಯಾವುದೇ ರೀತಿಯ ಕೇಂದ್ರೀಯ ತೆರಿಗೆಗಳು ಇರುವುದಿಲ್ಲ. ಚೀನಾದ ಕೇಂದ್ರ ಸರಕಾರ ಯಾವುದೇ ರೀತಿಯ ಹಣವನ್ನು ಹಾಂಗ್‌ಕಾಂಗ್‌ನಿಂದ ವಸೂಲಿ ಮಾಡುವುದಿಲ್ಲ. ಹಾಂಗ್‌ಕಾಂಗ್ ನಲ್ಲಿ ಚೀನಾದ ಕೇಂದ್ರ ಸರಕಾರ ಸ್ಥಾಪಿಸುವ ವಿದೇಶಿ ವಿಭಾಗದ ಕಚೇರಿ ಹಾಗೂ ಸೈನ್ಯದ ತುಕಡಿಗಳ ಖರ್ಚನ್ನು ಕೇಂದ್ರ ಸರಕಾರ ನೇರವಾಗಿ ನಿರ್ವಹಿಸುತ್ತದೆ. ಚೀನಾದಲ್ಲಿ ಹಾಂಗ್‌ಕಾಂಗ್ ಡಾಲರನ್ನು ವಿದೇಶಿ ನಾಣ್ಯವಾಗಿ ಪರಿಗಣಿಸಲಾಗುವುದು. ಹಾಂಗ್ ಕಾಂಗ್‌ಗೆ ಪ್ರತ್ಯೇಕ ಪಾಸ್‌ಪೋರ್ಟ್‌ನ್ನು ವಿದೇಶಿ ಪ್ರಯಾಣಕ್ಕೆ ಬಳಸಬಹುದು. ಈಗ ಹಾಂಗ್‌ಕಾಂಗ್‌ನಲ್ಲಿ ನೆಲೆಸಿರುವ ವಿದೇಶಿ ಪಾಸ್‌ಪೋರ್ಟ್ ಹೊಂದಿರುವವರು, ಅದನ್ನು ಮುಂದೆಯೂ ಬಳಸಬಹುದು.

ಒಟ್ಟಾರೆಯಾಗಿ ಹೇಳುವುದಾದರೆ, ಚೀನಾದ ವಿದೇಶ ವ್ಯವಹಾರಗಳ ವಿಭಾಗ, ಜನತಾ ವಿಮೋಚನಾ ಸೈನ್ಯದ ತುಕಡಿಗಳನ್ನು ಹಾಂಗ್‌ಕಾಂಗ್‌ನಲ್ಲಿ ನೆಲೆಸುವುದು ಬಿಟ್ಟರೆ ಬೇರೆ ಯಾವುದೇ ಬದಲಾವಣೆಗಳು ಇರುವುದಿಲ್ಲ. ಬ್ರಿಟಿಷ್ ಸರಕಾರದ ಬದಲು ಹಾಂಗ್ ಕಾಂಗ್‌ನ ಜನರೇ ಆ ಪ್ರದೇಶದ ವ್ಯವಹಾರಗಳನ್ನು ತಾವೇ ನೋಡಿಕೊಳ್ಳುವುದೇ ದೊಡ್ಡ ಬದಲಾವಣೆ. ಸೈನ್ಯವನ್ನು ವಿಶಿಷ್ಟ ಪರಿಸ್ಥಿತಿಗಳಲ್ಲಿ ಚೀನಾದ ಮುಖ್ಯಸ್ಥರ ಕೋರಿಕೆ ಮೇಲೆ ಮಾತ್ರ ಬಳಸಲಾಗುತ್ತದೆ. ಮಧ್ಯಂತರ ಅವಧಿಯಲ್ಲಿ ಆಳಲಿರುವ ವಿಧಾನ ಸಭೆಯನ್ನು ಈಗಾಗಲೇ ರಚಿಸಲಾಗಿದೆ.

ಹಾಂಗ್‌ಕಾಂಗ್ ಸಮಸ್ಯೆಗೆ ಈ ರೀತಿ ಪರಿಹಾರ ಸರಿಯೇ?


ಹಾಂಗ್‌ಕಾಂಗ್ ಸಮಾಜವಾದಿ ವ್ಯವಸ್ಥೆ ಅಂಗೀಕರಿಸಿ ಚೀನಾದ ಭಾಗವಾಗುವುದು ಸಾಧ್ಯವಿರಲಿಲ್ಲವೇ - ಬೇರೆ ಯಾವುದೇ ಪ್ರಾಂತ್ಯದಂತೆ?

'ಒಂದು ದೇಶ,ಎರಡು ವ್ಯವಸ್ಥೆ' ಎಂಬ ನೀತಿ ಚೀನಾದ ಸಮಾಜವಾದಿ ಆಧುನೀಕರಣ ಮುನ್ನಡೆಯ ವಿಶಿಷ್ಟ ಪರಿಸ್ಥಿತಿ ಹಾಗೂ ಹಾಂಗ್‌ಕಾಂಗ್‌ನ ವಿಶಿಷ್ಟ ಹಿನ್ನೆಲೆ ಈ ಎರಡನ್ನೂ ಚೀನಾದ ರಾಷ್ಟ್ರೀಯ ಹಿತಾಸಕ್ತಿಯ ದೃಷ್ಟಿಯಿಂದ ಕ್ರೋಢೀಕರಿಸುವ ನೀತಿ ಎನ್ನುತ್ತದೆ ಚೀಣಿ ಕಮ್ಯುನಿಸ್ಟ್ ಪಕ್ಷ. ಹಾಂಗ್‌ಕಾಂಗ್ ಸಾಂಸ್ಕೃತಿಕವಾಗಿ, ಜನಾಂಗೀಯವಾಗಿ ಚೀನಾದ ಭಾಗವಾಗಿದ್ದ ಮಾತ್ರಕ್ಕೆ ರಾಜಕೀಯ-ಆರ್ಥಿಕವ್ಯವಸ್ಥೆಯನ್ನು ಮೇಲಿಂದ ಹೊರಿಸಲು ಬರುವುದಿಲ್ಲ. ಇಂತಹ ವ್ಯವಸ್ಥೆಯನ್ನು ಹಾಂಗ್‌ಕಾಂಗ್‌ನ ಜನತೆಯೇ ರೂಪಿಸಿಕೊಳ್ಳಬೇಕು. ಹಾಂಗ್‌ಕಾಂಗ್‌ನಲ್ಲಿ ಸಮಾಜ ವಾದಿ ವ್ಯವಸ್ಥೆಯನ್ನು ಅಲ್ಲಿನ ಜನತೆ ತಮ್ಮ ಹೋರಾಟ, ಅನುಭವದ ಮೂಲಕ ತರಬೇಕು.ಇದಲ್ಲದೆ ಹಾಂಗ್‌ಕಾಂಗ್ ಅಂತರ್ರಾಷ್ಟ್ರೀಯ ವಾಣಿಜ್ಯ, ಆರ್ಥಿಕ ಕೇಂದ್ರವಾಗಿರುವುದು ಇಡೀ ಜಗತ್ತಿಗೆ ಹೆಬ್ಬಾಗಿಲಿನಂತಿರುವುದು, ಹಲವು ದಶಕಗಳಕಾಲ ಜಗತ್ತಿನ ವ್ಯವಹಾರಗಳಲ್ಲಿ ಸರಿಯಾದ ಪಾತ್ರ ನಿರ್ವಹಣೆಯಿಂದ ವಂಚಿತವಾಗಿದ್ದ ಚೀನಾಕ್ಕೆ ಹೊಸ ಅವಕಾಶಗಳನ್ನು ಒದಗಿಸುತ್ತದೆ. 1949 ರಲ್ಲಿ ಮಾವೋ ನಾಯಕತ್ವದಲ್ಲಿ ಕಮ್ಯುನಿಸ್ಟ್ ಪಕ್ಷ ಒಂದು ಫೋನ್ ಮಾಡಿ ಹಾಂಗ್‌ಕಾಂಗ್‌ನ್ನು ವಶಪಡಿಸಿಕೊಳ್ಳಬಹುದಾಗಿತ್ತು ಎಂದು ಹೇಳುವವರಿದ್ದಾರೆ. ಎಷ್ಟೇ ಅಪಮಾನವಾಗಿದ್ದರೂ ಅಂತರ್ರಾಷ್ಟ್ರೀಯ ಒಪ್ಪಂದವನ್ನು ಮುರಿಯದೆ, ಶಾಂತಿಯುತವಾಗಿ ಮಾತುಕತೆಗಳ ಮೂಲಕ ಪರಿಹರಿಸುವ ಚೀಣಿ ನೀತಿ ಹಾಂಗ್‌ಕಾಂಗ್ ಹಸ್ತಾಂತರ ಈ ರೀತಿ ವಿಳಂಬವಾಗಲು ಕಾರಣ. ರಾಜಕೀಯವಾಗಿ ಹೇಳುವುದಾದರೆ 'ರಾಷ್ಟ್ರೀಯ ಬೂರ್ಜ್ವಾ' ಜತೆ ವರ್ಗ-ಮೈತ್ರಿಯ ನೀತಿಯನ್ನೇ ಹಾಂಗ್‌ಕಾಂಗ್ ಹಾಗೂ ಮಕಾವೋ ನಲ್ಲಿ ಪಾಲಿಸಲಾಗುತ್ತದೆ ಎಂದು 1957ರಲ್ಲೇ ಮಾವೋ ಹೇಳಿದ್ದರು. ಬ್ರಿಟಿಷ್ ಹಠಮಾರಿತನದಿಂದ ವಿಳಂಬವಾದರೂ ಹಾಂಗ್ ಕಾಂಗ್‌ನ ಹಸ್ತಾಂತರ ಚೀನಾವನ್ನು ಇನ್ನಷ್ಟು ಬಲಗೊಳಿಸುತ್ತದೆ-ಚೀನಾದ ಬುನಾದಿಯಾದ ಸಮಾಜವಾದಿ ವ್ಯವಸ್ಥೆಗೆ ಅಪಾಯ ಒಡ್ಡದೆ.

'ಒಂದುದೇಶ, ಎರಡು ವ್ಯವಸ್ಥೆ' ಈ ನೀತಿಯ ಸಫಲ ಜಾರಿ ಪೋರ್ಚುಗೀಸ್ ವಸಾಹತುವಾಗಿದ್ದ ಮಕಾವೋ(ಹಾಂಗ್ ಕಾಂಗ್‌ನ ಪಕ್ಕದ ದ್ವೀಪಸಮೂಹ)ವನ್ನು 1999ರಲ್ಲೂ, ಹಾಗೂ ಕಾಲಕ್ರಮೇಣ ತೈವಾನನ್ನೂ ಚೀನಿ ಸಾರ್ವಭೌಮತೆಗೆ ಹಸ್ತಾಂತರಿಸುವಲ್ಲಿ ದೊಡ್ಡ ಪಾತ್ರ ವಹಿಸುತ್ತದೆ ಎಂದೂ ನಿರೀಕ್ಷಿಸಲಾಗುತ್ತಿದೆ.

'ಒಂದು ದೇಶ, ಎರಡು ವ್ಯವಸ್ಥೆ' ಚೀನಿ ಕಮ್ಯುನಿಸ್ಟ್ ಪಕ್ಷದ ವಿಶಿಷ್ಟ ನೀತಿಯೇನಲ್ಲ. ಇಂತಹುದೇ ಸಮಸ್ಯೆಯ ಪರಿಹಾರಕ್ಕೆ ಎರಡು ಜರ್ಮನಿಗಳ, ಎರಡು ಕೊರಿಯಾಗಳ ರಾಷ್ಟ್ರೀಯ ಐಕ್ಯತೆಸಾಧಿಸಲು ಈ ನೀತಿಯನ್ನು ಅಲ್ಲಿನ ಕಮ್ಯುನಿಸ್ಟ್ ಪಕ್ಷಗಳು ಅಂಗೀಕರಿಸಿದ್ದವು. ಇದು ದೇಶಗಳನ್ನು ಒಡೆದು ಆಳುವ ಸಾಮ್ರಾಜ್ಯಶಾಹಿ ಕುತಂತ್ರವನ್ನು ಬಯಲಿಗೆಳೆದು, ಜನಬೆಂಬಲದಿಂದ ಶಾಂತಿಯುತವಾಗಿ ಅದಕ್ಕೆ ಪ್ರತಿಯಾದ ಪರಿಹಾರ ಹುಡುಕುವ ನೀತಿ. ಸಮಾಜವಾದದ ದುರ್ಬಲತೆಯ ಸೂಚಕವಲ್ಲ. ಉತ್ತರಕೋರಿಯಾ ಈ ನೀತಿಯನ್ನು ಜಾರಿ ಮಾಡಲು ಪ್ರಯತ್ನಿಸುತ್ತಿದೆ.

ಚೀನಾದಲ್ಲಿ ಹಾಂಗ್‌ಕಾಂಗ್‌ನ ಹಸ್ತಾಂತರ ಭಾರಿ ಹರ್ಷ, ಉಲ್ಲಾಸ, ಹೊಸ ಉತ್ಸಾಹ, ಹೊಸ ಆತ್ಮಸ್ಥೈರ್ಯ ತುಂಬಿದೆ. ಹಾಂಗ್‌ಕಾಂಗ್‌ನ ಹಸ್ತಾಂತರವನ್ನು ಚೀನಾದ ತುಂಬಾ ಭಾರಿ ಉತ್ಸಾಹದಿಂದ ಆಚರಿಸಲಾಗುತ್ತಿದೆ. ನೂರೈವತ್ತು ವರ್ಷಗಳ 'ರಾಷ್ಟ್ರೀಯ ಅವಹೇಳನ'ವನ್ನು ಸರಿಪಡಿಸುವ ಈ ಘಟನೆ ಚೀನಾದಲ್ಲಿ ಮಾತ್ರವಲ್ಲ, ವಿಶ್ವದ ಬೆಳವಣಿಗೆಯಲ್ಲೇ ದೊಡ್ಡ ಮೈಲಿಗಲ್ಲಾಗಲಿದೆ.



"ಹಾಂಗ್‌ಕಾಂಗ್ ವಿಶೇಷ ಆಡಳಿತ ಪ್ರದೇಶ" ದ ಪ್ರಾದೇಶಿಕ ಬಾವುಟ. ಕೆಂಬಣ್ಣದ ಹಿನ್ನೆಲೆಯಲ್ಲಿ ಈ ಪ್ರದೇಶ ಚಿಹ್ನೆಯನ್ನು ಹೊಂದಿದೆ.



ಅಫೀಮು, ಗುಂಡುಗಳ ದಾಳಿಯಿಂದ ಹೊರಿಸಿದ ನೂರೈವತ್ತು ವರ್ಷಗಳ ದಾಸ್ಯದ ಕೊಂಡಿಗಳು, ಅವು ಕಳಚಿದ ರೀತಿ



***1839-1841* ಮೊದಲ ಅಫೀಮು ಯುದ್ಧ**

ಕ್ವಿಂಗ್ ವಂಶದ ರಾಜನ ಆಸ್ಥಾನದ ಅಧಿಕಾರಿ ಲಿನ್-ತ್ಸೆ-ಹ್ಸು ಬ್ರಿಟಿಷರು ಅಫೀಮು ವ್ಯಾಪಾರದಲ್ಲಿ ತೊಡಗಿ ದೇಶವನ್ನು ಅಫೀಮು ವ್ಯಸನಕ್ಕೆ ತಳ್ಳಿ ಹಾಳುಗೆಡವುದನ್ನು ವಿರೋಧಿಸಿದ. ಹಲವು ಬ್ರಿಟಿಷ್ ಅಫೀಮು ಹಡಗುಗಳನ್ನು ವಶಪಡಿಸಿ ತಡೆಯಲು ಪ್ರಯತ್ನಿಸಿದ. ಇದರಿಂದ ಆರಂಭವಾದ ಮೊದಲ ಅಫೀಮು ಯುದ್ಧ *1841* ಜನವರಿ *26* ರಂದು ಕೊನೆಗೊಂಡು, ಹಾಂಗ್‌ಕಾಂಗ್ ಬ್ರಿಟಿಷ್ ವಶ

***1842:* ನಾನ್‌ಕಿಂಗ್ ಒಪ್ಪಂದ**

ಹಾಂಗ್‌ಕಾಂಗ್ ದ್ವೀಪವನ್ನು ಬ್ರಿಟಿಷರಿಗೆ ಒಪ್ಪಿಸುವ ಅವಮಾನಕಾರಿ ಒಪ್ಪಂದಕ್ಕೆ ಸಹಿ. ಸುಂಕವಿಲ್ಲದ ಎಲ್ಲಾ ದೇಶಗಳ ನಾವಿಕರಿಗೆ ತೆರೆದಿರುವ ಮುಕ್ತ ಬಂದರಾಗಿ ಹಾಂಗ್‌ಕಾಂಗ್ ಬೆಳವಣಿಗೆ.

***1856-1858:* ಎರಡನೇ ಅಫೀಮು ಯುದ್ಧ**

ಕಡಲುಗಳ್ಳರ ಹುಡುಕಾಟದಲ್ಲಿ ಬ್ರಿಟಿಷ್ ಹಡಗನ್ನು ಶೋಧಿಸಿದಾಗ ಆರಂಭವಾದ ಎರಡನೇ ಅಫೀಮು ಯುದ್ಧದಲ್ಲಿ ಬ್ರಿಟಿಷರಿಗೆ ವಿಜಯ

***1861:* ಕೌಲೂನು ಪ್ರದೇಶ ಬ್ರಿಟಿಷರಿಗೆ**

ಯುದ್ಧದ ಪರಿಣಾಮವಾಗಿ ಕೌಲೂನು ಎಂಬ ಚೀನಾದ ಪರ್ಯಾಯ ದ್ವೀಪವನ್ನು ಬ್ರಿಟಿಷರಿಗೆ ಕೊಡುವುದಕ್ಕೆ ಚೀನಾ ಸರ್ಕಾರದ ಒಪ್ಪಿಗೆ.

1894-95: ಜಪಾನ್, ಫ್ರಾನ್ಸ್ ಹಾಗೂ ಇತರ ಯುರೋಪಿಯನ್ ಶಕ್ತಿಗಳಲ್ಲಿ ಚೀನಾದ ಕಡಲ ತೀರದ ನಗರಗಳನ್ನು ವಶಪಡಿಸಿಕೊಳ್ಳಲು ಪೈಪೋಟಿ - ಹಾಂಗ್‌ಕಾಂಗ್‌ಗೆ ನಿರಾಶ್ರಿತರ ಮಹಾಪೂರ. ಯುದ್ಧದಲ್ಲಿ ಚೀನಾದ ಪರಾಭವ.

***1898 :* ಹಾಂಗ್‌ಕಾಂಗ್ ಹಾಗೂ ಇತರ ಪ್ರದೇಶಗಳು 99 ವರ್ಷಗಳ ಭೋಗ್ಯಕ್ಕೆ**

ಹಾಂಗ್‌ಕಾಂಗ್, ಕೌಲೂನು ಪರ್ಯಾಯ ದ್ವೀಪ ಹಾಗೂ ಹೊಸ ಪ್ರದೇಶಗಳು ಸೇರಿದ ಇಡೀ ಪ್ರದೇಶವನ್ನು ಬ್ರಿಟಿಷರಿಗೆ ಚಕ್ಕಾಸು ಕೊಡದೆ *99* ವರ್ಷಗಳ ಭೋಗ್ಯಕ್ಕೆ ಮಂಚೂ ಸರ್ಕಾರ ಒಪ್ಪಿಸಿತು.

***1911-1912 :* ಸನ್-ಯಾಟ್-ಸೆನ್‌ರ ರಾಷ್ಟ್ರೀಯ ಕ್ರಾಂತಿ**

ಚಿಂಗ್ ವಂಶದ ಆಡಳಿತವನ್ನು ಕಿತ್ತೊಗೆದ ಸನ್-ಯಾಟ್-ಸೆನ್‌ರ ನಾಯಕತ್ವದಲ್ಲಿ ನಡೆದ ರಾಷ್ಟ್ರೀಯ ಪ್ರಜಾಪ್ರಭುತ್ವ ಕ್ರಾಂತಿಯಿಂದ ಹಾಂಗ್‌ಕಾಂಗ್‌ನಲ್ಲೂ ರಾಷ್ಟ್ರೀಯತೆಯ ವಿದ್ಯುತ್ ಸಂಚಾರ. ಹಾಂಗ್‌ಕಾಂಗ್‌ನ ಬ್ರಿಟಿಷ್ ಗವರ್ನರ್‌ರ ಕೊಲೆ ಯತ್ನ

***1919 :* ಪ್ರಥಮ ಮಹಾಯುದ್ಧ ನಂತರದ ಪ್ಯಾರಿಸ್ ಶಾಂತಿ ಸಮ್ಮೇಳನ**

ಚೀನಾದ ಹೊಸ ರಾಷ್ಟ್ರೀಯ ಸರ್ಕಾರದಿಂದ ಹಾಂಗ್‌ಕಾಂಗ್ ಸೇರಿದಂತೆ ಚೀನಾದ ಭ್ರಷ್ಟ, ಬಲಹೀನ ರಾಜವಂಶಗಳು ವಿದೇಶೀಯರಿಗೆ ಕೊಟ್ಟಿರುವ ಸವಲತ್ತುಗಳನ್ನೆಲ್ಲಾ ವಾಪಸು ಪಡೆಯಲು ತೀವ್ರ ಪ್ರಯತ್ನ ಯುದ್ಧ ಗೆದ್ದ ಸಾಮ್ರಾಜ್ಯಶಾಹಿ ದೇಶಗಳಿಂದ ಈ ಪ್ರಯತ್ನದ ಮೇಲೆ ತಣ್ಣೀರು.

***1921:* ವಾಷಿಂಗ್‌ಟನ್ ಸಮ್ಮೇಳನ**

ಪುನಃ ಚೀನಾದ ಮೇಲೆ ಹೊರಿಸಿದ ಅನ್ಯಾಯಯುತ ಅಸಮಾನ ಒಪ್ಪಂದದ ಮೂಲಕ ವಿದೇಶೀಯರಿಗೆ ಕೊಟ್ಟಿದ್ದ ಸವಲತ್ತುಗಳ ವಾಪಸಾತಿಗೆ ಚೀನೀ ಸರ್ಕಾರ ಪ್ರಯತ್ನ ಪುನಃ ವಿಫಲ.

***1924:* ಡಾ॥ ಸನ್-ಯಾಟ್-ಸೆನ್ ಹಾಗೂ ಚೀನೀ ಕಮ್ಯುನಿಸ್ಟ್ ಪಕ್ಷದ ಸಂಯುಕ್ತರಂಗ**


ವಿದೇಶಿಯರಿಗೆ ಕೊಟ್ಟ ಸವಲತ್ತು, ಅವಮಾನಕಾರೀ ಒಪ್ಪಂದದಿಂದ ಚೀನಾ ಹೊರಗೆ ಬರುವುದು ಸಂಯುಕ್ತರಂಗದ ವಿದೇಶ ನೀತಿಯಾಗಿ ನಿರ್ಧಾರ

***1932:* ಚೀನಾದಲ್ಲಿ ಚಿಯಾಂಗ್-ಕೈ-ಶೇಕ್‌ರ ಕ್ಯೂಮಿಂಟಾಂಗ್ ಸರ್ಕಾರ**

ಕ್ಯೂಮಿಂಟಾಂಗ್ ಸರ್ಕಾರದಿಂದಲೂ ಅದೇ ನೀತಿಯ ಮುಂದುವರಿಕೆ. ಆದರೆ ಬ್ರಿಟಿಷರು ಹಾಗೂ ಅಮೇರಿಕನ್ನರ ಬೆಂಬಲ ಪಡೆಯುತ್ತಿದ್ದರಿಂದ ಏನೂ ಮಾಡಲೂ ಸಾಧ್ಯವಾಗದೆ ಸೋತ ಪರಿಸ್ಥಿತಿ.

***1941-1945:* ಪೂರ್ವದಲ್ಲಿ ಜಪಾನ್‌ನಿಂದ ಎರಡನೆಯ ಮಹಾಯುದ್ಧ ಆರಂಭ.**

ಚೀನಾದ ಹಲವು ಪಟ್ಟಣಗಳ ನಂತರ *1941*ರ



ಕ್ರಿಸ್‌ಮಸ್ ದಿನ ಹಾಂಗ್‌ಕಾಂಗ್ ಜಪಾನ್ ವಶ. ಚೀನೀಯರನ್ನು ಹಾಂಗ್‌ಕಾಂಗ್‌ನಿಂದ ದೊಡ್ಡ ಪ್ರಮಾಣದಲ್ಲಿ ಗಡೀಪಾರು. ಹಾಂಗ್‌ಕಾಂಗ್‌ನ ಜನಸಂಖ್ಯೆ *15* ಲಕ್ಷದಿಂದ *5* ಲಕ್ಷಕ್ಕೆ ಇಳಿಕೆ. ಚೀನಾವನ್ನು ಜಪಾನ್ ವಿರುದ್ಧ ಯುದ್ಧದಲ್ಲಿ ಸಮಾನ ಭಾಗಿಯಾಗಿಸಲು ಬ್ರಿಟಿಷರ ಪ್ರಯತ್ನ. ಅದಕ್ಕಾಗಿ ಚೀನಾ-ಬ್ರಿಟಿಷ್ ಒಪ್ಪಂದಕ್ಕೆ *1941* ರಿಂದ *1943* ರವರೆಗೆ ಪ್ರಯತ್ನದ ನಂತರ ಒಪ್ಪಂದ. ಒಪ್ಪಂದದಲ್ಲಿ ಮುಖ್ಯ ವಿವಾದಾಸ್ಪದ ಅಂಶ ಹಾಂಗ್‌ಕಾಂಗ್ ಸೇರಿದಂತೆ ಬ್ರಿಟಿಷ್‌ನ ವಿಶೇಷ ಸವಲತ್ತುಗಳನ್ನು ಹಿಂತಿರುಗಿಸುವುದು. ಕೊನೆಗೂ ಯುದ್ಧದ ನಂತರ ಆ ಬಗ್ಗೆ ಮಾತುಕತೆಯ ಭರವಸೆಯ ಮೇಲೆ ಚಿಯಾಂಗ್-ಕೈ-ಶೇಕ್ ಒಪ್ಪಂದಕ್ಕೆ ವಶ. ಜಪಾನಿಯರ ಸೋಲಿನ ನಂತರ ಹಾಂಗ್‌ಕಾಂಗ್ ಮರಳಿ ಪಡೆಯುವುದರಲ್ಲಿ ಚಿಯಾಂಗ್ ಅಸಡ್ಡೆ.

***1946 - 1949 :* ಚಿಯಾಂಗ್-ಕೈ-ಶೇಕ್ ಸರ್ಕಾರದ ವಿರುದ್ಧ ಕಮ್ಯುನಿಸ್ಟರ ಗೆರಿಲ್ಲಾ ಹೋರಾಟ.**

***1949* ಅಕ್ಟೋಬರ್ *1* :**

ಚೀನಾ ಕಮ್ಯುನಿಸ್ಟ್ ಪಕ್ಷದ ನಾಯಕತ್ವದಲ್ಲಿ ಚೀನಾ ಜನತಾ ಪ್ರಜಾಪ್ರಭುತ್ವ ಕ್ರಾಂತಿ. **ಹಾಂಗ್‌ಕಾಂಗನ್ನು ಬಲ ಪ್ರಯೋಗದಿಂದ ವಿಮೋಚನೆ ಮಾಡದಿರಲು ನಿರ್ಧಾರ.** ಬ್ರಿಟಿಷ್ ಸರ್ಕಾರದಿಂದ ಚೀನಾಕ್ಕೆ ಮಾನ್ಯತೆ. ಹಾಂಗ್‌ಕಾಂಗ್ ಬಗ್ಗೆ ಮಾತುಕತೆ ಮುಂದೂಡಿಕೆ

***1951:* ಚೀನಾದ ವಿರುದ್ಧ ಅಮೆರಿಕನ್ ನಾಯಕತ್ವದಲ್ಲಿ [illegible]**

ಚೀನಾಕ್ಕೆ ಹೆಬ್ಬಾಗಿಲಾಗಿದ್ದ ಹಾಂಗ್ ಕಾಂಗ್‌ಗೆ ತೀವ್ರ ಧಕ್ಕೆ. ಇದಕ್ಕೆ ಪ್ರತಿಕ್ರಿಯೆಯಾಗಿ ಸ್ಥಳೀಯ ಕೈಗಾರಿಕಾ ಉತ್ಪಾದನೆ ಒತ್ತು

***1957:* ಹಾಂಗ್ ಕಾಂಗ್ ಹಸ್ತಾಂತರಕ್ಕೆ ಒತ್ತಾಯ ಮಾಡದಿರಲು ಮಾವೋ ನಿರ್ಧಾರ,**

ಹಾಂಗ್‌ಕಾಂಗ್ ಚೀನಾದ ಅಂಗ. ಹಾಂಗ್‌ಕಾಂಗ್ ಬಗೆಗಿನ ಮೂರು ಅಸಮಾನ ಒಪ್ಪಂದಗಳನ್ನು ಚೀನಾ ಒಪ್ಪುವುದಿಲ್ಲ. ಚರಿತ್ರೆಯಲ್ಲಿ ಉಳಿದು ಹೋದ ಈ ಸಮಸ್ಯೆಯನ್ನು ಸರಿಯಾದ ಸಮಯದಲ್ಲಿ ಬಗೆಹರಿಸಲು ಸದ್ಯಕ್ಕೆ ಹಾಂಗ್‌ಕಾಂಗ್ ಹಸ್ತಾಂತರಕ್ಕೆ ಒತ್ತಾಯ ಮಾಡದಿರಲು ಚೀನಾ ಕಮ್ಯುನಿಸ್ಟ್ ಪಕ್ಷದ ನಿರ್ಧಾರ

***1966 :* ನೌಕಾ ಸಂಚಾರದ ಮೇಲೆ ತೆರಿಗೆ ಏರಿಸಲು ನಿರ್ಧಾರದ ವಿರುದ್ಧ ಭಾರಿ ದಂಗೆ.**

***1967:* ಸಾಂಸ್ಕೃತಿಕ ಕ್ರಾಂತಿಯ ಬಿಸಿ ಹಾಂಗ್‌ಕಾಂಗ್‌ಗೆ**

ಸಾಂಸ್ಕೃತಿಕ ಕ್ರಾಂತಿಯಿಂದ ಪ್ರೇರಿತವಾದ ಯುವ ಜನಾಂಗದಿಂದ ಬ್ರಿಟಿಷ್ ವಿರೋಧಿ ಪ್ರತಿಭಟನೆ. ಗೋಲಿಬಾರಿನಲ್ಲಿ *51* ಜನ ಸಾವು. ನೂರಾರು ಜನಗಳಿಗೆ ಗಾಯಗಳು.

1978 - 'ಒಂದು ದೇಶ ಎರಡು ವ್ಯವಸ್ಥೆಗಳು' ನೀತಿಯ ಆಧಾರದ ಮೇಲೆ ಹಾಂಗ್‌ಕಾಂಗ್, ತೈವಾನ್, ಮಕಾವೋ ಸಮಸ್ಯೆಯನ್ನು ಶಾಂತಿಯುತವಾಗಿ ಬಗೆಹರಿಸಲು ಚೀನಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ನಿರ್ಧಾರ.

***1982 :* ಡೆಂಗ್ ಕ್ಸಿಯಾವೋ-ಪಿಂಗ್ ಮತ್ತು ಥ್ಯಾಚರ್ ಭೇಟಿ** ಬೀಜಿಂಗ್‌ನಲ್ಲಿ ಹಾಗೂ ಹಾಂಗ್‌ಕಾಂಗ್ ಬಗ್ಗೆ ಚೀನಾ ನೀತಿಯ ಕುರಿತು ಚರ್ಚೆ.

1983-84: *1997* ರ ಹೊತ್ತಿಗೆ ಹಾಂಗ್‌ಕಾಂಗ್‌ನ ಸಾರ್ವಭೌಮತೆಯನ್ನು ಚೀನಾಕ್ಕೆ ಹಸ್ತಾಂತರಿಸುವ, ಹಾಂಗ್‌ಕಾಂಗ್‌ನ ಸಮಾಜ ವ್ಯವಸ್ಥೆಯ ಭವಿಷ್ಯದ ಬಗ್ಗೆ *22* ಸುತ್ತುಗಳ ಮಾತುಕತೆ

ಡಿಸೆಂಬರ್ *1984* :ಜುಲೈ *1, 1997* ರಂದು ಹಾಂಗ್‌ಕಾಂಗ್ ಹಸ್ತಾಂತರದ ಬಗ್ಗೆ ಚೀಣಿ ಮತ್ತು ಬ್ರಿಟಿಷ್ ಸರಕಾರಗಳ ಜಂಟಿ ಘೋಷಣೆ



ಏಪ್ರಿಲ್ *4, 1990*: ಚೀನಾದ ಏಳನೇ ರಾಷ್ಟ್ರೀಯ ಜನತಾ ಕಾಂಗ್ರೆಸ್‌ನ ಮೂರನೇ ಅಧಿವೇಶನದಲ್ಲಿ 'ಹಾಂಗ್‌ಕಾಂಗ್ ವಿಶೇಷ ಆಡಳಿತ ಪ್ರದೇಶ'ದ ಮೂಲಭೂತ ಕಾನೂನಿನ ಅಂಗೀಕಾರ

ಡಿಸೆಂಬರ್ *1996* - ಹಾಂಗ್‌ಕಾಂಗ್ ವಿಶೇಷ ಆಡಳಿತ ಪ್ರದೇಶದ ವಿಧಾನ ಸಭೆ ಹಾಗೂ 400 ಜನರ ಕಮಿಟಿ ರಚನೆ ತುಂಗ್ ಚೀ-ಹ್ವಾ ಹಾಂಗ್‌ಕಾಂಗ್‌ನ ಮುಖ್ಯ ನಿರ್ವಹಣಾಧಿಕಾರಿಯಾಗಿ ಸೆಲೆಕ್ಟ್ ಕಮಿಟಿಯ ಆಯ್ಕೆ

ಜುಲೈ *1 1997*: ಹಾಂಗ್‌ಕಾಂಗ್ ಸಾರ್ವಭೌಮತ್ವ ಚೀನಾ ಜನತಾ ಗಣರಾಜ್ಯಕ್ಕೆ ಹಸ್ತಾಂತರ

ರಾಷ್ಟ್ರಪತಿ ಚುನಾವಣೆಯ ಹಿಂದಿನ ರಾಜಕೀಯ

- ಇ.ಎಂ.ಎಸ್

ಭಾರತ ಗಣರಾಜ್ಯದ ರಾಷ್ಟ್ರಪತಿ ಸ್ಥಾನಕ್ಕೆ ಚುನಾವಣೆ ನಡೆಯುತ್ತಿದೆ. ಸಂಯುಕ್ತ ರಂಗ ಮತ್ತು ಕಾಂಗ್ರೆಸ್‌ನ ಅಭ್ಯರ್ಥಿಯಾಗಿ ಕೆ.ಆರ್.ನಾರಾಯಣನ್ ಹಾಗೂ ಶಿವಸೇನೆ ಬೆಂಬಲದಿಂದ ಟಿ.ಎನ್.ಶೇಷನ್ ಸ್ಪರ್ಧೆಯ ಕಣದಲ್ಲಿದ್ದಾರೆ.

ಇಲ್ಲಿ ವಿಶೇಷವಾಗಿ ಹೇಳಬೇಕಾಗಿರುವುದು ಬಿಜೆಪಿಯ ನಿಲುವಿನ ಬಗ್ಗೆ. ಮಹಾರಾಷ್ಟ್ರದ ಶಿವಸೇನೆ ಶೇಷನ್‌ರನ್ನು ಬೆಂಬಲಿಸುವ ಕಾರಣದಿಂದಾಗಿ ಬಿಜೆಪಿಯು ಟಿ.ಎನ್.ಶೇಷನ್‌ಗೆ ಬೆಂಬಲ ಕೊಡುತ್ತದೆ ಎಂದು ಹಲವರು ಭಾವಿಸಿದ್ದರು. ಆದರೆ ಅದು ಅಷ್ಟು ಸರಳವಲ್ಲ. ಮೇಲ್ಜಾತಿಯವರ ಮುಖಂಡತ್ವದ ಪಕ್ಷವೆಂಬ ಹಣೆಪಟ್ಟಿ ಹೊತ್ತಿರುವ ಬಿಜೆಪಿ ಕೆ.ಆರ್.ನಾರಾಯಣನ್ ರವರನ್ನು ಬೆಂಬಲಿಸುವುದರಿಂದಾಗಿ ಹಿಂದುಳಿದ ಸಮುದಾಯಗಳ ವಿಶ್ವಾಸ ಗಳಿಸಬಹುದೆಂದು ಭಾವಿಸಿದಂತಿದೆ. ಆದರೆ, ಸಂಯುಕ್ತ ರಂಗ ಕಾಂಗ್ರೆಸ್ ಸೇರಿ ಕೆ.ಆರ್. ನಾರಾಯಣನ್ ರನ್ನು ಅಭ್ಯರ್ಥಿಯಾಗಿ ಆಯ್ಕೆ ಮಾಡಿ, ನಾಮಪತ್ರ ಸಲ್ಲಿಸಿದಾಗ ಬಿಜೆಪಿ ಜತೆ ಚರ್ಚಿಸಿಲ್ಲ ಹಾಗೂ ಆಲೋಚಿಸಿಲ್ಲವೆಂಬ ಕೊರಗು ಅವರಿಗಿದೆ.

ಇದುವರೆಗೂ ಬಿಜೆಪಿ ಭಾವಿಸಿ ಕೊಂಡಿದ್ದ ಉಪರಾಷ್ಟ್ರಪತಿ ಸ್ಥಾನಕ್ಕಾಗಿ ಚೌಕಾಸಿ ಮಾಡಬಹುದೆಂಬ ಲೆಕ್ಕಾಚಾರ ತಲೆಕೆಳಗಾಗುತ್ತದೆ. ಬಿಜೆಪಿ ಜತೆ ಚರ್ಚಿಸದೇ ಸಂಯುಕ್ತ ರಂಗ ಮತ್ತು ಕಾಂಗ್ರೆಸ್ ಕೆ.ಆರ್. ನಾರಾಯಣನ್‌ರನ್ನು ಆಯ್ಕೆ ಮಾಡಿದ ರೀತಿಯಲ್ಲೆ ಉಪರಾಷ್ಟ್ರಪತಿ ಸ್ಥಾನಕ್ಕೆ ಒಬ್ಬರನ್ನು ಆಯ್ಕೆ ಮಾಡಬಹುದಾಗಿದೆ. ಈ ಸನ್ನಿವೇಶದಲ್ಲಿ ಬಿಜೆಪಿ ನಿಲುವೇನು ಎಂದು ಹೇಳಲು ಸಾಧ್ಯವಿಲ್ಲ. ಗೆಲ್ಲುವ ಅಭ್ಯರ್ಥಿ ನಾರಾಯಣನ್ ಅವರಿಗೆ ಬೆಂಬಲ ನೀಡುವ ನಿರ್ಣಯವನ್ನು ಅದು ತಡವಾಗಿ ಪ್ರಕಟಿಸಿದೆ. ಇದೇ ಆಧಾರದಲ್ಲಿ ಉಪರಾಷ್ಟ್ರಪತಿ ಸ್ಥಾನಕ್ಕೆ ಸಂಯುಕ್ತ ರಂಗ ಹಾಗೂ ಕಾಂಗ್ರೆಸ್ ನಡುವೆ ಸ್ಪರ್ಧೆ ನಡೆಯುತ್ತದೆಯೇ? ಅದನ್ನು ಮುಂದೆ ನೋಡಬಹುದಾಗಿದೆ. ಈಗಲೇ ಏನನ್ನೂ ಹೇಳಲು ಬಾರದು.

ಆದರೆ ಕಳೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಡಾ.. ಶಂಕರ ದಯಾಳ್ ಶರ್ಮ ಹಾಗೂ ಕೆ.ಆರ್.ನಾರಾಯಣನ್‌ರವರುಗಳು ರಾಷ್ಟ್ರಪತಿ ಹಾಗೂ ಉಪರಾಷ್ಟ್ರಪತಿ ಸ್ಥಾನಗಳಿಗೆ ಅಭ್ಯರ್ಥಿಗಳಾಗಿ ಸೂಚಿಸಲ್ಪಟ್ಟಾಗ ಎಡ ಪಕ್ಷಗಳು ರಾಷ್ಟ್ರಾಧ್ಯಕ್ಷರ ಹಾಗೂ ಉಪಾಧ್ಯಕ್ಷರ ಸ್ಥಾನ ಅಲಂಕರಿಸುವವರಿಗೆ ಕೆಲವೊಂದು ಅರ್ಹತೆ ಇರಬೇಕೆಂದು ಪ್ರತಿಪಾದಿಸಿದ್ದವು. ರಾಷ್ಟ್ರೀಯ ಐಕ್ಯತೆ, ಜಾತ್ಯಾತೀತತೆ ಇತ್ಯಾದಿ ಮೌಲ್ಯಗಳನ್ನು ರಕ್ಷಿಸುವ, ಛಿದ್ರಕಾರಿ ಶಕ್ತಿಗಳನ್ನು ಖಡಾಖಂಡಿತವಾಗಿ ವಿರೋಧಿಸುವವರು ಅಧ್ಯಕ್ಷರು, ಉಪಾಧ್ಯಕ್ಷರೂ ಆಗಬೇಕೆಂಬ ಮಾನದಂಡ ಮುಂದಿಟ್ಟಿತ್ತು.

ಆ ಆಧಾರದಲ್ಲೇ ಶರ್ಮ ರಾಷ್ಟ್ರಪತಿಗಳಾಗಿ, ನಾರಾಯಣನ್ ಉಪರಾಷ್ಟ್ರಪತಿಗಳಾಗಿ ಆಯ್ಕೆಯಾಗಿದ್ದರು. ಈಗಲೂ ಅದೇ ಮಾನದಂಡ ಅನುಸರಿಸಿ ರಾಷ್ಟ್ರಪತಿ ಸ್ಥಾನಕ್ಕೆ ಕೆ.ಆರ್.ನಾರಾಯಣನ್‌ರನ್ನು ಸಂಯುಕ್ತ ರಂಗ ಮತ್ತು ಕಾಂಗ್ರೆಸ್ ಬೆಂಬಲಿಸುತ್ತಿವೆ. ಅದೇ ಅರ್ಹತೆ ಇರುವಂತಹವರೇ ಉಪರಾಷ್ಟ್ರಪತಿಯ ಸ್ಥಾನಕ್ಕೆ ಆಯ್ಕೆಗೊಳ್ಳುತ್ತಾರೆಂದು ನಿರೀಕ್ಷಿಸಬಹುದಾಗಿದೆ.

ಏನೇ ಆಗಲಿ, ರಾಷ್ಟ್ರಪತಿ ಪದವಿ ರೀತಿಯಲ್ಲೇ ಉಪರಾಷ್ಟ್ರಪತಿ ಸ್ಥಾನದ ವಿಷಯದಲ್ಲೂ ಸಂಯುಕ್ತ ರಂಗ ಮತ್ತು ಕಾಂಗ್ರೆಸ್ ಇಬ್ಬರಿಗೂ ಸ್ವೀಕೃತವಾಗುವಂತಹ ಒಬ್ಬ ಅಭ್ಯರ್ಥಿಯನ್ನು ಕಂಡುಕೊಳ್ಳಬಹುದಾಗಿದೆ. ಹಾಗೆಯೇ ಬಿಜೆಪಿ ತಂತ್ರ ಹುಸಿಯಾಗಬಹುದೆಂಬುವುದು ನನ್ನ ನಿರೀಕ್ಷೆ. ಜಾತ್ಯಾತೀತ ತತ್ವಕ್ಕೆ ಬದ್ಧವಾದ ರಾಷ್ಟ್ರದ ಮೌಲ್ಯಗಳನ್ನು ಮಾರಾಟದ ಸರಕಾಗಿ ಮಾರ್ಪಾಟು ಮಾಡಲು ಸಾಧ್ಯವಿಲ್ಲ. ಮೌಲ್ಯಗಳನ್ನು ಸಂಪೂರ್ಣವಾಗಿ ವಿರೋಧಿಸುವಂತಹ ಬಿಜೆಪಿ ಸೇರಿದಂತೆ ಇತರ ಶಕ್ತಿಗಳ ಜತೆ ಒಂದು ಒಡಂಬಡಿಕೆ ಮಾಡಲು ಶುದ್ಧ ರಾಷ್ಟ್ರೀಯವಾದಿಗಳಿಗಾಗಲೀ, ಮಾರ್ಕ್ಸ್‌ವಾದಿ-ಲೆನಿನ್‌ವಾದಿಗಳಿಗಾಗಲೀ ಸಾಧ್ಯ ವಾಗುವುದಿಲ್ಲ.

ಆದ್ದರಿಂದ 11 ನೇ ಲೋಕಸಭಾ ಚುನಾವಣೆ ನಡೆಯುತ್ತಿದ್ದಾಗ ಮತ್ತು ನಂತರವೂ ಕಾಂಗ್ರೆಸ್‌ಅನ್ನು ಅಧಿಕಾರದಿಂದ ಪದಚ್ಯುತಿಗೊಳಿಸುವುದು. ಬಿಜೆಪಿ ಅಧಿಕಾರಕ್ಕೆ ಬರದಂತೆ ತಡೆಯುವುದು. ಈ ಎರಡು ಗುರಿ ಇಟ್ಟುಕೊಂಡೆ ಸಂಯುಕ್ತ ರಂಗ ಸರಕಾರ ರೂಪುಗೊಂಡಿದ್ದು. ಹಾಗೂ ಅದರ ಸರಕಾರಕ್ಕೆ ಕಾಂಗ್ರೆಸ್(ಐ) ಬೆಂಬಲ ಸಿಕ್ಕಿದ್ದು. ಮತ್ತು ಈ ಸರಕಾರವನ್ನು ಪದಚ್ಯುತಿ ಗೊಳಿಸಲು ಕಾಂಗ್ರೆಸ್‌ನ ಒಂದು ಗುಂಪು ಯತ್ನಿಸಿದರೂ ಆ ಯತ್ನವನ್ನು ವಿಫಲಗೊಳಿಸಲು ಸಾಧ್ಯವಾದದ್ದು. ಅದರಂತೆ ಮಾಜಿ ಪ್ರಧಾನಿ ದೇವೇಗೌಡರು ಸಂಯುಕ್ತ ರಂಗದ ಅಧ್ಯಕ್ಷರಾಗಿಯೂ, ಗುಜ್ರಾಲ್ ಪ್ರಧಾನಿ ಆಗಿಯೂ ಆಯ್ಕೆಗೊಂಡು ಸಂಯುಕ್ತ ರಂಗ ಹಾಗೂ ಜಾತ್ಯಾತೀತತೆಯನ್ನು ಬಲಗೊಳಿಸಲು ಸಾಧ್ಯವಾಯಿತು.

ಈ ಸನ್ನಿವೇಶದಲ್ಲಿ ಬಿಜೆಪಿ ಲೋಕಸಭೆಯಲ್ಲಿ ಅತಿ ಹೆಚ್ಚು ಸದಸ್ಯರಿರುವ ಪಕ್ಷವೆಂದು ಉಪಾಧ್ಯಕ್ಷರ ಸ್ಥಾನಕ್ಕೆ ತಮ್ಮದೇ ಆದ ಒಬ್ಬ ಅಭ್ಯರ್ಥಿಯನ್ನು ಚುನಾಯಿಸುವ ಇರಾದೆಯಿಂದಲೇ ರಾಷ್ಟ್ರಪತಿ ಸ್ಥಾನದ ಅಭ್ಯರ್ಥಿ ಆಯ್ಕೆಯಲ್ಲಿ ಸಕಾಲದಲ್ಲಿ ನಿಲುವು ತೆಗೆದುಕೊಳ್ಳದೆ ವಿಳಂಬ ಮಾಡಿತು. ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಜಾತ್ಯಾತೀತ ರಾಜಕೀಯ ಪಕ್ಷಗಳ ಜತೆ ಗುರುತಿಸಿಕೊಳ್ಳಲು ಅವರಿಗೆ ಒಪ್ಪಿಗೆಯಾಗುವಂತೆ ಕಠಿಣ ಶ್ರಮವನ್ನು ಬಿಜೆಪಿ ಮಾಡತೊಡಗಿದೆ.

ಟಿ.ಎನ್.ಶೇಷನ್ ಮತ್ತು ಕೆ.ಆರ್. ನಾರಾಯಣನ್ ನಡುವಿನ ಸ್ಪರ್ಧೆ ಛಿದ್ರಕಾರಿ ಶಕ್ತಿಗಳೆದುರಾಗಿ ರಾಷ್ಟ್ರದ ಐಕ್ಯ ಶಕ್ತಿಗಳ ನಡುವೆ ನಡೆಯುವ ಒಂದು ತೀಕ್ಷ್ಣ ಹೋರಾಟವಾಗಿದೆ. ಇದರಿಂದಾಗುವ ಜಯ-ಅಪಜಯ ಜಾತ್ಯಾತೀತ ಮತ್ತು ಛಿದ್ರಕಾರಿ ಶಕ್ತಿಗಳ ನಡುವಿನ ಸಮರದ ಮುಖ್ಯ ಪ್ರಶ್ನೆಯಾಗಿದೆ.


ಶೇಷನ್‌ಗೆ ಬೆಂಬಲ ಕೊಡುವ ಶಿವಸೇನೆ ಮರಾಠಿಗರ ಪರ ಮಹಾರಾಷ್ಟ್ರೇತರ ವಿರುದ್ಧ, ದಕ್ಷಿಣ ಭಾರತ ರಾಜ್ಯಗಳ ಜನತೆಯ ವಿರುದ್ಧ ರೂಪುಗೊಂಡಿರುವ ಪಕ್ಷ. ಅವರ ದುಷ್ಟ ಆಕ್ರಮಣಗಳಿಗೆ ಒಳಗಾಗಿರುವ ಒಂದು ಜನವಿಭಾಗಗಳಿಗೆದುರಾಗಿ ಶಿವಸೇನೆಗೆ ಬೆಂಬಲ ಕೊಡುವುದು ಬಿಜೆಪಿಯ ಮುಖಂಡತ್ವದಲ್ಲಿರುವ ಹಿಂದುತ್ವ ಶಕ್ತಿಗಳ ರಂಗದ ಪ್ರಧಾನ ನಿಲುವು. ಈ ರಂಗದ ಪ್ರಮುಖ ಘಟಕವಾಗಿದೆ ಶಿವಸೇನೆ. ಮಹಾ ರಾಷ್ಟ್ರದವರಿಗೆದುರಾಗಿ ಅಲ್ಲಿ ಜೀವನ ನಡೆಸುತ್ತಿರುವಂತಹ ಬೇರೆ ಬೇರೆ ರಾಜ್ಯಗಳ ಜನತೆ ವಿರುದ್ಧ ಆಕ್ರಮಣ ನಡೆಸಿ ಅದರಿಂದ ತರಬೇತಿ ಪಡೆದವರು. ಇನ್ನೂ ವಿಶಾಲವಾಗಿ ಮುಸ್ಲಿಂ ವಿರೋಧ ವನ್ನು ಹರಡಿಸಿದ ಶಿವಸೇನೆಯವರು ಬಾಬರಿ ಮಸೀದಿ ಒಡೆಯಲು ನೇತೃತ್ವ ನೀಡುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಅಂತಹ ಸಂಘಟನೆಯ ಬೆಂಬಲದಿಂದ ಸ್ಪರ್ಧಿಸಿರುವ ಟಿ.ಎನ್.ಶೇಷನ್‌ಗೆ ಎದುರಾಗಿ ಅಣಿನೆರೆ ಸಲು ಭಾರತದ ಐಕ್ಯತೆಯ ಬಗ್ಗೆ ನಿಷ್ಠೆ, ಕಾಳಜಿ ಇರುವಂತಹ ಎಲ್ಲಾ ದೇಶ ಪ್ರೇಮಿ ಗಳು ಒಂದಾಗಬೇಕಿದೆ.

ಈ ಚುನಾವಣೆಯಲ್ಲಿ ಔಪಚಾರಿಕವಾಗಿ ಶೇಷನ್‌ಗೆ ಬೆಂಬಲ ನೀಡಿದ್ದರೂ, ಇಲ್ಲದಿದ್ದರೂ ಬಿಜೆಪಿ ಶಿವಸೇನೆ ರೀತಿಯಲ್ಲೇ ಮುಸ್ಲಿಂ ಸಮುದಾಯಗಳ ಬಗ್ಗೆ ಮಾತ್ರವಲ್ಲ, 'ಕಮ್ಯುನಿಸ್ಟರೂ ವಿದೇಶಿಯರು' ಎಂಬುವುದೂ ಅವರ ಮೂಲ ಭೂತ ತತ್ವ. ಆದ್ದರಿಂದ ವಿದೇಶಿಯರ ವಿರುದ್ಧದ ಆಕ್ರಮಣಗಳಿಗೆ ನೇತೃತ್ವ ಕೊಡುವಂತಹ ಆರ್.ಎಸ್.ಎಸ್ ನ ಮುಖಂಡರು ಬಿಜೆಪಿಗೆ ಅತ್ಯಂತ ಆತ್ಮೀಯ ನಾಯಕರಾಗಿರುವುದು.

ಹಾಗೆಯೇ ಶೇಷನ್‌ಗೆ ಔಪಚಾರಿಕವಾಗಿ ಬೆಂಬಲ ಕೊಡುವಂತಹ ಶಿವಸೇನೆಯೂ, ಈ ಬೆಂಬಲದ ವಿಷಯವಾಗಿ ಒಂದು ನಿಲುವು ತೆಗೆದುಕೊಳ್ಳದ ಬಿಜೆಪಿಯೂ ಒಂದೇ ರೀತಿಯಲ್ಲಿ ದೇಶದ ಐಕ್ಯತೆಗೆ ಮಾರಕವಾಗಿದ್ದಾರೆ. ಯಾವ ಜಾತಿ-ಪಂಗಡಕ್ಕೆ ಸೇರಿದವರೇ ಆಗಲಿ, ಯಾವ ಧರ್ಮದಲ್ಲೇ ನಂಬಿಕೆಯುಳ್ಳವರಾಗಲಿ ಯಾವ ರಾಜ್ಯದಲ್ಲೇ ವಾಸಿಸುವವರಾಗಲಿ, ಭಾರತದಲ್ಲಿ ಜೀವನ ನಡೆಸುವವರೆಲ್ಲ ಭಾರತೀಯರೆಂಬ ರಾಷ್ಟ್ರ ಸಂಕಲ್ಪವೇ ಈ ಚುನಾವಣೆಯಲ್ಲಿ ಬೆಳೆದು ಬರುತ್ತಿರುವುದು.

ಸಂಗ್ರಹ ಇ.ಕೆ.ಎನ್.ರಾಜನ್
ಜಯರಾಮು

ವಿಷ್ಯನ್ ಏಜ್ ಪತ್ರಿಕೆಯಲ್ಲಿ ಮಾಯಾ ಕಾಮತ್



ಕ್ವಿನಾಕ್ರಿನ್ ಸಂತಾನ ಹರಣ ವಿಧಾನ ಬಾಂಗ್ಲಾ ದೇಶದ ವೈದ್ಯರ ಭಯಾನಕ ಅನುಭವ

ಜನಸಂಖ್ಯಾ ಹತೋಟಿಯ ಹೆಸರಲ್ಲಿ ಮಹಿಳೆಯರ ಆರೋಗ್ಯದೊಂದಿಗೆ ಚೆಲ್ಲಾಟವಾಡುವ ಕೆಲವು ದಿಲ್ಲಿ ವೈದ್ಯರುಗಳ(ಇದರಲ್ಲಿ ಒಬ್ಬ ಮಾಜಿ ಬಿಜೆಪಿ ಸಂಸತ್ ಸದಸ್ಯರೂ ಸೇರಿದ್ದಾರೆ) 'ಪರೀಕ್ಷಣೆಗಳ ವಿರುದ್ಧ ಮಹಿಳಾ ಸಂಘಟನೆಗಳ ಪ್ರತಿಭಟನೆಯ ಸುದ್ದಿಯನ್ನು ನೀವು ಈಗಾಗಲೇ 'ಐಕ್ಯರಂಗ'ದಲ್ಲಿ ಓದಿರುವಿರಿ. ಆದರೆ ಈಗಲೂ ಕೆಲವರು ಇದರಲ್ಲಿ ತಪ್ಪೇನಿಲ್ಲ, ಸಾಮಾಜಿಕ ಸಮಸ್ಯೆಯೊಂದಕ್ಕೆ ಅವರು ಪರಿಹಾರದ 'ಪರೀಕ್ಷಣೆ' ನಡೆಸುತ್ತಿದ್ದಾರೆ ಎಂದು ಸಮರ್ಥಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಇಂತಹವರು ಬಾಂಗ್ಲಾ ದೇಶದ ಪ್ರಖ್ಯಾತ ವೈದ್ಯರೊಬ್ಬರ ಅನುಭವವನ್ನು ಗಮನಿಸುವುದೊಳ್ಳೆಯದು.

ಭಾರತದಲ್ಲಿ ಮಹಿಳಾ ಸಂತಾನ ನಿರೋಧಕ್ಕೆ ಕ್ವಿನಾಕ್ರಿನ್ ವಿಧಾನದ ಬಳಕೆ ಹರಡುತ್ತಿರುವ ಬಗ್ಗೆ ಎದ್ದ ಆತಂಕದಿಂದ ದಿಲ್ಲಿಯ ಜನವಾದಿ ಮಹಿಳಾ ಸಮಿತಿ ಮೇ 10 ರಂದು ಒಂದು ಚರ್ಚಾ ಗೋಷ್ಠಿ ಯನ್ನು ಏರ್ಪಡಿಸಿತ್ತು. ಜವಹರ ಲಾಲ್ ನೆಹರೂ ವಿಶ್ವವಿದ್ಯಾಲಯದ ಸಾಮಾಜಿಕ ಔಷಧಿ ಮತ್ತು ಸಮುದಾಯ ಆರೋಗ್ಯ ಕೇಂದ್ರದ ಡಾ.. ಮೋಹನ್ ರಾವ್ ರವರು ಇದರಲ್ಲಿ ಭಾಗವಹಿಸಿದ್ದರು. ಜಾಮಿಯಾ ಮಿಲಿಯಾ ಇಸ್ಲಾಮಿಯ ಕಾಲೇಜಿನ ಸಮೂಹ ಸಂಪರ್ಕ ವಿಭಾಗ ನವದೆಹಲಿ ಯಲ್ಲಿ ಈ ಕುರಿತಂತೆ ನಡೆಯುತ್ತಿರುವ ಕಾನೂನು ಬಾಹಿರ ಪರೀಕ್ಷಣೆಗಳ ಬಗ್ಗೆ ತಯಾರಿಸಿದ ಒಂದು 'ಯೆಲ್ಲೋ ಹೇರ್ಝ್'(ಹಳದಿ ಮಂಕು) ಎಂಬ ಹೆಸರಿನ ಡಾಕ್ಯುಮೆಂಟರಿ ಯನ್ನು ತೋರಿಸಲಾಯಿತು. ನಂತರ ಬಾಂಗ್ಲಾ ದೇಶದ ಯುಗಾಂತಕಾರಿಯೆನಿಸುವ ಔಷಧಿ ನೀತಿಯ ಶಿಲ್ಪಿ ಡಾ. ಝುಫರುಲ್ಲಾ ಚೌಧರಿ ಈ ಕ್ವಿನಾಕ್ರಿನ್ ಸಂತಾನ ನಿರೋಧ ವಿಧಾನ ಕುರಿತಂತೆ ತನ್ನ ಅನುಭವವನ್ನು ಹಂಚಿಕೊಂಡರು.

ಇಪ್ಪತ್ತು ವರ್ಷಗಳ ಹಿಂದೆ ಈ ವಿವಾದಾಸ್ಪದ ಸಂತಾನಹರಣ ವಿಧಾನವನ್ನು ಆರಂಭಿಸಿದ ಅಮೆರಿಕಾದ ಡಾ. ಜೈಮೆ ಝಿಪ್ಪರ್ ಡಾ. ಝುಫರುಲ್ಲಾರವನ್ನು ಸಂಪರ್ಕಿಸಿದರು. ಬಾಂಗ್ಲಾದೇಶದಲ್ಲಿ ಇದರ ಪರೀಕ್ಷಣೆ ನಡೆಸಬೇಕು ಎಂದು ಕೇಳಿ ಕೊಂಡರು. ಡಾ ಝಿಪ್ಪರ್, ಡಾ. ಕೆಸ್ಸರ್ ಮುಂತಾದವರ ಪ್ರಬಂಧಗಳನ್ನು ನೋಡಿ ಇವರೆಲ್ಲಾ ಈ ರಂಗದ ಅತಿರಥ-ಮಹಾ ರಥರು ಎಂದು ಭಾವಿಸಿದ್ದ ಡಾ. ಝುಫರುಲ್ಲಾ ಇದಕ್ಕೆ ಒಪ್ಪಿದರು. ಈ ವಿಧಾನ ಮಹಿಳೆಯರಿಗೆ ಸಂತಾನವೃದ್ಧಿಯ ಆಯ್ಕೆ ನೀಡಿ ಅವರನ್ನು ಅಧಿಕಾರ ಸಂಪನ್ನಗೊಳಿಸುವುದೆಂದು ತಾನು ಆಗ ನಂಬಿದು ದಾಗಿಯೂ ಅವರು ಈಗ ಹೇಳುತ್ತಾರೆ. ಅಲ್ಲದೆ ಇದೊಂದು ಬಹಳ ಅಗ್ಗದ ವಿಧಾನ ಆಗಿತ್ತು.

ಡಾ. ಝುಫರುಲ್ಲಾ ಈ ಪರೀಕ್ಷಣೆಗೆ ಬಾಂಗ್ಲಾದೇಶ ವೈದ್ಯಕೀಯ ಮಂಡಳಿಯ ಅನುಮತಿ ಪಡೆದರು. ನಂತರ ಬಹಳ ಜಾಗರೂಕತೆಯಿಂದ ಈ ವಿಧಾನದ ಸಾಧಕ-ಬಾಧಕಗಳನ್ನೆಲ್ಲಾ ತಿಳಿಹೇಳಿದ ಮೇಲೆ ಈ ಪರೀಕ್ಷಣೆಗೆ ಒಪ್ಪಿದ ಒಬ್ಬ 30 ವರ್ಷದ ಮಹಿಳೆಯನ್ನು ಆರಿಸಲಾಯಿತು. ಆಕೆ ಮೂರು ಮಕ್ಕಳಿದ್ದ ಆರೋಗ್ಯವಂತ ಮಹಿಳೆ. ಆಕೆಯ ಆರೋಗ್ಯದ ಬಗ್ಗೆ ಎಲ್ಲಾ ಲ್ಯಾಬೋರೇಟರಿ ಪರೀಕ್ಷಣೆಗಳನ್ನು ನಡೆಸಿದರು. ಈ ವಿಧಾನವನ್ನು ಡಾ. ಝುಫರುಲ್ಲಾ ಆಕೆಯ ಮೇಲೆ 'ಪೂರ್ಣ ಸುಸಜ್ಜಿತವಾದ ಶಸ್ತ್ರಚಿಕಿತ್ಸೆ ಕೊಠಡಿಯಲ್ಲೇ ನಡೆಸಿದರು. ಡಾ. ಕೆಸ್ಸರ್ ಔಷಧಿ ಕೊಟ್ಟರು.

ಡಾ. ಝುಫರುಲ್ಲಾರನ್ನು ನಡುಗಿಸಿದ ವಿಷಯವೆಂದರೆ ಕ್ವಿನಾಕ್ರಿನ್ ನೀಡಿದ ಕ್ಷಣವೇ ಆಕೆ ಅಸುನೀಗಿದಳು. ಆಕೆಯನ್ನು ಉಳಿಸುವ ಪ್ರಯತ್ನಗಳೆಲ್ಲವೂ ವಿಫಲಗೊಂಡವು. ತಕ್ಷಣ ಇದನ್ನು ಡಾ.ಕೆಸ್ಸರ್ ರವರಿಗೆ ತಿಳಿಸಲಾಯಿತು. ಆತನಿಂದ ಉತ್ತರವೇ ಇಲ್ಲ. ಇಷ್ಟೇ ಅಲ್ಲ ನಂತರದ ತನ್ನ ಪ್ರಬಂಧಗಳಲ್ಲಿ ಎಲ್ಲಿಯೂ ಈ ಘಟನೆಯ ಬಗ್ಗೆ ಆತ ಪ್ರಸ್ತಾಪವನ್ನೂ ಮಾಡಲಿಲ್ಲ. ಇದು ವಿಜ್ಞಾನಿಯೊಬ್ಬನಿಗೆ ಸಲ್ಲದ ನಿಲುವು ಎಂದಾಗ ಕಣ್ತಪ್ಪಿನಿಂದ ಅದನ್ನು ತಿಳಿಸಲಿಲ್ಲ ಎಂದರಂತೆ.

ಇದು 20 ವರ್ಷಗಳ ಹಿಂದಿನ ಮಾತು. ಈ ನಡುವೆ ವೈದ್ಯಕೀಯ ವಿಜ್ಞಾನ ಅಪಾರ ಪ್ರಗತಿ ಸಾಧಿಸಿದೆ ಎಂದು ಈ ವಿಧಾನದ ಅಮೆರಿಕನ್ ಪ್ರಾಯೋಜಕರು ಮತ್ತು ಅವರ ಭಾರತೀಯ ಶಿಷ್ಯರುಗಳು ವಾದಿಸಬಹುದು. ಆದರೆ ಭಾರತದಲ್ಲಿಯೂ ಇದನ್ನು ಪರೀಕ್ಷಿಸುತ್ತಿರುವ ರೀತಿ 20 ವರ್ಷಗಳ ಹಿಂದಿನ ರೀತಿಯಲ್ಲೇ ಇದೆ. ಡಾ. ಝುಫರುಲ್ಲಾ ತನ್ನ ದೇಶದ ವೈದ್ಯಕೀಯ ಮಂಡಳಿಯ ಅನುಮತಿ ಪಡೆದಿದ್ದರು ಹಾಗೂ ಪರೀಕ್ಷಣೆಯನ್ನು ವೈದ್ಯರ ಕೊಠಡಿಗಳಲ್ಲಿ ಮಾಡಿರಲಿಲ್ಲ. ಸುಸಜ್ಜಿತ ಶಸ್ತ್ರಚಿಕಿತ್ಸೆ ಕೊಠಡಿಯಲ್ಲಿ ಮಾಡಿದ್ದರು. ಆದರೆ ಭಾರತದಲ್ಲಿ ಈಗ ನಡೆಯುತ್ತಿರುವ 'ಪರೀಕ್ಷಣೆ'ಗಳು ಇವೆರಡನ್ನೂ ಮಾಡುತ್ತಿಲ್ಲ ಎನ್ನುತ್ತಾರೆ ಡಾ. ಮೋಹನ್ ರಾವ್

ಆದ್ದರಿಂದ ಭಾರತ ಸರಕಾರ ತಕ್ಷಣ ಈ 'ಪರೀಕ್ಷಣೆ'ಗಳನ್ನು ನಿಲ್ಲಿಸಬೇಕು. ಭಾರತದ ಔಷಧಿ ನಿಯಂತ್ರಕರ ಅನುಮತಿಯಿಲ್ಲದೆ ಈ ಔಷಧಿಯನ್ನು ಭಾರತದಲ್ಲಿ ವಿತರಿಸುತ್ತಿರುವ ವಿತರಕರ ಮೇಲೆ ಹಾಗೂ ಈ 'ಪರೀಕ್ಷಣೆ'ಗಳನ್ನು ನಡೆಸುತ್ತಿರುವ ವೈದ್ಯರುಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಡಾ.ಮೋಹನ್ ರಾವ್ ಆಗ್ರಹಪಡಿಸಿದ್ದಾರೆ.

ಚಿದಂಬರಂರವರ ಕಪ್ಪು ಹಣವನ್ನು ಹೊರ ತೆಗೆಯುವೆನೆನ್ನುವ ಸ್ವಯಂ ಘೋಷಣಾ ಯೋಜನೆಯ ಬಗ್ಗೆ ಟೈಂಸ್ ಆಫ್ ಇಂಡಿಯಾದಲ್ಲಿ ಆರ್.ಕೆ.ಲಕ್ಷ್ಮಣ್ ಅವರ ವ್ಯಂಗ್ಯ



KRNM/BGS-405 MAG(2) PRBDECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್, ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27, ಫೋನ್: 2236462, ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು-9, ಫೋನ್:2200783 ಮುದ್ರಣ : ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ, ಬೆಂಗಳೂರು